
# ಅಪರಂಜಿ

ತಿಳಿನಗೆಯ ಕಾರಂಜಿ

ಮೇ 2017





# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 34
ಸಂಚಿಕೆ – 7
ಮೇ – 2017

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ

## ಈ ಸಂಚಿಕೆಯಲ್ಲಿ .....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಅನಾಯಾಸವಾಗಿ.... | **ಎಂ.ಎಸ್. ರಘುನಾಥ್** | 6 |
| ನಿಮಗೆ ಕನ್‌ಸಲ್ಟೇಶನ್..... | **ಸಿ.ಆರ್. ಸತ್ಯ** | 8 |
| ಡೆವಲಪರ್ಸ್‌ರ ಮೆಗಾ.... | **ಇ.ಆರ್. ರಾಮಚಂದ್ರನ್** | 9 |
| ಅಪರಂಜಿ ಥೇಟ್.... | **ಕುಮುದಾ ಪುರುಷೋತ್ತಮ್** | 13 |
| ಆಮಸೂತ್ರ | **ನಳಿನಿ ಸೂರ್ಯಪ್ರಕಾಶ್** | 15 |
| ಪಂಚ್ ಪದ್ಯಗಳು | **ಎಚ್. ಡುಂಡಿರಾಜ್** | 17 |
| ಚಿಗುರಿದ ಕನಸು | **ಎಚ್. ಗೋಪಾಲಕೃಷ್ಣ** | 18 |
| ಅನುಕೂಲಕರ ಚಾಚಬೇಕು | **ವೈ.ವಿ. ಗುಂಡೂರಾವ್** | 22 |
| ವರ್ಷಕ್ಕೊಂದು ದಿನ | **ಜಿ.ವಿ. ನಿರ್ಮಲ** | 24 |
| ತುಂತುರು | **ದಂನಾಳ** | 27 |
| ಚುಟುಕು ಮೋಹ | **ಗಾಯತ್ರಿ ಮೂರ್ತಿ** | 28 |
| ವ್ಯಂಗ್ಯ ಮೆಲುಕು | **ಪ್ರಕಾಶ್ ಶೆಟ್ಟಿ** | 32 |
| ಕನ್ನಡ ಗಿನ್ನಡ, ಮೂಲಂಗಿ... | **ಎಚ್.ಕೆ. ನಂಜುಂಡ ಸ್ವಾಮಿ** | 33 |
| ನಹಿ ಜ್ಞಾನೇನ ಸದೃಶಂ... | **ಎಚ್.ಆರ್. ಹನುಮಂತ ರಾವ್** | 37 |

**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



''ಟ್ರಾವೆಲ್ ವಿತ್ ದಿ ಸ್ಟಾರ್ಸ್'' – ಬಸ್ ಮೇಲಿನ ಜಾಹೀರಾತು

***● ಅಪರಂಜಿ ನಡುಗಿದಳಂತೆ !!***

★★★

ಸಿರಿಯಾದ ಮೇಲೆ ಅಮೆರಿಕ ದಾಳಿ – ಸುದ್ದಿ

***● ವಿನಾಶಕಾಲೇ........ !!***

★★★

''ಇನ್‌ಫೋಸಿಸ್ ವೇತನ..........''

***● ಆಗಬಾರದು ಅನಿಕೇತನ !!***

★★★

ಕಪ್ಪು ಹಣ; ಸ್ವಿಡ್ಸರ್ಲೆಂಡ್‌ಗೆ ಭಾರತದ ಮನವಿ – ಪತ್ರಿಕೆ

***● ಅರಣ್ಯ ರೋದನ ಎಂದರೆ ಇದೇ !?***

★★★

ಕೆ.ಎಲ್. ರಾಹುಲ್‌ಗೆ ಭುಜ ಚಿಕಿತ್ಸೆ – ಕ್ರೀಡಾ ಸುದ್ದಿ

***● ಅವರ ಭುಜಬಲ ಹಿಂದಿರುಗಲಿ !!***

★★★

ಆ್ಯಂಟಿ – ರೋಮಿಯೋ ದಳಗಳ ರಚನೆಗೆ ಉತ್ತರ ಪ್ರದೇಶ – ಸುದ್ದಿ

***● ಪ್ರೋ-ಜೂಲಿಯಟ್ ಸಹ ?!***

★★★

''ಸಿಂಧುಗೆ ಸಿಹಿ, ಸೈನಾಗೆ ಕಹಿ'' – ಪತ್ರಿಕೆ

***● ಆಹಾ, ಶೀರ್ಷಿಕೆ ಹೀಗಿರಬೇಕು !!***

★★★

ಉತ್ತರ ಕೊರಿಯಾಕ್ಕೆ ಸೋತ ಭಾರತ – ಸುದ್ದಿ

***● ಹೆದರ ಬೇಡಿ, ಕ್ರೀಡಾ ಸುದ್ದಿ ಅಷ್ಟೆ!!***

★★★

## ನಮ್ಮ ನಿಮ್ಮಲ್ಲಿ

**ಮೊ**ನ್ನೆ ನಮ್ಮ ಆರ್‌ಸೀಬಿಯ ವಿರಾಟನ ಪಡೆಯ ಉತ್ತರ ಕುಮಾರರು ಕೊಲ್ಕೊತ್ತಾದ ಈಡನ್ ಗಾರ್ಡನ್ನಿನಲ್ಲಿ ತಮ್ಮ ಶೌರ್ಯ ಪ್ರತಾಪಗಳನ್ನು ಪ್ರದರ್ಶಿಸಿ ನಲವತ್ತೊಂಭತ್ತು ರನ್‌ಗಳನ್ನು ಪೇರಿಸಿದ್ದನ್ನು ನೋಡಿದಾಗಿನಿಂದ ಯಾಕೋ ಈ ಮ್ಯಾಚುಗಳನ್ನು ನೋಡುವ ಆಸಕ್ತಿಯೇ ಹೋಗಿಬಿಟ್ಟಿದೆ ರೀ. ಆದೂ ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು ಅನ್ನಿ. ಕ್ರೀಡಾ ವಿಷಯಗಳನ್ನು ಮರೆತು ಸ್ವಲ್ಪ ಪಾರಮಾರ್ಥಿಕ ಸಂಗತಿಗಳ ಕಡೆ ಗಮನ ಹರಿಸೋಣವೆಂದುಕೊಂಡು ಯೂ ಟ್ಯೂಬಿನಲ್ಲಿ ''ಡೇವಿಡ್ ಗಾಡ್‌ಮನ್'' ನ ಸಂದರ್ಶನವೊಂದನ್ನು ನೋಡತೊಡಗಿದೆ. ಈ ಕ್ಲಿಪ್ಪಿನ ಶೀರ್ಷಿಕೆಯೇ ವಿಚಿತ್ರ. ''ಬುದ್ಧ ಅಟ್ ದ ಗ್ಯಾಸ್ ಪಂಪ್'' ಎಂಬ ವೆಬ್‌ಸೈಟಿನವರು ನಡೆಸಿದ್ದ ಸಂದರ್ಶನವಾಗಿತ್ತು ಅದು. ಡೇವಿಡ್ ಗಾಡ್‌ಮನ್ ಯಾರು ಅಂತ ಮೊದಲು ಹೇಳಿಬಿಡುತ್ತೇನೆ. 1976ರಲ್ಲಿ ತಿರುವಣ್ಣಾಮಲೈಗೆ ಇಂಗ್ಲೆಂಡಿನಿಂದ ಬಂದು ಆಗಿನಿಂದ ಅಲ್ಲಿಯೇ ನೆಲೆಸಿರುವ ಈತ ಭಗವಾನ್ ರಮಣರ ಪರಮ ಭಕ್ತ. ಸಂದರ್ಶನ ಬಹು ಆಸಕ್ತಿ ಮೂಡಿಸುವಂತಿತ್ತು. ಪ್ರಶ್ನಿಸುತ್ತಿದ್ದ ಸಂದರ್ಶನಕಾರ, ಒಂದು ಹಂತದಲ್ಲಿ, ''ಗಾಂಧೀಜಿಯವರು ತಮ್ಮ ಜೀವಿತದಲ್ಲಿ ಎಂದಾದರೂ ರಮಣರನ್ನು ಭೇಟಿಯಾಗಿದ್ದರೇ? ಆ ಬಗ್ಗೆ ನಿಮ್ಮ ಬಳಿ ಮಾಹಿತಿಯೇನಾದರೂ ಇದೆಯೇ?'' ಎಂದು ಪ್ರಶ್ನಿಸಿದ. ಉತ್ತರಿಸುತ್ತಾ ಡೇವಿಡ್ ಹೀಗೆಂದರು. ''ರಮಣಾಶ್ರಮದಲ್ಲಿ ರಮಣರ ಶಿಷ್ಯನಾಗಿದ್ದ ಅಣ್ಣಾಮಲೈ ಸ್ವಾಮಿ ಹೇಳಿದ ಸಂಗತಿ ಇದು. ಅವನ ಮಾತಿನಲ್ಲೇ ಇದನ್ನು ಕೇಳಿ.'' ನಲವತ್ತೇಳನೆಯ ಇಸವಿಯಲ್ಲಿ ಒಮ್ಮೆ ಗಾಂಧೀಜಿ ತಿರುವಣ್ಣಾಮಲೈಗೆ ಬರುವ ಕಾರ್ಯಕ್ರಮವಿತ್ತು. ಅವರು ಬರುತ್ತಿದ್ದ ಜೀಪು ರಮಣಾಶ್ರಮದ ಮುಂದೆಯೇ ಹೋಗಬೇಕಾಗಿತ್ತು. ನಾನು ಆಶ್ರಮದ ಗೇಟಿನ ಬಳಿ ನಿಂತು ಜೀಪು ಬರುವುದನ್ನೇ ನಿರೀಕ್ಷಿಸುತ್ತಿದ್ದೆ. ಅನೇಕ ಆಶ್ರಮ ವಾಸಿಗಳು ನನ್ನೊಂದಿಗಿದ್ದರು. ಭಗವಾನರು ಎಂದಿನಂತೆ ಒಳಗೆ ಕುಳಿತಿದ್ದರು. ಸಾಧಾರಣ ವೇಗದಲ್ಲಿ ಬರುತ್ತಿದ್ದ ಜೀಪಿನ ವೇಗ ಆಶ್ರಮದ ಬಳಿ ಬರುತ್ತಿದ್ದಂತೆ ನಿಧಾನವಾಯಿತು. ನಾನು ಎರಡು ಕೈಗಳನ್ನೂ ಜೋಡಿಸಿ ಮೇಲೆತ್ತಿ ಗಾಂಧೀಜಿಗೆ ನಮಸ್ಕರಿಸಿದೆ. ಅವರೂ ನನಗೆ ಕೈ ಜೋಡಿಸಿ ಪ್ರತಿವಂದನೆ ಮಾಡಿದರು. ಅಷ್ಟರಲ್ಲಿ ಅವರೊಂದಿಗಿದ್ದ ರಾಜಾಜಿಯವರು ಸಭೆಗೆ ತಡವಾಗುತ್ತಿರುವುದರಿಂದ ಜೀಪನ್ನು ಬೇಗ ನಡೆಸುವಂತೆ ಚಾಲಕನನ್ನು ಅವಸರಿಸಿದರು. ಗಾಂಧೀಜಿಯವರ ಭಾಷಣದ ಸಭೆ ಆಶ್ರಮದ ಹತ್ತಿರವೇ ಇದ್ದುದರಿಂದ ನಾನೂ ಅಲ್ಲಿಗೆ ಹೋಗಿದ್ದೆ. ಸಭೆ ಮುಗಿದ ತಕ್ಷಣ ಗಾಂಧೀಜಿಯವರು ''ಐದು ನಿಮಿಷ ಆಶ್ರಮಕ್ಕೆ ಹೋಗಿ ರಮಣರನ್ನು ನೋಡಿಬರೋಣ ಅಂತ ರಾಜಾಜಿಯವರಿಗೆ ಸೂಚಿಸಿದರು. ಮುಂದಿನ ಸಭೆಗೆ ತಡವಾಗುವುದರಿಂದ ಅದು ಸಾಧ್ಯವಿಲ್ಲ ಎಂದು ರಾಜಾಜಿ ನಿರಾಕರಿಸಿದರು. ಈ ಮಾತುಕತೆಯಲ್ಲೇ ಐದುನಿಮಿಷಗಳು ಕಳೆದುಹೋಗಿದ್ದರಿಂದ ಗಾಂಧೀಜಿ ವಿಧಿಯಿಲ್ಲದೇ ರಮಣರ ದರ್ಶನವಿಲ್ಲದೇ ಮುಂದಿನ ಸಭೆಗೆ ತೆರಳಿದರು. ನಾನು ಆಶ್ರಮಕ್ಕೆ ಹಿಂತಿರುಗಿ ಭಗವಾನರಿಗೆ ಇದೆಲ್ಲವನ್ನೂ ತಿಳಿಸಿ, ಅವರೇಕೆ ಗಾಂಧೀಜಿಯವರನ್ನು ಆಶ್ರಮಕ್ಕೆ ಬರಲು ಬಿಡಲಿಲ್ಲ?'' ಎಂದು ಕೇಳಿದೆ. ರಮಣರು ''ಗಾಂಧೀಜಿ ಇಲ್ಲಿಗೆ ಬಂದಿದ್ದರೆ ಸಮಾಧಿಯಲ್ಲಿ ಕುಳಿತು ಇವತ್ತೆಲ್ಲಾ ಇಲ್ಲಿಂದ ಕದಲುತ್ತಿರಲಿಲ್ಲ. ಕಾಂಗ್ರೆಸ್ಸಿನವರ

ಕಾರ್ಯಕ್ರಮಗಳೆಲ್ಲಾ ಏರುಪೇರಾಗುತ್ತಿದ್ದವು'' ಎಂದು ನಗುತ್ತಾ ಹೇಳಿದರು. ಇಷ್ಟು ಹೇಳಿ ಡೇವಿಡ್ ಮದಾರಾಸಿನಲ್ಲಿ ಗಾಂಧೀಜಿಯವರು ತಂಗಿದ್ದಾಗ ನಡೆದ ಘಟನೆಯೊಂದನ್ನು ವಿವರಿಸಿದರು.

''ಮದ್ರಾಸಿನಲ್ಲಿ ಗಾಂಧೀಜಿಯವರ ಸಭೆಯೊಂದಕ್ಕೆ ರಮಣರ ಶಿಷ್ಯ ಪಾಪಾಜಿ ಹೋಗಿದ್ದರು. ಅದು ಹೇಗೋ ಅವರಿಬ್ಬರ ಪರಸ್ಪರ ಸಂಭಾಷಣೆಯ ಫಲವಾಗಿ ಪಾಪಾಜಿಯವರಿಗೆ ಗಾಂಧೀಜಿಯವರ ಹತ್ತಿರದಲ್ಲೇ ಸಮಯ ಕಳೆಯುವ ಅವಕಾಶ ದೊರಕಿತ್ತು. ಒಂದು ಮಧ್ಯಾಹ್ನ ಗಾಂಧೀಜಿ ತಮ್ಮ ಚರಖಾದಲ್ಲಿ ನೂಲುತ್ತಾ ಕುಳಿತಿದ್ದರಂತೆ. ಪಾಪಾಜೀ ಹತ್ತಿರದಲ್ಲೇ ಇದ್ದರಂತೆ. ಬೇರೆ ಯಾರೂ ಆ ಕೊಠಡಿಯಲ್ಲಿ ಇರಲಿಲ್ಲ. ಒಮ್ಮೆಲೇ ಪಾಪಾಜಿಯವರಿಗೆ ರಾಮ್ ರಾಮ್ ಎಂಬ ಜಪ ತೀರ ಮೆಲುದನಿಯಲ್ಲಿ ಕೇಳಿಸಿತಂತೆ. ಗಾಂಧೀಜಿ ಮೌನದಿಂದ ನೂಲುವುದರಲ್ಲಿ ತಲ್ಲೀನರಾಗಿದ್ದರಂತೆ. ಪಾಪಾಜೀ ತಮ್ಮ ಸೂಕ್ಷ್ಮ ಶರೀರದಿಂದ ಜಪದ ಶಬ್ದದ ಮೂಲವನ್ನು ಅರಸಿದಾಗ ಗಾಂಧೀಜಿಯವರ ಇಡೀ ದೇಹ ರಾಮ್ ಶಬ್ದಕ್ಕೆ ಸರಿಯಾಗಿ ಅಲುಗಾಡುತ್ತಿರುವುದು ಕಾಣಿಸಿತಂತೆ. ಪಾಪಾಜಿಯವರೇ ನನಗೆ ಇದನ್ನು ತಿಳಿಸುತ್ತಾ, ಆತ್ಮ ಜ್ಞಾನದ ಉತ್ತುಂಗ ಸ್ಥಿತಿ ಇದು ಎಂದು ಹೇಳಿದರು.''

ಡೇವಿಡ್‌ನ ಸಂದರ್ಶನ ಕೇಳಲು ಬಹು ಚೇತೋಹಾರಿಯಾಗಿತ್ತು. ಸಂದರ್ಶನದ ಪೂರ್ಣ ಪಾಠ ಕೇಳುವ ಇಚ್ಛೆಯಿದ್ದರೆ ಖಂಡಿತ ಯೂಟ್ಯೂಬಿನಲ್ಲಿ ಡೇವಿಡ್ ಗಾಡ್‌ಮನ್ ಅಂತ ನಮೂದಿಸಿ, ''ಬುದ್ಧ ಅಟ್ ದ ಗ್ಯಾಸ್ ಪಂಪ್'' ಕ್ಲಿಪ್ ನೋಡಿ.

ಅಪರಂಜಿ ಯುಗಾದಿ ವಿಶೇಷಾಂಕಕ್ಕೆ ಅನೇಕ ಓದುಗರು ಬಹು ಧನಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಮಾನ್ಯ ರಾಘವೇಂದ್ರ ಭಟ್ಟರ ಪ್ರತಿಕ್ರಿಯೆಯನ್ನು ಮುಂದಿನ ಪುಟದಲ್ಲಿ ನೀಡಿದ್ದೇವೆ. ಓದುಗರ ಮುಕ್ತ ಅನಿಸಿಕೆಗಳಿಗೆ ಸದಾ ಸ್ವಾಗತ.

**ಶಿವಕುಮಾರ್**



## ಓದುಗರ ಓಲೆ

ಆತ್ಮೀಯ ಶ್ರೀ ಶಿವು ಅವರಲ್ಲಿ ವಿಜ್ಞಾಪನೆಗಳು,

ಮೊದಲಿಗೆ ಹೇಮಲಂಬೀ ಸಂವತ್ಸರದ ಯುಗಾದಿಯ ಶುಭಾಶಯಗಳು.

ಪ್ರತಿಸಲ ಅಪರಂಜಿ ಬಂದಾಗಲೂ ಶ್ರೀಗಣೇಶ ನನ್ನದು; ಒಂದೇ ಬೈಠಕ್ನಲ್ಲಿ ಓದಿ ಚಪ್ಪರಿಸೋಕೆ ಕಾರಣ ನನ್ನಾಕೆ ಓದಿದ್ಮೇಲೆ ಪರಸ್ಪರ ಪ್ರತಿಕ್ರಿಯೆ ವಿನಿಮಯ ಆಗೋದು ವಾಡಿಕೆ. ಅದರಲ್ಲೇನಾದರೂ ಮೂರನೆಯವರಿಗೆ ತಪ್ಪದೇ ನೋಡಿಸ್ಬೇಕೂ ಅಂದ್ರೆ ತಿಂಗಳ ಮಧ್ಯದಲ್ಲೇ ಕೊಡೋದೂ ಉಂಟು. ಈಸಲ ಮಾತ್ರ ತುಸು ಏರುಪೇರಾಯ್ತು... ಯುಗಾದಿ ಸಂಚಿಕೆಯಲ್ಲಿ ಹೊಸ ತಲೆಗಳೂ ಕಲೆತು ವೈವಿಧ್ಯದ ಲೇಖನಗಳನ್ನ ಸಾವಧಾನವಾಗಿ ಓದಿ ಚಪ್ಪರಿಸಿ ನಮ್ಮ ಅನಿಸಿಕೆಯನ್ನ ಮಿಂಚಂಚೆ ಮಾಡಿದ್ರೆ ಹೊಸ ಪೀಳಿಗೆಗೆ ಹುರುಪೇರುತ್ತೆ ಅಂತ ಈ ಹಳೇ ಮಾಸಲುಗಳನ್ನ ಪ್ರೇರೇಪಿಸಿದ್ರಿ. ಹಾಗಾಗಿ, ಇನ್ನೊಂದ್ಸಲ ಆರು ದಿನದಂತರದಲ್ಲಿ ಈ ಕೆಲವನ್ನ ಹೊಸೆದಿದ್ದೇನೆ. ಒಪ್ಪಿಸ್ಕೊಳ್ಳೋದು ನಿಮ್ಮ ಖಯಾಲಿಗೆ ಬಿಟ್ಟದ್ದು. ನನ್ನದೇನೂ ತಕರಾರಿಲ್ಲ!

ಬಲ್ ಸೊಗಸಾದ್ರೂ ಇತಿಹಾಸದಲ್ಲಿ ಸಾಲ್ದೂ ಅಂತ ಸಾಹಿತ್ಯದಲ್ಲೂ ಕಪಿಲವಸ್ತು ದೊರೆ ಶುದ್ಧೋದನನ ಮಗ ಸಿದ್ಧಾರ್ಥ ನಡುರಾತ್ರೀಲಿ ಮುದ್ದು ಮಡದಿ ಮತ್ತು ಎಳೆಕೂಸನ್ನು ಇವತ್ತಿನೋರ ಥರಾ 'ಫ್ಲೈಯಿಂಗ್ ಕಿಸ್' ತೂರಿ ಚನ್ನ ಅನ್ನೋನ್ನ ಸಾರಥೀನ ರಥದಲ್ಲಿ ಕರ್ಕೊಂಡು ಹೋಗಿದ್ದನ್ನ ಮರೆಯೋಕುಂಟೆ? ಇಲ್ಲಿ –– 23ನೇ ಪುಟದಲ್ಲಿ ಕವಿ ತೂಕಡಿಸಿದಂತಿಲ್ವೇ!? ಯಾಕ್ಹೀಗಾಯ್ತು?

ಪುಟ ಮೂವತ್ರಲ್ಲಿ 'ಮದುವೆಗೆ ಮುನ್ನ' ಬಂದ್ರೆ ಪುಟ ಅರವತ್ತರಲ್ಲಿ 'ಮದುವೆ ನಂತರ' ಬಂದಿದೆ. ಇವೆರಡರ ಅಂತರ ಇಷ್ಟೊಂದು ದೀರ್ಘವೇ ಅನ್ನೋದು ಪ್ರಸ್ತುತದ ಸವಾಲು. ನಿನ್ನೆ ತಾನೇ 'ನಿಂಗಂಡ ನಿನಗೆ ಮ್ಯಾಚೇ ಅಲ್ಲಾಂತ ಹತ್ತಿರದೋರು ಅಂದೇಟಿಗೆ ಕೈನಲ್ಲಿರ್ರೋ ಮದ್ವೇ ಕಂಕಣಕ್ಕೆ ಒಂದ್ವಾರಾನೂ ಆಗಿಲ್ಲ, ಆವಮ್ಮ ಕಲ್ನಿಂದ ಗಂಡನ್ ತಲೇನೇ ಚಚ್ಚೋದೆ? ಇದ್ಯಾವ ಜನ್ಮದ ಅನುಬಂಧ?'

ಬರೀ ವಿನೋದ ಹಾಸ್ಯ ವ್ಯಂಗ್ಯ ವಿಡಂಬನೆ ಅಲ್ದೆ ಒಂದು ಕತೆಯ 99 ಅವತಾರಗಳಂತೂ ನಭೂತೋ.... ಅನ್ನಿಸ್ತು! ಈ ಲೇಖಕರು ಎಂಥಾ ಗಂಭೀರ ವಿದ್ವತ್ಪೂರ್ಣ ವಸ್ತುವನ್ನೂ ಎಷ್ಟೊಂದು ಸರಳ ಮತ್ತು ಆಸ್ವಾದಯೋಗ್ಯ ಮಾಡಬಲ್ಲರು ಅನ್ನೋಕೆ ನಮ್ಮಳ ಮ್ಯಾನರಿಸಮ್ ಜಾತಿಯ ''ನಿಂಗೊತ್ತಲ್ಲ'' ಅನ್ನೋದನ್ನ ಹೆಣೆದಿರೋದಕ್ಕಂತೂ ನೂರು ನೂರು ಶಹಬ್ಬಾಸ್‌ಗಳು!! ಹತ್ತುಸಲಾ ಬಂದಿರೋ ಈ ''ಅಕ್ಕೀಲ್ಕಲ್ಲು'' ಒಂದಾದ್ರೂ ಸುಮಾರು ಅನ್ಸಿದ್ರೆ ಅದ್ರಪ್ಪನಾಣೆ!

ಕುಮಾರವ್ಯಾಸನ ಪದ್ಯವೊಂದನ್ನು ಹಿಸಿದು ಹಲಸಿನ ತೊಳೆ ಬಿಡಿಸಿರಿಸಿ ಕರಾವಳಿಯ ತಾಳಮದ್ದಳೆಯ ಅರ್ಥಧಾರಿಗಳ ವೈಖರಿಯನ್ನ ಪರಿಚಯಿಸಿದ ವಿಜಯಶಂಕರರ ರೀತಿ ನೋಡಿದ ನನಗಂತೂ ಅಡಿಗರು ಕುರ್ತುಕೋಟಿ ಅನಂತಮೂರ್ತಿ ಮೊದಲಾದ ಆಂಗ್ಲ ಪ್ರಾಧ್ಯಾಪಕರು ಕುಮಾರವ್ಯಾಸ ಮೊದಲಾದ ಕನ್ನಡದ ಖ್ಯಾತಕವಿಗಳನ್ನು ಓದಿ ಆಸ್ವಾದಿಸಿ ತೌಲನಿಕ ವಿಮರ್ಶೆ ಮಾಡಿದ ಪರಂಪರೆ ಇನ್ನೂ ಜೀವಂತ ಇರೋದು ಕಂಡು ಹಾಲು ಕುಡಿದಂತೆನಿಸಿತು. ಸಂಭಾಷಣೆ ಮಾತ್ರ ತುಂಬಿರೋ ದೃಶ್ಯಾವಳಿ ಅಂತೂ –– ಕೊಡೆ ಒಂದು, ಕೈ ಎರಡು ಎಂತೋರಿಗೂ ಇದು ಸ್ವಂತದ ಮಾಲೇ ಅಥ್ವಾ...?! ಅನ್ನಿಸ್ಬೇಕು ಮರೆಗುಳಿಯೊಬ್ಬರ ಸುತ್ತಾ ಗಿರ್ಕಿ ಹೊಡೆದ ಮಾತಿನ ಚಕ್ರವನ್ನ ಅದರ ಕೊನೆಯ ಪತ್ತೇದಾರಿ ವಿಸ್ಮಯದ ಮುಗಿವನ್ನ ಓದಿಯೇ ಅನುಭವಿಸಬೇಕು.

ಒಟ್ಟಿನಲ್ಲಿ, ಹಳೆಯ ಪಳಕೆಯ ಹತ್ತಾರು ಲೇಖಕರ ಸರಿದೊರೆಯೆಂಬಂತೆ ಹೊಸಬರು ಕೆಲವರ ಬರಹ ಕುರಿತು ನನಗೆ ನೆನಪಾದ್ದೇನೆಂದರೆ –– ತರಗತಿಯಲ್ಲಿ ಪ್ರಬಂಧ ಬರೆದ ವಿದ್ಯಾರ್ಥಿಯ ಸ್ವಂತಿಕೆಯನ್ನ ಕಲ್ಪಕತೆಯನ್ನ ತರ್ಕಶುದ್ಧವೂ ಸ್ಫುಟವೂ ಆದ ಬರಹವನ್ನ ಗುಮಾನಿಸಿದ ಸ್ವಯಂ 'ಕುರಿತೋದಿದ ಕುರಿಸದೃಶ ಗುರು'ವಿನ ಬಾಯಿಂದ ಬರುವ ಉದ್ಗಾರ ನಿಜಾ ಹೇಳು, ಯಾರದಿದು ಸರಕು? ಎಲ್ಲಿಂದ ಎತ್ತಿಹಾಕಿದ್ದು? ಇಷ್ಟೊಂದು ನಿರಾಯಾಸವಾದ ಶೈಲಿ ಸರಳ ಸುಭಗ ನುಡಿಕಟ್ಟು ತರ್ಕಬದ್ಧ ವಿಚಾರ ನಿರೂಪಣೆ ಅಪರಂಜಿಯ ಕಿರೀಟಕ್ಕೆ ಇತ್ತೀಚೆಗೆ ದಕ್ಕಿದ ಪುಕ್ಕ ಎಂದು ಸಂತೋಷವಾಗಿ ಹೇಳಬಲ್ಲೆ. ಸಹಜ ಸ್ನಿಗ್ಧ ಚೇತೋಹಾರಿಯೂ ಬದುಕಿನ ಬವಣೆಯನ್ನೆಲ್ಲ ತಾತ್ಕಾಲಿಕವಾಗಿಯಾದರೂ ಶಮನಿಸಿ ಬಂದುದನ್ನು ತಂಪಾಗಿ ನಿಟ್ಟಿಸಿ ಸೋಲಿಸಿ ಅಟ್ಟುವ ಹಾಸ್ಯದ ಉಲ್ಲಾಸವು ಅಪರಂಜಿಯಲ್ಲಿ ಇತೋಪ್ಯತಿಶಯ ಉಕ್ಕಿಹರಿಯಲಿ; ಕನ್ನಡಿಗರ ಬಾಳು ಹಸನಾಗಲಿ ಎಂದು ಮನಸಾ ಹಾರೈಸಿದ್ದೇನೆ.

ನಮಸ್ಕಾರ, **ರಾಘವೇಂದ್ರ ಭಟ್ಟ**

# ಅನಾಯಾಸವಾಗಿ ಸಿಗೋ ಅಧಿಕಾರ

**- ಎಂ.ಎಸ್. ರಘುನಾಥ್**

**ಅಂ**ದು ಬೆಳಿಗ್ಗೆ ಇದ್ದಕ್ಕಿದ್ದಂತೆ ನಮ್ಮಣ್ಣನ ಮಗಳಿಂದ ಫೋನು. ''ಚಿಕ್ಕಪ್ಪಾ ನಿಮ್ಮನ್ನ ಇಂದು ಅರ್ಜೆಂಟಾಗಿ ಮೀಟ್ ಮಾಡಬೇಕಾಗಿದೆ. ಮನೆಗೆ ಬರ್ತೀನಿ. ಇರ್ತೀರಾ ತಾನೆ?'' ಎಂದಳು. ನನಗೋ ಆಶ್ಚರ್ಯ! ಏನಪ್ಪಾ ನನ್ನ ಹತ್ರ ಅಂಥಾ ಮಾತನಾಡೋದು ಇದೆ? ಅಥವಾ ಎಷ್ಟಾದರೂ ಬ್ಯಾಂಕ್‌ನಲ್ಲಿ ಕೆಲಸದಲ್ಲಿದ್ದಾಳೆ ಅಂದ ಮೇಲೆ ಲಾಭದಾಯಕವಾದ ಬ್ಯಾಂಕ್ ಸ್ಕೀಂ ಬಗ್ಗೆ ಹೇಳಕ್ಕೆ ಬರ್ತಾಳೋ ಅಥವಾ ನನ್ನಂತಹ ಸೀನಿಯರ್ ಸಿಟಿಜನ್‌ಗಳಿಗೇನಾದರೂ ಹಿಂತಿರುಗಿಸಬೇಕಾಗಿಲ್ಲದ ಸಾಲವನ್ನೇನಾದರೂ ಪ್ರಕಟಿಸಿದ್ದಾರೆಯೇ ಎಂಬ ದೂರಾಲೋಚನೆಯೇ ನನ್ನಲ್ಲಿ ಉದ್ಭವವಾಗದೆ ಇರಲಿಲ್ಲ.

ಸಂಜೆ ನಮ್ಮ ಮನೆಗೆ ಬಂದಾಗ ಗೊತ್ತಾಯ್ತು ಅವಳು ಬಂದ ಕಾರಣ ! ''ಚಿಕ್ಕಪ್ಪಾ ನಂಗೆ ನೋಡಿ ಎಲೆಕ್ಷನ್ ಡ್ಯೂಟಿಯ ಆರ್ಡ್‌ರ್ ಬಂದಿದೆ ! ಪ್ರಿಸೈಡಿಂಗ್ ಆಫೀಸರ್ ಆಗಿ ಹಾಕಿದ್ದಾರೆ, ನಂಗಂತೂ ಹೆದರಿಕೆಯಾಗ್ತಿದೆ. ಹೇಗಿರತ್ತೋ ಆ ಕೆಲಸ, ಗಂಡ ಮಕ್ಕಳನ್ನು ಬಿಟ್ಟು ಹೋಗಬೇಕು ಬೇರೆ'' ಎಂದು ಆತಂಕದಿಂದ ಕೇಳಿದಳು.

ಅದಕ್ಕೆ ನಾನು ಹೇಳಿದೆ ಅದಕ್ಕೇಕಮ್ಮ ಅಷ್ಟೊಂದು ಯೋಚನೆ? ಆತಂಕ ಎಲ್ಲಾ ಬಿಟ್ಟುಬಿಡು. ಅಲ್ಲಿ ಮಾಡಬೇಕಾಗಿರೋದನ್ನೆಲ್ಲಾ ಟ್ರೈನಿಂಗ್ ಕ್ಲಾಸಿನಲ್ಲಿ ಹೇಳಿ ಕೊಡುತ್ತಾರೆ. ಅದೂ ಅಲ್ಲದೆ ನೀನೊಬ್ಬಳೇ ಇರಲ್ಲ, ಒಂದೊಂದು ವೋಟಿಂಗ್ ಬೂತ್‌ನಲ್ಲೂ ಪ್ರತಿಯೊಂದು ಕೆಲಸಕ್ಕೂ ಇತರೆ ಮೂರು ನಾಲ್ಕು ಅಧಿಕಾರಿಗಳಿರುತ್ತಾರೆ. ಅದೂ ಅಲ್ಲದೆ ಪ್ರಿಸೈಡಿಂಗ್ ಆಫೀಸರ್ ಅಂದರೆ ಸುಮ್ನೆ ಅಲ್ಲಾ, ಮ್ಯಾಜಿಸ್ಟೀರಿಯಲ್ ಪವರ್ ಇರುತ್ತೆ, ಬೇಕಾದರೆ ಚಲಾಯಿಸಬಹುದು. ನಿನ್ನ ಮಾತ್ಗೆ ಅಲ್ಲಿ ಬೆಲೆ. ಗೊತ್ತಿದ್ಯಾ? ಅಂದೆ.

ಅಷ್ಟಕ್ಕೇ ಅವಳು ''ಹೌದಾ ಚಿಕ್ಕಪ್ಪ ? ನಿಜವಾಗ್ಲೂ ಅಷ್ಟೊಂದು ಪವರ್ ಇರುತ್ತಾ?'' ಹಾಗಾದರೆ ಏನ್ ಯೋಚ್ನೆ ಇಲ್ಲಾ ಬಿಡಿ ಅಂತ ಉತ್ತೇಜಿತಳಾಗಿ ಛಂಗನೆ ಎದ್ದಳು.

ಮತ್ತೆ ಮನೇಲಿ ಇರೋ ಅಧಿಕಾರವೇ ಅಲ್ಲೂ ಇರುತ್ತೆ ಅಂದ ಮೇಲೆ ಯಾವ ಹೆಣ್ಣಿಗೆ ತಾನೇ ಖುಷಿಯಾಗಲ್ಲಾ?

✷


---

**ಕವಿ ಪತ್ನಿ ಉವಾಚ**

ಕವಿತೆಯಿಂದ
ತುಂಬದು ಹೊಟ್ಟೆ
ಹಬ್ಬಕ್ಕೆ ಮಕ್ಕಳಿಗೆ ತನ್ನಿ
ಹೊಸ ಬಟ್ಟೆ

*– ಶೋಭಾ ಪ್ರಮೋದ್*

# ಕಚಗುಳಿ ಗ್ಯಾರಂಟಿ




**- ನರಸಿಂಹರಾಜು**

**ಪುಸ್ತಕ : ಒಗ್ಗರಣೆ (ವ್ಯಂಗ್ಯ ಚಿತ್ರಗಳ ಸಂಕಲನ) - ಬೆಲೆ : 100/-**

**ಸಂಪರ್ಕಕ್ಕೆ : ಅಪೂರ್ವ ಪಬ್ಲಿಷರ್ಸ್, ನಂ.4-314, ಅಶೋಕನಗರ, ಇಂಡಸ್ಟ್ರಿಯಲ್ ಏರಿಯಾದ ಬಳಿ, ಮಣಿಪಾಲ - 576104**

---

''ಸುಮ್ಮನೆ ವ್ಯಂಗ್ಯಚಿತ್ರ ಬರೆಯಬೇಡಿ. ಜ್ಞಾಪಕ ಇಟ್ಟುಕೊಳ್ಳುವಂತಹ ವ್ಯಂಗ್ಯಚಿತ್ರ ಬರೆಯಬೇಕು'' ಎಂದು 'ಸುಧಾ' ಸಂಪಾದಕರಾಗಿದ್ದ ಎಂ.ಬಿ. ಸಿಂಗ್ ತಮ್ಮ ಎಂದಿನ ಶೈಲಿಯಲ್ಲೇ ಪಿಸುಗುಟ್ಟಿದರೂ ಎದುರಿಗೆ ಕುಳಿತಿದ್ದ ಜೇಮ್ಸ್ ವಾಜ್ ಎಂಬ ತರುಣನಿಗೆ ಆ ಮಾತು ಅಂದಿನಿಂದ ಬಹಳ ದಿವಸಗಳವರೆಗೆ ಪ್ರತಿಧ್ವನಿಸ ತೊಡಗಿತಂತೆ. 1981ರಲ್ಲಿ ವ್ಯಂಗ್ಯ ಚಿತ್ರ ಜಗತ್ತಿಗೆ ಪ್ರವೇಶಿಸಿದ ಜೇಮ್ಸ್‌ಗೆ ಮುಂದೆ ಈ ವಿಚಿತ್ರಕಲೆ ಹೀಗೆ ಮೈಗೆ ಅಂಟಿಕೊಳ್ಳುತ್ತದೆ ಎಂದು ಭಾವಿಸಿರಲಿಕ್ಕಿಲ್ಲ. ಆ ಕಾಲಕ್ಕೆ ಕನ್ನಡ ವಾರಪತ್ರಿಕೆ ಮತ್ತು ಮಾಸಪತ್ರಿಕೆಗಳಲ್ಲಿ ನಾಡಿಗ್, ಕೆ.ಆರ್. ಸ್ವಾಮಿ, ಪ್ರಸನ್ನ ಅವರಂತಹ ದಿಗ್ಗಜರ ವ್ಯಂಗ್ಯ ಚಿತ್ರಗಳದ್ದೇ ಕಾರುಬಾರು. ಇವರಿಂದಾಗಿಯೇ ಬಹಳ ಮಂದಿ ಹುಡುಗರು 'ಅಂಟುರೋಗ'ಕ್ಕೆ ತುತ್ತಾಗಿದ್ದರು. ಹಾಗೆ ಗಮನ ಸೆಳೆದವರಲ್ಲಿ ಜೇಮ್ಸ್ ಒಬ್ಬರು. ಅವರ ಕಾರ್ಟೂನು ಅಂದರೆ ಓದುಗರಿಗೆ ಕಚಗುಳಿ ಗ್ಯಾರಂಟಿ. ಹವ್ಯಾಸಿ ವ್ಯಂಗ್ಯ ಚಿತ್ರಕಾರರಾಗಿದ್ದಾಗ ರಾಜ್ಯದ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಪಳೆಯುಳಿಕೆಗಳನ್ನು ಒಂದೇ ಕಡೆ ಮ್ಯೂಸಿಯಂನಲ್ಲಿಟ್ಟಂತೆ ಸಂಗ್ರಹಿಸಿಟ್ಟು, ಅವುಗಳನ್ನು ಸಾರ್ವಜನಿಕರಿಗೆ ಕಾಣಿಸುವ ಮಹತ್ಕಾರ್ಯವನ್ನೀಗ ಜೇಮ್ಸ್ ಮಾಡಿದ್ದಾರೆ. ಆದರೆ ಈ ಸಂಗ್ರಹಕ್ಕೆ 'ಒಗ್ಗರಣೆ' ಎಂದು ಹೆಸರಿಟ್ಟಿರುವುದರಿಂದ ಅಡುಗೆ ಬಗ್ಗೆ ಏನೂ ಕೊಟ್ಟಿಲ್ಲ ಎಂದು ಯಾರೂ ಬೇಸರಿಸಬಾರದು. ಹಾಗೆಂದು ರುಚಿಕರವಾದ ಆಹಾರ ಸವಿಯುವಂತಹ ಖಾರ-ಟೂನುಗಳು ಖಂಡಿತ ಇಲ್ಲಿವೆ.

ಈ ಅಂಕು ಡೊಂಕು ಶೂರ ಯಾವ ರೀತಿಯಲ್ಲಿ ಗೆರೆಗಳಲ್ಲಿ ಬರೆ ಎಳೆದಿದ್ದಾರೆ ಅನ್ನುವುದನ್ನು ಗಮನಿಸುತ್ತಾ ಹೋದರೆ ನಾವು ಯಾವುದೋ ಒಂದು ತರಲೆ ಲೋಕದಲ್ಲಿ ಸುತ್ತಾಡಿದಂತಾಗುತ್ತದೆ. ಎಲ್ಲೆಲ್ಲಿ ಕೊಂಕು ನುಡಿಯುವುದಕ್ಕೆ ಅವಕಾಶಗಳು ಸಿಗುತ್ತವೆಯೋ ಅದನ್ನು ಜೇಮ್ಸ್ ಕಪ್ಪು ಬಿಳುಪಿನಲ್ಲಿ ದಾಖಲೆ ಮಾಡಿದ್ದಾರೆ. ಈಗ ಅವರು ಆಯ್ದ ವ್ಯಂಗ್ಯಚಿತ್ರಗಳನ್ನು 116 ಪುಟಗಳಲ್ಲಿ ತುಂಬಿಸಿ, ಒಂದು ವಿಶೇಷ ದಾಖಲೆ ಮಾಡಿಕೊಟ್ಟು ತುಂಬಾ ಒಳ್ಳೆಯ ಕೆಲಸ ಮಾಡಿದ್ದಾರೆ. ಪುಸ್ತಕದ ನಡು ನಡುವೆ ವೃತ್ತಿ ಜೀವನದ ಅನುಭವಗಳನ್ನೂ ಹಂಚಿದ್ದಾರೆ. ಒಂದಷ್ಟು ಕ್ಯಾರಿಕೇಚರ್‌ಗಳಿವೆ. ವ್ಯಂಗ್ಯಚಿತ್ರಕಾರ ಪ್ರಕಾಶ್ ಶೆಟ್ಟಿ ಹೇಳುವಂತೆ 'ಜೇಮ್ಸ್ ಅವರ ಕುಚೇಷ್ಟೆಗಳ ಈ ಸಂಕಲನಕ್ಕೆ ಕೊಟ್ಟ ಹಣ ತೀರಾ ಕಡಿಮೆಯಾಯಿತೆಂದು ಓದುಗರಿಗೆ ಅನಿಸಿದರೆ ಆಶ್ಚರ್ಯವಿಲ್ಲ!'

✸

*(''ಒಗ್ಗರಣೆ'' ಯಿಂದ ಆಯ್ದ ಕೆಲವು ವ್ಯಂಗ್ಯಚಿತ್ರಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. - ಸಂ.)*

# ನಿಮಗೆ ಕನ್‌ಸಲ್ಟೇಶನ್ ಬೇಕೇ?

**- ಸಿ.ಆರ್. ಸತ್ಯ**

**ನ**ಮ್ಮ ಮನೆಯ ಹತ್ತಿರ ಈಗ ಒಂದು ಹೊಸದಾಗಿ ಪಾಲಿ ಕ್ಲಿನಿಕ್ ತೆಗೆದಿದ್ದಾರೆ. ಅಲ್ಲಿ ಮೊನ್ನೆಯ ದಿವಸ ಅದರ ರಿಸೆಪ್ಶನ್‌ನಲ್ಲಿ ತಗಲ್ಹಾಕಿರೋ ಬೋರ್ಡ್ ನೋಡಿದೆ.

ನಮಗೆ ಸಾಧಾರಣವಾಗಿ ಬರೋ ಎಲ್ಲಾ ಖಾಯಿಲೆಗಳಿಗೂ ಒಬ್ಬೊಬ್ಬ ಸ್ಪೆಶಲಿಸ್ಟ್ ಡಾಕ್ಟರ್, ಕನ್‌ಸಲ್ಟೇಶನ್‌ಗೆ ಇದ್ದಾರೆ ಅಂತ ಹೆಸರುಗಳ ಪಟ್ಟಿ ನೋಡಿದೆ.

ನಮ್ಮ ಅಪರಂಜಿ ಓದುಗರಿಗೆ ಏನಾದರೂ ಕನ್‌ಸಲ್ಟೇಶನ್ ಅವಶ್ಯಕತೆ ಇರಬಹುದು ಅಂತ ಆ ಪಟ್ಟಿನ ಕೆಳಗೆ ಕೊಡ್ತಾ ಇದೀನಿ.

ಡಾ. ಬೆಂಜಮಿನ್ ಫ್ರಾಕ್ಚರ್ (ಮೂಳೆ ತಜ್ಞರು)

ಡಾ. ಮಿಸ್. ಶುಗರ್ ಚಾಂಡಿ (ಡಯಬಿಟೀಸ್ ತಜ್ಞೆ)

ಡಾ. ಹಲ್ಲಪ್ಪ ಕೀಳಪ್ಪ ಕಾಮ್‌ದಾರ್ (ಹಲ್ಲು ವೈದ್ಯರು)

ಡಾ. ಆಕ್ಚೀ ನಾಗರಾಜ್ (ನೆಗಡಿ ತಜ್ಞರು)

ಡಾ. ಡವ ಡವ ನರಸಿಂಹ (ಹಾರ್ಟ್ ಸ್ಪೆಶಲಿಸ್ಟ್)

ಡಾ. ಗೊರ್.ಗೊರ್. ವಾಯುದೇವಾ (ಆಸ್ತಾ್ಮ ತಜ್ಞರು)

ಡಾ. ಕೊರ್ ಕೊರ್ ಗಂಟಲಪ್ಪ ಮೂಗಪ್ಪ ಕಿವಿಯಪ್ಪ (ಈ ಎನ್ ಟೀ)

ಡಾ. ನವೆಯುದ್ದೀನ್ ಅಹ್ಮದ್ (ಚರ್ಮ ಕೆರೆತ ತಜ್ಞರು)

ಡಾ. ಮಿಸಸ್ ಪೊರೆಯಮ್ಮ ಭಟ್ (ಕಣ್ಣು- ಕ್ಯಾಟರಾಕ್ಟ್ ತಜ್ಞೆ)

ಡಾ. ತಲೆಸಿಡಿಯಪ್ಪ (ತಲೆನೋವು)

ಡಾ. ಮಿಸಸ್ ಸೊಂಟಮ್ಮ ಸಾಯಿನಾಥ್ (ಬೆನ್ನು ನೋವು ತಜ್ಞರು)

ಡಾ. ನರಸಿಂಹಪ್ಪ (ನ್ಯೂರಾಲಜಿ)

ಡಾ. ಏನಂದ್ರೀ ಸುಬ್ಬರಾವ್ (ಕಿವಿ)

ಡಾ. ಮಿಸಸ್ ಜನನಿ ರಾವ್ (ಪ್ರಸೂತಿ ತಜ್ಞೆ)

ಡಾ. ಮಿಸಸ್ ಕೊಳಂದೈ ಕಣ್ಣನ್ (ಚೈಲ್ಡ್ ಸ್ಪೆಶಲಿಸ್ಟ್)

ಡಾ. ಕೊಳವೇಕರ್ (ಹೊಟ್ಟೆ, ಕರುಳು)

ಡಾ. ಹರೋಹರ (ಬಿ.ಡಿ.ಎಸ್ ಅಂದರೆ ಬಾಡೀ ಡಿಸ್ಪೋಸಲ್ ಸ್ಪೆಶಲಿಸ್ಟ್ ಅಂತ)

ಮಿಸ್ಟರ್ ತಂಗವೇಲು (ಆಂಬ್ಯುಲೆನ್ಸ್ ಡ್ರೈವರ್ ಮತ್ತು ಕೋಲ್ಡ್ ಸ್ಟೋರೇಜ್ ಮ್ಯಾನೇಜರ್)

ನಿಮಗೆ ಸಹಾಯ ಬೇಕಿದ್ರೆ ನನ್ನನ್ನು ಸಂಪರ್ಕಿಸಿ. ಏನೋ, ಇದೊಂದು ರೀತಿ ಸಮಾಜ ಸೇವೆ ಅಂತ ಈ ವಿಷಯ ನಿಮಗೆ ತಿಳಿಸ್ತಿದ್ದೀನಿ ಅಷ್ಟೆ.

✷

# ಡೆವೆಲಪರ್ಸ್‌ರ ಮೆಗಾ ಪ್ಲಾನ್‌ಗಳು

**- ಇ.ಆರ್. ರಾಮಚಂದ್ರನ್**

**ಮ**ನೆಗಳು, ಅಪಾರ್ಟ್ಮೆಂಟು, ವಿಲ್ಲಾಗಳು ಕಟ್ಟುವುದರಲ್ಲಿ ಪೂರ್ವಾಂಕರ, ಶೋಭ, ಸಂಕಲ್ಪ, ಬ್ರಿಗೇಡ್ ಡೆವಲಪರ್ಸ್ ಹೆಸರಾಂತ ಹುಲಿಗಳು. ನಿಮ್ಮ ಕಣ್ಣು ಎಷ್ಟು ಎತ್ತರ ನೋಡುವುದಕ್ಕೆ ಆಗುತ್ತೋ ಅದಕ್ಕೂ ಮೇಲೆ ಕಟ್ಟಡಗಳನ್ನು ಎಬ್ಬಿಸುವುದರಲ್ಲಿ ನಿಸ್ಸೀಮರು.

ಇವರ ಕೃಪೆಯಿಂದಲೇ ಬೆಂಗಳೂರು ಈ ಗತಿಗೆ ಇಳಿದಿದೆಯೆಂದು ಅವರ ಕಾಂಪಿಟಿಟರ್ಸ್ ಹೇಳುತ್ತಾರೆ. ನಿಜವೇ ಇರಬಹುದು.. ಆದ್ರೆ ಅವರ ಪ್ಲಾನ್ಗಳು ಹೇಗೆ? ಅದನ್ನು ತಿಳಿಯಲು ಒಂದು ಅವಕಾಶ ಸಿಕ್ಕಿತು ಇತ್ತೀಚೆಗೆ.

ಹೋದ ವಾರ ಕಂಠೀರವ ಸ್ಟೇಡಿಯಂನಲ್ಲಿ ಬಿಲ್ಡರ್ಸ್‌ಗಳ ಎಕ್ಸಿಬಿಷನ್ ಏರ್ಪಡಿಸಿದ್ದರು. ಪ್ರತಿ ಕಂಪನಿಯವರೂ ಅವರ ಸ್ಟಾಲಿನಲ್ಲೇ ಒಂದು ಕರ್ಟನ್ ಹಾಕಿ ಗುಟ್ಟಾಗಿ ಮಾತಾಡಲು ಜಾಗವನ್ನು ಮಾಡಿಕೊಂಡಿದ್ದರು. ಯಾವ ವೃತ್ತಿಯೇ ಆಗಿರಲಿ, ಕಂಪಿಟೀಟರ್ಸ್ ಐಡಿಯಾ ಕದ್ದುಬಿಡುತ್ತಾರೆಂಬ ಶಂಕೆ ಇದ್ದೇ ಇರುತ್ತೆ.

ನೋಡಿಕೊಂಡು ಬರುವಾ ಅಂತ ನಾನು ಮತ್ತು ನನ್ನ ಪತ್ನಿ ಹೋದ್ವಿ. ಪ್ರಭಾ ಡೆವಲಪರ್ಸ್ ಸೇಲ್ಸ್ಮನ್ನ ಮುಂದೆ ಒಂದು ಗುಂಪು ಕೂತಿತ್ತು. ಅವನು ಸೇಲ್ಸ್ ಭಾಷಣ ಬಿಗಿಯುತ್ತಿದ್ದ.

ಇಟಾಲಿಯನ್ ಮಾರ್ಬಲ್ ಫ್ಲೋರಿಂಗ್, ಥಾಯ್ ಫರ್ನಿಚರ್, ಟರ್ಕಿಷ್ ಬಾತ್ ಟಬ್ ಇದೆಲ್ಲಾ ಈಗ ಜುಜುಬಿ ಹಾಗೂ ಓಬೀರಾಯನ ಕಾಲದ ಮಾತಾಯಿತು! ಬೆಂಗಳೂರಿನಲ್ಲಿ ಪೊಲ್ಯೂಷನ್ ಎಷ್ಟು ಆಗಿದೆಯೆಂದರೆ ಸಿದ್ದು ಅವರಿಗೇ ಒಂದು ಕಡೆಯಿಂದ ಇನ್ನೊಂದು ಕಡೆ ಹೋದರೆ ಏಕ್ದಂ ದಮ್ಮು ಕಟ್ಟಿದ ಹಂಗೆ ಆಗುತ್ತೆ! ಮತ್ತೆ ಇಲ್ಲಿನ ಟ್ರಾಫಿಕ್, ಆಟೋ ರಾಕ್ಷಸರ ಸ್ಪೀಡಾಟ ಹುಚ್ಚು ಹಿಡಿಸುವುದೊಂದೇ ಬಾಕಿ. ನಾವು ನಿಮಗೆ ಅಪಾರ್ಟ್ಮೆಂಟು ಕಟ್ಟಿಕೊಟ್ಟು ಟಾಟಾ ಬೈಬೈ ಮಾಡಿ ಹೋಗುವವರಲ್ಲ, ಈ ರೋಡುಗಳನ್ನು ನಂಬಿಕೊಂಡರೆ ನಿಮಗೆ ಚೆಂಬು ಹಿಡಿಯುವುದೊಂದೇ ಬಾಕಿ. ಅದಕ್ಕೆ ನಿಮಗೆ ಜಟಾಯು ಏರ್ಪಾಡು ಮಾಡಿದೀವಿ. ನಮ್ಮ 100 ಸ್ಟೋರಿ ಹಿಮಾಲಯ ಅಪಾರ್ಟ್ಮೆಂಟಿನಿಂದ ನಿಮ್ಮ ಆಫೀಸಿಗೆ, ನಿಮ್ಮ ಮಕ್ಕಳ ಸ್ಕೂಲಿಗೆ, ಷಾಪಿಂಗಿಗೆ, ನಮ್ಮ ಹೆಲಿ ಸರ್ವೀಸ್ ಜಟಾಯು ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿ ನಿಮ್ಮನ್ನು ಸೇಫಾಗಿ ಕರೆದುಕೊಂಡು ಹೋಗಿ ವಾಪಸ್ಸು ತಂದು ಬಿಡುತ್ತಾನೆ. ಪಾರ್ಟಿಗಳಿಗೆ, ಹೇರ್ ಕೇರ್ ಸೆಲೂನ್, ಏರ್ಪೋರ್ಟ್ ಪಿಕಪ್-ಡ್ರಾಪ್‌ಗೆ ಜಟಾಯು ಯಾವಾಗಲೂ ರೆಡಿ. ನಮ್ಮ ಬಿಲ್ಡಿಂಗ್ ಮೇಲೆಯೇ ಹೆಲಿ ಪ್ಯಾಡ್ ಇರುತ್ತೆ.

ಪ್ರಭಾ ಡೆವಲಪರ್ಸ್‌ನ ಹಿಮಾಲಯದಲ್ಲಿ ಫ್ಲಾಟ್ ತೊಗೊಂಡ್ರೆ ನಮ್ಮ ಪರ್ಸು ಖಾಲಿಯಾಗುತ್ತೆ ಅಂತ ಅನ್ನಿಸ್ತು. ಅವರು ಬುಕ್ ಮಾಡಿರುವರ ಲಿಸ್ಟ್‌ನಲ್ಲಿ ಕಾರ್ಪೊರೇಟರ್ಗಳು, ಕರೆಂಟು ಎಸ್ಕಾಮು ಮತ್ತು ಬಿಡಿಎ ಆಫಿಸರ್ಗಳಿದ್ದರು.

ಇವರೆಲ್ಲಾ ಇಲ್ಲಿ ಬಂದ ಮೇಲೆ ನೀರು, ಕರೆಂಟು ಬಿಲ್ಲು, ಕಂದಾಯ ಮೂರ ರಷ್ಟು ಬೆಲೆ ಏರುವುದು ಖಂಡಿತ ಅಂತ ಎದ್ದೆವು. ಪರ್ಸಿರಲಿ, ಹಾಕಿಕೊಂಡ ಬಟ್ಟೆ ಬಿಟ್ಟು ನಮ್ಮಲ್ಲಿ ಏನೂ ಉಳಿಯುವುದಿಲ್ಲ ಅಂತ ಖಾತ್ರಿಯಾಯ್ತು.

ಪಕ್ಕದವನ ಸ್ಟಾಲು ಬ್ರಿಕೇಡಿನವರದು. ಇವರು ಹಳೇಕಾಲದವರ ತರಹ ಮನೆ ಕಟ್ಟಲಿಕ್ಕೆ ಇಟ್ಟಿಗೆ – ಬ್ರಿಕ್ ಉಪಯೋಗಿಸಬಹುದು, ಅದಕ್ಕೆ ಹೆಸರು ಬ್ರಿಕೇಡು... ಅಷ್ಟು ಕಾಸ್ಟ್ಲಿ ಇರಲ್ಲ ಅಂದ್ಲು ನಮ್ಮಾಕೆ. ಅವಳಲ್ಲಿ ಬುಡವೇ ಇಲ್ಲದ ಆಶಾಕಿರಣದ ಬುಗ್ಗಿ ಹರಿದಾಡುತ್ತೆ ಕೆಲವು ಸಲ.

ಡಿಮ್ ಲೈಟು ಹಾಕಿತ್ತು ಸ್ಟಾಲಿನಲ್ಲಿ. ಯಾವುದೋ ಸ್ಪಿರಿಚುಯಲ್ ಸೆಮಿನಾರಿನಲ್ಲಿರುವ ಹಾಗಿತ್ತು. ಊದುಕಡ್ಡಿಯಿಂದ ಉಸಿರು ಕಟ್ಟುತ್ತಿತ್ತು.

ಅಲ್ಲಿನ ಸೇಲ್ಸ್ ಮ್ಯಾನೇಜರ್ ನೆರೆದಿದ್ದ ಗುಂಪಿಗೆ ಕೊರೆಯುತ್ತಿದ್ದ.

ಬ್ರಿಕೇಡಿನಲ್ಲಿ ನಾವು ಸುಮ್ಮ ಸುಮ್ಮನೆ ಬೇರೆಯವರ ಹಾಗೆ ಕೊಚ್ಚಿಕೊಳ್ಳುವುದಿಲ್ಲ, ಹೇಳಿದ್ದನ್ನು ಮಾಡಿ ತೋರಿಸ್ತೀವಿ. ಇಲ್ಲಿ ಕೂತಿರುವ ಲೇಡಿಸ್‌ಗೆ ಗೊತ್ತು.... ನಿಮಗೆ ಆರಾಮ ಸಿಗುವುದು ನಿಮ್ಮ ಮನೆ ಕೆಲಸದವಳು ಟೈಮಿಗೆ ಬಂದು ಎಲ್ಲಾ ಕೆಲಸ ಮಾಡಿಹೋದ ಮೇಲೆ. ಅಲ್ವಾ? ನಿಮಗೆ ಗೊತ್ತಿರುವ ಹಾಗೆ ಈಗ ಯಾರಿಗೂ ಕೆಲಸದವಳು ಸುಲುಭವಾಗಿ ಸಿಗೋದಿಲ್ಲ, ನೀವು ದಾರಿ ಉದ್ದಕ್ಕೆ ದುಡ್ಡು ಸುರಿದರೂ ಅದನ್ನು ಮೂಸಿ ನೋಡಲು ಯಾರೂ ಬರಲ್ಲ, ಹಾಗೆ ಬಂದರೂ ವಾರಕ್ಕೆ ಮೂರು ದಿನ ಛುಟ್ಟಿ ಹೊಡೀತಾರೆ. ಅದಕ್ಕೆ ಬ್ರಿಕೇಡ್ ಸಲ್ಯೂಷನ್ ಒಂದಿದೆ! ನಾವು ಯಾರು ಫ್ಲಾಟು ಬುಕ್ ಮಾಡ್ತಾರೋ ಅವರಿಗೆಲ್ಲ ಫ್ಲಾಟಿನ ಜೊತೆ ಒಂದು ರೊಬೊ (ರೋಬಾಟ್) ಫ್ರೀಯಾಗಿ ಕೊಡ್ತೀವಿ. ನಿಮ್ಮ ಮನೆ ಕೆಲಸ ಏನೇ ಇರಲಿ – ಪಾತ್ರೆ ತಿಕ್ಕುವುದರಿಂದ, ಮನೆ ಗುಡಿಸಿ, ಸಾರಿಸುವುದು, ಬಟ್ಟೆ ಒಗೆಯುವುದು ಇದೆಲ್ಲವನ್ನು ನೀವು ನೋಡುತ್ತಿರುವ ಹಾಗೇ ಒಂದೊಂದಾಗಿ ಮಾಡುವ ರೊಬೊ ನಿಮ್ಮ ಮನೆಯಲ್ಲಿ ನಿಮ್ಮ ಸಾಥಿಯಾಗಿ ಇರ್ತಾಳೆ. ತಿಮ್ಮಿ, ನಂಜಿ, ಪುಟ್ಟತಾಯಿ, ಮೇರಿ, ಮೆಹೆರ್,ಉನ್ನಿಸಾ ತರಹ ಹೆಸರು ಕೊಟ್ಟಿಲ್ಲ, ಅದರಿಂದ ಮುಂದೆ ದಲಿತ್/ ಒಬಿಸಿ ತರಹ ಪ್ರಾಬ್ಲಂ ಬರಬಹುದು ಎಂದು ಎಣಿಸಿ ರೊಬೊಗಳಿಗೆ ಲ್ಯಾಟಿನ್ ಆಲ್ಫಬೆಟ್ ಹೆಸರುಗಳನ್ನು ಕೊಟ್ಟಿದೀವಿ – ಆಲ್ಫಿ, ಬೀಟಿ, ಗಾಮಿ, ಡೆಲ್ಟಿ ಇತ್ಯಾದಿ. ನಿಮ್ಮ ಫ್ಯಾಮಿಲಿಯಲ್ಲಿರುವ ಎಲ್ಲರ ಹೆಸರುಗಳನ್ನು ಮುಂಚೆಯೇ ಪರಿಚಯ ಮಾಡ್ಸಿರುತ್ತೆ. ನೀವು ಸಲೀಸಾಗಿ ಮಾತನಾಡಬಹುದು, ಕೆಲಸಗಳನ್ನು ಕೊಡಬಹುದು. ಇದರ ಜೊತೆ ಸರಿಯಾಗಿ ಹೇಗೆ ಹುಳಿ ಪುಡಿ, ಸಾರಿನ ಪುಡಿ ಹಾಕುವುದು ತೋರಿಸಿ ಕೊಟ್ರೆ, ನಿಮ್ಮ ರೋಬೋವಿನ ಕೈಲೇ ನೀವು ಮಜ್ಜಿಗೆ ಹುಳಿ, ತೊವ್ವೆ, ಕುಂಬಳಕಾಯಿ ಪಳಿದ್ಯ, ಗಸಗಸೆ ಪಾಯಿಸ ಕೂಡಾ ಮಾಡಿಸಬಹುದು. ನಿಮ್ಮ ರೊಬೊವಿಗೆ ಊಟ, ಕಾಫಿ ಕೊಡುವ ಖರ್ಚಿಲ್ಲ! ರಾತ್ರಿ ಸ್ವಲ್ಪ ಹೊತ್ತು ನೀವು ಮೊಬೈಲ್ ಚಾರ್ಜು ಮಾಡುವ ಹಾಗೆ ಪವರ್ ಸಾಕೆಟ್ಗೆ ಹಾಕಿ ಚಾರ್ಜು ಮಾಡಿ. ಅಷ್ಟೆ ಸಾಕು. ರಾತ್ರಿ ಅದು ನಿದ್ದೆ ಮಾಡುವ ಹೆದರಿಕೆ ಇಲ್ಲ, ಆದ್ರೆ, ನೀವು ಎರಡು ರೋಬೊ ತೊಗೊಂಡಿದ್ದರೆ ಅವುಗಳನ್ನು ಬೇರೆ ಬೇರೆಯಾಗಿ ಇಡಿ. ಇಲ್ದಿದ್ರೆ ಒಂದೇ ಸಮನೆ ರಾತ್ರಿಯೆಲ್ಲಾ ಮಾತಾಡುತ್ವೆ! ಅವುಗಳು ಜಗಳ ಶುರು ಮಾಡಿದ್ರೆ ನಿಮ್ಮ ಮನೆ ಸಾಮಾನೆಲ್ಲಾ ಪುಡುಪುಡಿಯಾಗುತ್ತೆ! ಅದು ಜ್ಞಾಪಕದಲ್ಲಿರಲಿ!

ಫ್ರೀ ರೋಬೊ ಅಂತ ಹೇಳಿದ್ದ ಸೇಲ್ಸ್ಮನ್. ಆದ್ರೆ ಫ್ಲಾಟಿನ ಬೆಲೆ ಕೇಳಿ ನಮಗೆ ಮಾತು ನಿಂತು ಹೋಯಿತು. ರೋಬೋಗಳ ಹಾಗೆ ಸನ್ನೆ ಮಾಡುತ್ತಾ ಹೊರಗೆ ಬಂದ್ವಿ.

ಕೊನೆಯಲ್ಲಿ ಪಷ್ಚಿಮಾಕರನ ಸ್ಟಾಲ್ ಬಂತು.

ಅಲ್ಲಿನ ವೈಸ್ – ಪ್ರೆಸಿಡೆಂಟ್ ಮೊದಲು ಶುರು ಮಾಡಿದರು

ನಾವು ಬಿಲ್ಡಿಂಗ್, ಅಪಾರ್ಟಮೆಂಟು ಕಟ್ಟುವ ಕೆಲಸ ಸಣ್ಣ ಪುಟ್ಟ ಕಂಟ್ರಾಕ್ಟರ್‌ಗಳಿಗೆ ಬಿಟ್ಟು ಎಷ್ಟೋ ವರ್ಷಯಾಯ್ತು. ನಾವು .. ಈಗ.. ಸುಂದರವಾದ ವಾತಾವರಣ ಕಲ್ಪಿಸುವುದರಲ್ಲಿ ನಿರತರಾಗಿದ್ದೀವಿ. ಬ್ರಾನ್ಡೆಡ್ ಹೋಮ್ಸ್ ಇಂಡಿಯಾಗೆ ತಂದಿದ್ದೇ ನಾವಲ್ಲವೇ! ನಾವೀಗ ತ್ರಿಷಂಕು ಸಿಟಿಗೆ ಪ್ಲಾನ್ ಹಾಕೀದೀವಿ. ಷಾಪಿಂಗ್ ಮಾಲ್, ಸ್ಕೇಟಿಂಗ್ ರಿಂಕ್, ಜೋಗ್ ಫಾಲ್ಸ್ ತರಹ ವಾಟರ್ ಫಾಲ್ಸ್ ಎಲ್ಲಾ ತ್ರಿಷಂಕುಲೇ ಇರುತ್ತೆ. ನಮ್ಮ ಇಂಜಿನೀಯರ್ಸ್ ವಿಶ್ವಕರ್ಮ ಎಂಡ್ ವಿಶ್ವಕರ್ಮ ಎಲ್ಲಾ ಪ್ಲಾನ್ಸ್ನ ರೆಡಿ ಮಾಡೀದಾರೆ.

ಸೀನಿಯರ್ ವಿಶ್ವಕರ್ಮ ಮೈಕಿಗೆ ಬಂದರು. ಅರ್ಮಾನಿ ಸೂಟ್, ಗುಚ್ಚಿ ಶೂಸ್ ಮತ್ತೆ ಒಂದು ಪಿಳ್ಳುಜುಟ್ಟು ಅವರ ಪೋಷಾಕು! ಈಗಿನ ಕಂಪಲ್ಸರಿ, ಅರ್ಧ ಮುಖ ಮುಚ್ಚುವ ದಾಡಿ!

ನಾವು ಇದೀಗ ತ್ರಿಶಂಕು ಸಿಟಿ ಡಿಸೈನ್ ಮಾಡಿ ಮುಗಿಸೀದಿವಿ. ಅದರ ವೀಡಿಯೊ ಎಚ್.ಡಿ.ನಲ್ಲಿ ಇಲ್ಲೆ ತೋರಿಸುತ್ತೇವೆ. ನಾಳೆ ಅನ್ನುವ ಪದ ಇನ್ನಿಲ್ಲ. ನಾಳೆ ಯಾವಾಗಲೂ ಇವತ್ತೆ ನಮ್ಮ ತ್ರಿಶಂಕುನಲ್ಲಿ! ಮಾಲ್, 24+7, ಹೋಟೆಲ್, ಕಾಫಿ ಶಾಪ್, ಕಲರ್ ಫುಲ್ ವಾಟರ್ ಫಾಲ್ಸ್ ಯಾವಾಗಲೂ ತೆಗೆದಿರುತ್ತೆ ತ್ರಿ ಸಿಟಿನವರಿಗೆ. ನಮ್ಮ ಯು.ಎಸ್.ಪಿ. ನಿಮಗೆ ಏನೂ ಬೇಕೆಂದರೂ ಯಾವಾಗ ಬೇಕಾದರೂ ಇಲ್ಲಿಗೇ ತರಿಸಿ ಕೊಡ್ತೀವಿ. ಬಾಲಿವುಡ್ ಹಾಲಿವುಡ್ ಪ್ರೀಮಿಯರ್ ಷೊ ನಮ್ಮ ಆಡಿಟೋರಿಯಂನಲ್ಲೇ ಕರಿಸ್ತೀವಿ.

ಇನ್ನೊಂದು ಕಡೆ ಗರುಡ ಬಿಲ್ಡರ್ಸ್


ಇಲ್ಲಿಲ್ಲೇ ಸುತ್ತಿದ್ರೆ ಏನು ಪ್ರಯೋಜನ? ಅದರಿಂದ ಸಿಗುವುದಾದರೂ ಏನು? ಸುತ್ತಾಡಿ, ಬಳಿಸಿ ಮಾತನಾಡುವರಲ್ಲ ನಾವು ಗರುಡ ಬಿಲ್ಡರ್ಸ್. ನೇರ ವಿಷಯಕ್ಕೆ ಬರ್ತೀನಿ. ಬೆಂಗಳೂರಿನ ಹೊರಗೆ ಬೋಇಂಗ್ 380 ಪಾರ್ಕ ಮಾಡಿರುವುದು ನೀವು ಅಡ್ವರ್ಟೈಸಿಂಗ್ನಲ್ಲಿ ನೋಡಿದೀರಿ. ಅದು ನಮ್ಮದೇ. ನಿಮಗಾಗಿ ನಾವು ವಿಶೇಷವಾಗಿ ಥೀಂ ಟ್ರಾವಲ್ ಶುರು ಮಾಡಿದೀವಿ. ವಿಂಬಲ್‌ಡನ್ ನಡೆಯುವಾಗ, ಲಾರ್ಡ್ಸ್ ಟೆಸ್ಟಿಗೆ ನಿಮ್ಮನ್ನು ಸೀದಾ ಅಲ್ಲಿಗೆ ಕರೆದುಕೊಂಡು ಹೋಗುತ್ತೆ ನಮ್ಮ ಗರುಡ ವಿಮಾನ. ಆಸ್ಕರ್ ಫಂಕ್ಷನ್ನಿಗೆ, ಟ್ಯೂಲಿಪ್ಸ್ ನೋಡಲು ಹಾಲೆಂಡಿಗೆ, ನ್ಯು ಯಿಯರ್‌ಗೆ ನ್ಯೂಯಾರ್ಕ್ ಹೀಗೆ ಬೇರೆ ಬೇರೆ ಜಾಗಕ್ಕೆ ಪ್ಲಾನ್ ಹಾಕಿ ನಿಮ್ಮನ್ನು ಅಲ್ಲೆಲ್ಲಾ ಸುತ್ತಾಡಿಸಿ ಬರುತ್ತೆ ನಮ್ಮ ಗರುಡ ವಿಮಾನ. ಅದಕ್ಕೆ ನಮ್ಮ ಬಿಲ್ಡಿಂಗ್‌ಗೆ ಗರುಡ ಪ್ರಾಜೆಕ್ಟ್ ಅಂತ ಹೆಸರಿಟ್ಟಿದೀವಿ. ಒಂದೆರೆಡು ವರ್ಷಗಳಲ್ಲಿ ಡ್ರೈವರ್ ಇಲ್ಲದೆ ಓಡುವ ಕಾರುಗಳನ್ನು ಕೂಡ ತರ್ತಿವಿ. ನೀವು ಕೂತ ಹಾಗೆ ಕಾರು ತಾನಾಗಿ ನೀವು ಹೇಳಿದ ಜಾಗಕ್ಕೆ ಹೋಗಿ, ಬಾಗಿಲು ತೆಗೆದು ನಿಂತುಕೊಳ್ಳುತ್ತೆ. ಡ್ರೈವರ್ ಬೇಡವೇ ಬೇಡ. ಅವನ ಬಾಟಾ, ರಾತ್ರಿ ಎಕ್ಸ್ಟ್ರಾ ಚಾರ್ಜು ತಲೇನೋವಿಲ್ಲ.

ಸಾಕಪ್ಪಾ ಸಾಕೂಂತ ಹೊರಗ್ ಬಂದ್ವಿ. ನಮ್ಮ 30 ಬೈ 40 ನಲ್ಲಿ ಎರಡು ಪುಟ್ಟ ರೂಮು, ಅಡುಗೆ ಮನೆ, ಹಾಲ್, ವೆರೆಂಡಾನೇ ಸರೀ ಅಂತ ಅನ್ನುಸ್ತು. ಮನೆ ಮುಂದೆ ತುಳಸಿ ಕಟ್ಟೆ ಪೋಸ್ಟ್ ಸ್ಟಾಮಿನಷ್ಟು ತೋಟ, ಕೂತ್ಕೊಳ್ಳೋಕೆ ಒಂದು ಸೋಮಾರಿ ಕಟ್ಟೆ ಇದ್ರೆ ಬೇಕಾದಷ್ಟು ಆಯ್ತು ಅಂದುಕೊಂಡ್ವಿ.

ಅಲ್ಲೇ ಸಂಪಂಗಿ ಟ್ಯಾಂಕ್ ಹತ್ತಿರ ಇದ್ದ ಉಡುಪಿ ಹೋಟಲ್ನಲ್ಲಿ ದೋಸೆ ತಿಂದು ಮನೆಗೆ ಹೊರಟ್ವಿ. ಎದುರ್ಗೆ ಗಾರೆ ಕೆಲಸದವ ಮೇಸ್ತ್ರಿ ಮುನಿಸ್ವಾಮಿ ಸಿಕ್ದ. ರಿಪೇರಿ ಕೆಲಸದಲ್ಲಿ ಆತ ಹುಲಿ.

ನಾವು ಯಾತಕ್ಕೆ ಬಂದ್ವಿ ಆಂತ ಹೇಳಿದ ಮೇಲೆ ಅವನು ಜೋರಾಗಿ ನಕ್ಕ. ಯಾಕೋ ನಗ್ತಿಯಾ ಅಂದ್ರೆ, ಇದು ಮೂರ್ನೇ ವರ್ಸ ಇವ್ರು ಈ ತರಹ ಮೀಟಿಂಗ್ ಮಾಡೋದು. ಊರ್ನಲ್ಲಿ ಎಲಿಕಾಪ್ಟ್ರು, ಪ್ಲೇನು ಓಡಿಸ್ಬೇಕೂಂದ್ರೆ ಬಿಬಿಎಮ್‌ಪಿ ಪರ್ಮಿಸನ್ ಎಲ್ ಕೊಡ್ತಾನ್ ಏಳ್ರಿ! ಅದಕ್ಕೆ ಎಸ್ಟು ಖರ್ಚು ಮಾಡ್ಬೇಕೋ ಏನು ಕಥೆಯೋ! ನಮ್ಮೂರ ಹೆಣ್‌ಕೆಲಸ್ದೋರು ಸ್ಟ್ರೈಕ್ ಮಾಡ್ತೀವಿ ಅಂತ ಎದರ್‌ಸೋವ್ರೆ ಇವ್ರಿಗೆ! ರೋಬಾಟ್ ಬೊಂಬಾಟ್ ಮಾಡ್ಬಿಟ್ಟು ನಮ್ಮ ಎಂಗಸ್ರಿಗೆ ಮನೆ ಕೆಲ್ಸ ಖೋತಾ ಮಾಡಕ್ಕೆ ಹೊರಟವ್ರೆ. ಅವ್ರೆಲ್ಲಾ ಕೋತಾಳ್ ಖಘರಾಜ್ಗೆ ಕಂಪ್ಲೇನ್ ಮಾಡವ್ರೆ. ಅವ್ನು ಬಿಡಾಕಿಲ್ಲ ಇವರ್ನ. ಡ್ರೈವರ್‌ಗಳಿಲ್ದೆ ಕಾರು ಓಡುತ್ತಂತೆ. ಟ್ರಾನ್ಸ್‌ಪೋರ್ಟ ಮಿನಿಸ್ಟರ್, ಆರ್ ಟಿ ಓ ಜೊತೆ ಸೇರಿ ಖಘರಾಜ್ ತಿಂದಾಕ್ ಬಿಡ್ತಾನೆ ಇವರ್ನ ನೋಡ್ಕೊಳಿ ! ಗವೀಪುರಂನಿಂದ ನೀನು ಯಾಕೆ ಇಲ್ಲಿ ಬಂದಿದ್ದೀಯೋ ಅಂತ ಕೇಳಿದ್ದಕ್ಕೆ, ಈ ಮೀಟಿಂಗ್ ಮಾಡ್ತಿರೋ ಬಿಲ್ಡರ್ಸ್ ಮನೇಲೆಲ್ಲಾ ಮಳೆಗಾಲದಲ್ಲಿ ಸೂರು ಸೋರ್ತದೆ! ನನ್ನ ಕಾಸ್ನಲ್ಲೇ ಗುಜರಿಯಿಂದ ಡಾಕ್ಟರ್ ಫಿಕ್ಸಿಟ್ಟು, ಸಿಮೆಂಟು ತೊಗೊಂಡು ಸೂರ್ಗೆ ಒಡೀಬೇಕು. ನಾನು ಬತ್ತೀನಿ. ಕಾಯ್ತಿರ್ತಾರೆ. ಕುಚ್‌ಮೊಟ್ಟೆ, ಕರಣೆ, ಮಕ್ರಿ ತೊಗೊಂಡು, ಹುಡುಗ್ರನ್ನ ಕರ್ಕೊಂಡು ಸ್ಟೇಡಿಯಂತಾಕ್ಕೆ ಓಗ್ಬೇಕು. ಅವ್ರ ಮಾರುತಿ ವ್ಯಾನ್ ನಲ್ಲೇ ಎಲ್ಲಾರ್ನೂ ತುಂಬ್ಕೊಂಡು ಓಗ್ತಾರೆ. ಓದ್ ವಾರ ಎರ್ಡು ಮನೆ ರಿಪೇರಿ ಮಾಡ್ದೆ. ಅದ್ರ ದುಡ್ಡು ಇನ್ನು ಕೊಟ್ಟಿಲ್ಲ. ಅದೂ ಇವತ್ತಿಂದೂ ಸಿಕ್ದರೆ ಈವತ್ತು ಸಂಜೆ ಬಾಟ್ಲಿ ಏರಿಸ್ತಿನಿ.

✹



# ಅಪರಂಜಿ ಥೇಟ್ ಅಪರಂಜೀನೇ!

**- ಕುಮುದಾ ಪುರುಷೋತ್ತಮ್**

**ಅಂ**ದು ಮುಂಜಾನೆ ಎಂದಿನಂತೆ ಎಡಗೈಲಿ ಕಾಫಿ ಲೋಟ ಹಿಡಿದು ಬಲಗೈಲಿ ದಿನಪತ್ರಿಕೆಯ ತಲೆಬರಹ(ಹಣೆಬರಹ!?)ಗಳ ಮೇಲೆ ಕಣ್ಣಾಡಿಸುತ್ತಿದ್ದರೂ ಮನಸ್ಸು ಕುದಿಯುತ್ತಿತ್ತು. ಅಂತಹ ಸ್ಫೋಟಕ ಸುದ್ದಿ ಖಂಡಿತಾ ಪತ್ರಿಕೆಯಲ್ಲಿರಲಿಲ್ಲ. ಕುದಿಯಬೇಕಿದ್ದ ಕಾಫಿ ಉಗುರುಬೆಚ್ಚಗಿದ್ದು ನನ್ನನ್ನೇ ಕುದಿಯುವಂತೆ ಮಾಡಿತ್ತು. ಕಾರಣ ಕಾಫಿ ಡಿಕಾಕ್ಷನ್ನಿಗೆ ಹಾಲು ಬೆರೆಸಿ ಒಲೆಯಮೇಲಿಟ್ಟಾಗ ಗ್ಯಾಸ್ ಸಿಲಿಂಡರ್ ಖಾಲಿಯಾಗಿತ್ತು. ಭಾರವಾಗಿರಬೇಕಿದ್ದ ಬದಲಿ ಸಿಲಿಂಡರ್ ಎಳೆದಾಗ ನೀರಿನಮೇಲಣ ಹಂಸದಂತೆ ತೇಲಿಬಂದು ತನ್ನ ಖಾಲಿ ಸ್ಥಿತಿ ತೋಡಿಕೊಂಡಿತ್ತು. ಗ್ಯಾಸಿಗಾಗಿ ಫೋನ್ ಮಾಡುವುದು ಮರೆತಿದ್ದೆ. ಹಿಂಬದಿಯಲ್ಲಿ ಹಿಮ್ಮೇಳ ಶುರುವಾಗಿತ್ತು.

ಸ್ವಲ್ಪವೂ ಜವಾಬ್ದಾರಿ ಇಲ್ಲ. ಯಾವ್ಯಾವ್ದೋ ಪ್ರಯೋಜನವಿಲ್ಲದ ಕೆಲ್ಸಗಳ್ನ ಮಾಡ್ತಾ ಕಾಲ ಕಳೀತಿ. ಮುಖ್ಯವಾದದ್ದು ಮರೀತಿ. ಇಷ್ಟಕ್ಕೂ ದಿನವೆಲ್ಲಾ ಮನೇಲೇ ಕಾಲ ಕಳೀತೀ. (ನಿವೃತ್ತಿಯಾದೊಡನೆ ವಾಕಿಂಗ್ ಹೆಸರಿನಲ್ಲಿ ರಸ್ತೆ ಸುತ್ತೋದು ಬಿಟ್ರೆ ಅವರು ಕೂತಿರುತ್ತಿದ್ದುದೂ ಮನೇಲೇ.) ಮನೇ ನಿರ್ವಹಣೆ ಸರ್‍ಯಾಗಿ ಮಾಡೋಕ್ಕೇನು? ಹೀಗೇ ಹಿಮ್ಮೇಳ ಮುಂದುವರೀತು. ಬಾಯ್ಮುಚ್ಚಿಕೊಂಡು ಇಂಡಕ್ಷಂಕಾಯಿಲ್ ಮೇಲೆ ಪಾತ್ರೆ ಇಟ್ಟೆ. ಉರಿಯಬೇಕಿದ್ದ ಕೆಂಪು ದೀಪ ಉರಿಯಲಿಲ್ಲ. ಇಂದು ಸಂಜೆ ಐದರವರೆಗೆ ಪವರ್ ಕಟ್ ಎಂದಿತು ಹಿಮ್ಮೇಳ. ತಣ್ಣಗಿನ ಕಾಫಿ ಹಿಡಿದು ಪೇಪರ್ ಓದಲು ಕುಳಿತೆ. ಪಕ್ಕದಲ್ಲಿದ್ದ ಫೋನ್ ಅರಚಿತು. ಕರೆದದ್ದು ಅಡಿಗೆಯ ಆಂಡಾಳಮ್ಮ.

''ಮೇಡಂ, ನನ್ನ ಮಗಳನ್ನು ಕೆ.ಆರ್. ಆಸ್ಪತ್ರೆಗೆ ಸೇರಿಸಿದ್ದೇನೆ. ನೆನ್ನೆ ರಾತ್ರಿ ಹೆರಿಗೆಯಾಯ್ತು. ಅವಳಿ-ಜವಳಿ. ಆರ್ತಿಗೊಂದು ಕೀರ್ತಿಗೊಂದು. ನಾಮಕರಣವಾಗೋವರ್ಗೆ ಕೆಲ್ಸಕ್ಕೆ ಬರೋಲ್ಲ, ಹೇಗಾದ್ರೂ ಅಡ್ಜಸ್ಟ್ ಮಾಡ್ಕೊಳ್ಳಿ'' ಎಂದು ಅವರಪಾಲಿನ ಸಿಹಿ ಸುದ್ದಿ ಹೇಳಿ ನನ್ನ ಬಾಯಿ ಕಹಿಮಾಡಿದರು. ಅಂದು ನಾನೆದ್ದ ಘಳಿಗೆ ಸರಿ ಇದ್ದಿರಲಿಕ್ಕಿಲ್ಲ. ಹತ್ತೇ ನಿಮಿಷದಲ್ಲಿ ಮತ್ತೊಂದು ಫೋನ್. ಈ ಬಾರಿಯ ಕರೆ ಮನೆಕೆಲಸದ ವೀರಾಂಗನೆ ತಮಿಳ್ ಸೆಲ್ವಿಯದು. ''ಅಮ್ಮಾ, ನಾನೂ ಎನ್ ಮಾಮಿಯಾರೂ ಓಮ್ ಶಕ್ತಿ ಕೋಯಿಲ್ಕು ಪೋರೋ. ನಾನ್ ಮೂನು ನಾಲು ನಾಳು ವೇಲೆಕ್ಕೆ ವರಮಾಟ್ಟೆ'' ಎಂದು ಘೋಷಿಸಿ ನಾನು ಬಾಯಿತೆರೆಯುವ ಮುನ್ನ ಫೋನ್ ಆಫ್ ಮಾಡಿದಳು. ವಾಕರ್ ಹಿಡಿದು ಬಂದ ತೊಂಬತ್ತರ ನನ್ನಮ್ಮ ''ಇವತ್ತೇನೇ ತಿಂಡಿ?'' ಕೇಳಿ ಉರಿಯುತ್ತಿದ್ದ ಬೆಂಕಿಗೆ ತುಪ್ಪ ಸುರಿದರು. ಇವತ್ತು ಆಂಡಾಳಮ್ಮ ರಜ. ಹಾಗೇ ತಿಂಡಿಗೂ ರಜ'' ಎಂದೆ ವರಟಾಗಿ. ಅಮ್ಮನಿಗೆ ಹಿಗ್ಗೋ ಹಿಗ್ಗು. ''ಆಕೆ ಕೈಯ ಅಡಿಗೆ ತಿಂದೂ ತಿಂದೂ ಬೇಜಾರಾಗಿತ್ತು. ನೀನೇ ತಿಳಿಸಾರು, ಮೆಂತ್ಯದ ಹಿಟ್ಟಿನ ಗೊಜ್ಜು ಮಾಡಿ ಹಪ್ಪಳ ಸಂಡಿಗೆ ಕರಿದುಬಿಡು'' ಹೇಳಿ ಹೊಟ್ಟೆ ಉರಿಸಿದರು.

ಮನೆ ಯಜಮಾನರು ಹಿಮ್ಮೇಳ ನಿಲ್ಲಿಸಿ ಹಸಿವು ತಾಳಲಾರದೆ ಹೋಟೆಲ್‌ನಿಂದ ಇಡ್ಲಿ ವಡೆ ತರಲು ಚೀಲ ಹಿಡಿದು ಹೊರಟರು. ನಾನು ತಲೆಕೆಟ್ಟು ಕೆಟ್ಟಿದ್ದ ತಲೆಯಮೇಲೆ ಕೈಹೊತ್ತು ಕುಳಿತಿದ್ದೆ. ಮತ್ತೊಮ್ಮೆ ಫೋನು ಕೆಣಕಿತು. ಈ ಬಾರಿ ವಿಶಾಲಿಯದು. ''ಸದಾ ಮನೇಗೆ ಬರೊಲ್ಲ ಬರೊಲ್ಲ ಅಂತ ಗೋಳಾಡ್ತಿದ್ಯಲ್ಲಾ, ಈವತ್ತು ಅದಕ್ಕೆ ಮುಹೂರ್ತ ಬಂದಿದೆ. ನಿಮ್ಮನೆ ಹತ್ರಾನೇ ಒಂದು ಸೆಮಿನಾರಿಗೆ ಬರ್‍ತಾ ಇದ್ದೀನಿ. ಸೆಮಿನಾರ್ ಊಟ ಅಂದ್ರೆ ನಿಂಗೇ ಗೊತ್ತಲ್ಲಾ, ಊಟದ ಬ್ರೇಕಿನಲ್ಲಿ ನಿನ್ನ ಮನೇಗೆ ಬಂದುಬಿಡ್ತೀನಿ. ಅಚ್ಚುಕಟ್ಟಾಗಿ ನಿನ್ನ ಆಂಡಾಳಮ್ಮನಿಗೆ ಹೇಳಿ ಒಂದು ಚಿತ್ರಾನ್ನ, ಆಂಬೊಡೆ ಪಾಯಸ

ಮಾಡಿಸಿಬಿಡು. ಸಿಕ್ಕಿದರೆ ಹಿದಕವರೆ ಕೂಟು ಮರಿಬೇಡ'' ನಾನು ಉಸಿರೆತ್ತುವಮುನ್ನ ಫೋನ್ ಕಟ್ ಮಾಡಿಟ್ಟುಬಿಟ್ಟಳು ಪಾಪಿ.

ಕುದಿಯುತ್ತಿದ್ದ ಮನಸ್ಸು ಉಕ್ಕಿ ಹರಿಯಿತು. ಅದರಲ್ಲಿ ಮೀಯಲು ಪಕ್ಕದಮನೆ ಮುರಾರಿ ಬಲಿಪಶುವಾಗಿ ಅಂಚೆಯಲ್ಲಿ ಬಂದಿದ್ದ ಅಪರಂಜಿ ಪತ್ರಿಕೆ ಹಿಡಿದು ಒಳಬಂದ. ಅವನ ಮೇಲೆ ಹರಿಹಾಯ್ದೆ. ''ಏನೋ? ಪೋಸ್ಟ್‌ಮ್ಯಾನ್ ಕೆಲ್ಸಕ್ಕೆ ಯಾವಾಗ ಸೇರ್ದೆ?''

''ನಾನ್ಯಾಕೆ ಸೇರ್ಲಿ ಆಂಟೀ? ಈ ಪೋಸ್ಟ್‌ಮ್ಯಾನ್ಗಳು ವಿಳಾಸ ಸರಿಯಾಗಿ ಓದದೆ ಯದ್ವಾ ತದ್ವಾ ತಂದು ಹಾಕ್ತಾರೆ. ನಿಮ್ಮ ಅಪರಂಜೀನ ನಮ್ಮ ಡಬ್ಬೀಲಿ ಹಾಕಿದ್ದ. ಮನೇವ್ರೆಲ್ಲಾ ಓದಿ ಸಂತೋಷ ಪಟ್ಕೊಂಡ್ರು. ಈಗ ಕೊಟ್ಟು ಬಾ ಅಂದ್ರು'' ನನ್ನ ವರ್ತನೆಗೆ ನಾಚಿ ಅವನಿಗೊಂದು ಧನ್ಯವಾದ ಹೇಳಿ ತಪ್ಪು ಕಾಣಿಕೆಯಾಗಿ ಸೇಬಿನ ಹಣ್ಣನ್ನು ಕೈಗಿತ್ತು ಕಳುಹಿಸಿದೆ. ಹಾಗೇ ಕುಳಿತು ಅಪರಂಜಿಯ ಪುಟ ತಿರುಗಿಸಿದೆ. ಮೊದಲು ಕಣ್ಣಿಗೆ ಬಿದ್ದದ್ದು ಸಿ.ಆರ್. ಸತ್ಯ ರವರ ಸ್ಕೋರ್ ಏನೂ ಸಾರ್? ಸೊಗಸಾದ ಹಾಸ್ಯ. ಕಣ್ಣಿಗೆ ಕಟ್ಟುವಂತಹ ವಿವರಣೆ. ಗೃಹಸ್ಥ ಸೊಳ್ಳೆ ಹೊಡೆಯಲು ಹೋಗಿ ಆ ಏಟು ಗುರಿತಪ್ಪಿ ಹೆಂಡತಿಯ ಕೆನ್ನೆಗೆ ಬಿದ್ದು, ಆಕೆಯ ಮರು ಏಟು ಗೃಹಸ್ಥನ ಕೆನ್ನೆಗೆ ಬಡಿದು ಒಳಗಿದ್ದ ಹಲ್ಲಿನ ಸೆಟ್ ಹೊರಗೆ ಜಾರಿ ಬಿದ್ದು..... ಚಿತ್ರಿಸಿಕೊಳ್ಳುತ್ತಾ ಕಚಗುಳಿ ಇಟ್ಟಂತಾಗಿ ಜೋರಾಗಿ ನಗುತ್ತಾ ಕುಳಿತೆ. ತಿಂಡಿ ಹಿಡಿದು ಒಳಬಂದ ಯಜಮಾನರ ಹುಬ್ಬು ಗಂಟಿಕ್ಕಿತು.

''ನಾನು ಮನೇಲಿ ಇಲ್ದಿದ್ರೆ ನಿನಗೆ ಅಷ್ಟೊಂದು ಖುಶಿಯಾಗುತ್ತಾ? ಇಷ್ಟೊಂದು ನಗುವಷ್ಟು?'' ವ್ಯಂಗ್ಯ ವಾಡಿದರು. ಅವರ ಕೈಲಿದ್ದ ಚೀಲ ತೆಗೆದುಕೊಂಡು ನನ್ನ ಕೈಲಿದ್ದ ಅಪರಂಜಿ ಅವರಿಗಿತ್ತು ಒಳಹೋದೆ. ತಿಂಡಿ ತಟ್ಟೆಯಲ್ಲಿಟ್ಟು ತಂದಾಗ ಅವರೂ ಹೊಟ್ಟೆ ಹಿಡಿದು ನಗುತ್ತಿದ್ದರು! ಕುದಿಯುತ್ತಿದ್ದ ಮನಸ್ಸು ತಣ್ಣಗಾಗಿತ್ತು. ಮಬ್ಬಾಗಿದ್ದ ಚಿತ್ತ ತಿಳಿಯಾಯಿತು. ಬುದ್ಧಿ ಚುರುಕಾಯಿತು. ಕೇಟರರ್ ಭೀಮಾಚಾರ್ಯರಿಗೆ ಫೋನ್ ಮಾಡಿದೆ,

''ಆಚಾರ್ರೇ, ನಾಲ್ಕು ಜನಕ್ಕಾಗುವಷ್ಟು ಊಟ ಕಳಸ್ತೀರಾ?''

''ಆಗೋಲ್ಲ ತಾಯೀ, ಇವತ್ತು ಸತ್ಯನಾರಾಯಣ ಪೂಜೆ ಕಾಂಟ್ರಾಕ್ಟ್ ಬಂದಿದೆ. ನೂರು ಜನಕ್ಕೆ ಅಡುಗೆ ಆಗ್ಬೇಕು. ಬೇರೆ ಯಾವ್ದಕ್ಕೂ ಪುರಸೊತ್ತಿಲ್ಲ'' ಎಂದರು.

''ಉದ್ಯಾಪನೆಗೆ ಏನೇನು ಅಡುಗೆ ಮಾಡ್ತಿದ್ದೀರ?'' ನಾನು ಸುಲಭದಲ್ಲಿ ಬಿಟ್ಟುಕೊಡಲು ಸಿದ್ಧಳಿರಲಿಲ್ಲ.

''ಅದೇ ಮಾಮೂಲಿ ಊಟ. ಚಿತ್ರಾನ್ನ, ಪಾಯಸ, ಆಂಬೊಡೆ, ಅವ್ರೆ ಕಾಯಿ ಕಾಲ ಅಲ್ವೇ? ಹಿದಕವರೆ ಕೂಟು ಮಾಡೋಣಾಂತ ಇದ್ದೀನಿ.''

''ಮಾಡೋಣಾಂತ ಅಲ್ಲ, ಮಾಡೇ ಬಿಡಿ. ನೀವು ಊಟ ಕಳಿಸೊ ತೊಂದ್ರೆ ತೊಗೋಬೇಡಿ. ನಾನೆ ನಿಮ್ಮ ಮನೆಗೆ ಡಬ್ಬ ಸಮೇತ ಬರ್ತೀನಿ, ಮಾಡಿರೋದನ್ನು ತುಂಬಿಸಿ ಕೊಡಿ ಸಾಕು'' ಎಂದೆ.

ಆಚಾರ್ಯರು ತಥಾಸ್ತು ಎಂದರು.

ಹುಡುಕುತ್ತಿದ್ದ ಬಳ್ಳಿ ಕಾಲಿಗೇ ತೊಡರಿತ್ತು! ನೆಮ್ಮದಿಯಿಂದ ಕಾಲಿನಮೇಲೆ ಕಾಲುಹಾಕಿ ಕುಳಿತು ಅಪರಂಜಿ ಕೈಗೆತ್ತಿಕೊಂಡೆ. ನಗೆ ಪಯಣ ಮುಂದುವರೀತು.

✷



# ಆಮಸೂತ್ರ

**- ನಳಿನಿ ಸೂರ್ಯಪ್ರಕಾಶ್**

**ಮಾ**ವು ಮಾರುಕಟ್ಟೆಗೆ ಲಗ್ಗೆಯಿಟ್ಟಾಗಲೆಲ್ಲ ನಿತ್ಯವೂ ಮನೆಯಲ್ಲಿ ಮಾವುಮೇಳ! ಮೊನ್ನೆ ಮೂರನೆಯ ಹಣ್ಣೊಂದನ್ನ ಕೈಗೆತ್ತಿಕೊಂಡಾಗ ನನ್ನ ಮಗ, ''ಎಷ್ಟು ತಿಂತೀಯಮ್ಮಾ...'' ಅಂತ ಅಲವತ್ತುಕೊಂಡ. ಕತ್ತೆಗೇನ್ಗೊತ್ತು ಕಸ್ತೂರಿ ಪರಿಮಳ ಅಂತ ಅವನ ಮಾತಿಗೆ ಕ್ಯಾರೆ ಅನ್ನದೆ ಬಂಗಾರ ಬಣ್ಣದ ಹಣ್ಣನ್ನು ಸವಿದು ಮುಗಿಸಿದೆ.

**ಈ ಬಾರಿಯ ಮಾವಿನ ಸೀಸನ್‌ನಲ್ಲಿ ಅಳವಡಿಸಿಕೊಳ್ಳಬಹುದಾದ ಸೂತ್ರಗಳು**

(ಉ)ಅಗ್ರಶ್ರೇಣಿಯ ಮಾವುಪ್ರಿಯಳಾದ ನಾನು ದಿನಕ್ಕೊಂದೇ ಹಣ್ಣಿನಂತೆ ಸವಿದು ಆತ್ಮವಂಚನೆ ಮಾಡ್ಕೊಳ್ಳೋ ಪ್ರಮೇಯವಾದ್ರೂ ಏನ್ಹೇಳಿ?! ಹಾಗಾಗಿ, ಒಂದರ ಹಿಂದೆ ಇನ್ನೊಂದು..., ಮತ್ತೊಂದು... ಮಗದೊಂದು... ಆದರೆ ನನ್ನ ಸುಪುತ್ರನ ಆ ಒಂದು ಮಾತು ನನ್ನನ್ನು ಗಂಭೀರ ಚಿಂತನೆಗೊಡ್ಡಿದ್ದು ಮಾತ್ರ ನಿಜ. ಅದರ ಫಲವೇ ಮಾವುಪ್ರಿಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಹೆಣೆದ ಈ ಆಮಸೂತ್ರ!

ಎಣ್ಣೆ ಬಂದಾಗ ಕಣ್ಣುಮುಚ್ಚಿಕೊಂಡ್ರು ಅಂತಾಗದೆ, ಹಣ್ಣು ಲಭ್ಯವಿದ್ದಾಗ ಲೆಕ್ಕವಿಡದೇ, ನಿಸ್ಸಂಕೋಚವಾಗಿ ಸವಿದುಣಬೇಕೆಂಬುದು ಮೊಟ್ಟಮೊದಲ ಸರಳ ಸೂತ್ರ. ಆಮಪ್ರಿಯಾಣಾಂ ಸಂಕೋಚಂ ನ ಭವೇತ್!

ಆ ದಿನ ಮನೆಯಲ್ಲಿ ಕೊನೆಯ ಹಣ್ಣೊಂದು ಉಳಿದಿದೆಯೆಂದಿಟ್ಟುಕೊಳ್ಳಿ. ಹಣ್ಣನ್ನು ಹೆಚ್ಚಿ ನಿಮ್ಮ ಪ್ರೀತಿಪಾತ್ರರಾದವರಿಗೆಲ್ಲಾ ಹಂಚಿ ಸವಿಯುವ ದುರ್ಬುದ್ಧಿ ನಿಮ್ಮನ್ನಾವರಿಸೀತು ಜೋಕೆ! ಹಂಚಿದವರಿಗೆ ಉಳಿಯೋದು ಹಲ್ಲು-ಬಾಯಿಯೆಂಬ ಮಾತು ನೆನಪಿರಲಿ! ಹಾಳು ನಿಸ್ವಾರ್ಥದ ಸೋಗನ್ನು ಬಿಟ್ಟು, ಉಳಿದೊಂದೇ ಹಣ್ಣನ್ನು ನೀವೊಬ್ಬರೇ ಮುಗಿಸಿಬಿಡಿ! ಮಾವು ಎಂದಾಗ, ಮೊದಲು ನೀವು ಎಂಬುದು ಮನದಟ್ಟಾಗಲಿ. ಎರಡನೆಯದಾಗಿ, ಆಮಪ್ರಿಯಾಣಾಂ ನಿಸ್ವಾರ್ಥಂ ನ ಭವೇತ್!

ಈ ಮಾವು ಸೃಷ್ಟಿಯ ಎಷ್ಟೋ ಅದ್ಭುತಗಳಲ್ಲೊಂದೆಂಬುದು ನನ್ನ ಅಭಿಪ್ರಾಯ. ಒಂದೊಂದು ಬಗೆಯಲ್ಲೂ ಒಂದೊಂದು ವಿಶಿಷ್ಟ ರಸ-ರುಚಿ-ಗಂಧಗಳ ಸಂಯೋಗ! ಇಂಥಾ ರಸಭರಿತ ಅಮೃತಫಲದ ರಸಾಸ್ವಾದನೆಗೆ ಸೂತ್ರವೇನು, ಸಂಹಿತೆಯಿದ್ರೂ ಸಾಲದೇನೊ! ಕೆಲವು ಮಾವುಪ್ರಿಯರಿರ್ತಾರೆ, ಹಣ್ಣಿನ ಎರಡೂ ಕೆನ್ನೆಗಳ ಕುಯ್ದು, ನಾಲ್ಕಾರು ಹೋಳುಗಳಾಗಿಸಿ ತಿಂದು ಸಿಪ್ಪೆಯೆಸೆಯುವಂಥ ಸಪ್ಪೆ ವಿಧಾನವನ್ನನುಸರಿಸುವವರು. ಇವರು ಕೇವಲ ಹಣ್ಣನ್ನು ತಿನ್ನುವರೇ

ಹೊರತು, ಆಸ್ವಾದಿಸದಂಥ ಅರಸಿಕ ಗೊಡ್ಡುಗಳು! ಅಲ್ಪತೃಪ್ತರು! ಎಂಥಾ ರಸಮಯ ಸಮಯದಿಂದ ವಂಚಿತರಾಗ್ತಿದ್ದಾರೆಂಬುದು ತಿಳಿಯದ ಇವರ ಬಗ್ಗೆ ನನಗೆಲ್ಲಿಲ್ಲದ ಮರುಕ!

ಇಡೀ ಹಣ್ಣನ್ನು ಅಂಗೈಲಿ ಹಿಡಿದು, ನರುಗಂಪನ್ನೊಮ್ಮೆ ಆಘ್ರಾಣಿಸಿ, ಸಿಪ್ಪೆಯನ್ನು ಮೆಲ್ಲಗೆ ಹಲ್ಲಿನಿಂದೆಳೆದು, ಆ ಬಂಗಾರ ಬಣ್ಣದ ರಸಭರಿತ ತಿರುಳನ್ನು ಸವಿದಾಗಲೊಂದು ರಸಲೋಕವೇ ತೆರೆದುಕೊಂಡೀತು! ಹಾಗೆಯೇ ಸಿಪ್ಪೆಗಂಟಿದ ರಸ-ತಿರುಳನ್ನು ಚಪ್ಪರಿಸಿ, ಹೀರುವುದರಲ್ಲಿ ಎಲ್ಲಿಲ್ಲದ ಮಜ! ತಿರುಳಿನ ರಸಾಸ್ವಾದನೆ ''ಸೊರ್ರ್...ಪ್ಚ್...'' ಎಂದು ಮುಂದುವರಿಯುತ್ತಿದ್ದಂತೆ, ಅಂಗೈಯ ಮಣಿಕಟ್ಟಿನವರೆಗೆ ಸೋರಿದ ರಸವನ್ನು ನಾಲಿಗೆಯಿಂದ ನೆಕ್ಕಿದಾಗ ಆಸ್ವಾದನೆಯಲ್ಲಿನ ರಸಿಕತೆಯ ಅನಾವರಣ! ಇನ್ನು ವಾಟೆಯನ್ನು ಹೆಬ್ಬೆರಳು, ತೋರುಬೆರಳ ನಡುವಿನಿಂದ ಕೊಂಚ ಮೆಲ್ಲಗೊತ್ತಿ, ಅದಕ್ಕಂಟಿದ ಅಳ್ಳಕವಾದ ರಸಭರಿತ ತಿರುಳನ್ನು ಮೇಲೆಳೆದುಕೊಂಡು, ಹೀರಿ, ಚಪ್ಪರಿಸಿ, ಲೊಟ್ಟೆಹೊಡೆದರಂತೂ ಆನಂದದ ಪರಾಕಾಷ್ಠೆ!

ಒಟ್ಟಿನಲ್ಲಿ ನಾ ಹೇಳೋದಿಷ್ಟೇ. ಮಾವಿನಂಥ ಸೃಷ್ಟಿಯ ಅದ್ಭುತವೊಂದು ಕೈಸೇರಿದಾಗ, ಅದರ ರಸ-ರುಚಿ-ಗಂಧಗಳ ಸೂರೆಯಾಗಬೇಕು! ಇದುವೇ ಆಮಸೂತ್ರದ ಕಟ್ಟ ಕಡೆಯ, ಪ್ರಮುಖ ಸೂತ್ರ.

ಆಮಪ್ರಿಯರೆ, ಸಂಕೋಚ, ನಿಸ್ವಾರ್ಥ, ಅರಸಿಕತೆಯ ಬಂಧನದಿಂದ ಮುಕ್ತರಾಗಿ.....

ರಸಪುರಿ, ಮಲಗೋವ, ಬಾದಾಮಿ, ಮಲ್ಲಿಕಾ, ನೀಲಂ, ದಶೇರಿ.. ಎಂಬ ದಶಾವತಾರಿಯ ಮೆರವಣಿಗೆಯಲ್ಲಾಗಲಿ, ನಿಮ್ಮ ನಿರ್ವಾಣ !

ಆಮ್.. ತತ್... ಸತ್..!

✷



# ಪಂಚ್ ಪದ್ಯಗಳು

- ಎಚ್. ಡುಂಡಿರಾಜ್

## ಬೇಸಿಗೆ

–1–

ಹೇಗೆ ಬಣ್ಣಿಸಲಿ ಮೇ
ತಿಂಗಳ ಬೇಸಿಗೆ ಮಹಿಮೆ
ಒಂದೇ ಮಾತಲ್ಲಿ
ಹೇಳಬೇಕೆಂದರೆ
ಇದು ಬರಿ ಮೇ ಅಲ್ಲ
ಉರಿವ ಕುಲುಮೆ!

–2–

ಈಗ ಬೇಸಿಗೆ
ದಪ್ಪ ಹಾಸಿಗೆ
ಬೇಡವಂತೆ ಅವರಿಗೆ
ಆದ್ದರಿಂದ
ಮಡದಿಯನ್ನು
ಕಳಿಸಿದ್ದಾರೆ ತವರಿಗೆ!

–3–

ವಸಂತ ಋತು ಬಂದರೂ
ನಗರದಲ್ಲಿ ಎಲ್ಲೂ
ಕಾಣಿಸುತ್ತಿಲ್ಲ ಕೋಗಿಲೆ
ಸಂಸ್ಕೃತಿ ಇಲಾಖೆಗೆ ಹೋಗಿ
ಕಾಗೆ ಕೇಳುತ್ತಿದೆ ನಾನೇ
ಕುಹೂ ಎಂದು ಕೂಗಲೇ?

–4–

ದೇವರ ದರ್ಶನ ಮಾಡಲು
ಉದ್ದದ ಸರತಿ ಸಾಲು
ಸಹಿಸಲಸಾಧ್ಯ ಸೆಖೆ
ಒದ್ದೆಯಾಗಿತ್ತು ಮೈ ಬೆವರಿಗೆ
ಮನಸ್ಸಿನಲ್ಲೇ ಒಂದು
ಧನ್ಯವಾದ ಹೇಳಿದೆ
ಅಂಗಿ ತೆಗೆ ಅಂದವರಿಗೆ

–5–

ಈ ಒಂದು ತಿಂಗಳಿಡೀ
ನಾವು ನೀವು ಎಲ್ಲರೂ
ಕುರಿಗಳು ಸಾರ್ ಕುರಿಗಳು
ಎಲ್ಲರ ಬಾಯಲ್ಲೂ
ಅದೇ ಸೊಲ್ಲು
ಮೇಮೇಮೇ!

✷

# ಚಿಗುರಿದ ಕನಸು.....

**- ಎಚ್. ಗೋಪಾಲಕೃಷ್ಣ**

**ಸಾ**ಮಾನ್ಯವಾಗಿ ನಮ್ಮ ಮೇಲೆ ಅಸಾಧ್ಯ ಪ್ರಭಾವ ಬೀರಿರುವ ವ್ಯಕ್ತಿಗಳು ಆಗಾಗ್ಗೆ ನಮ್ಮ ಮನಸ್ಸಿನ ಮೂಲೆಯಲ್ಲಿ ಕಾಣಿಸಿಕೊಂಡು ಏನೋ ಮಾರಾಯಾ ನನ್ನನ್ ಮರೆತ್ಬೇನೋ? ಎಂದು ಕೇಳುವುದುಂಟು. ನಿಮಗೆ ಈ ಅನುಭವ ಆಗಿದೆಯೋ ಇಲ್ಲವೋ ನನಗೆ ತಿಳಿಯದು, ನನಗಂತೂ ಈ ಅನುಭವಗಳು ದಿನಬೆಳಗಾದರೆ ಒಂದು ರೂಟೀನ್ ಕ್ರಿಯೆ ಆಗಿಬಿಟ್ಟಿದೆ.

ಮೊನ್ನೆ ಬೆಳಿಗ್ಗೆ ಎದ್ದು ಕರಾಗ್ರೇ ವಸತೇ ಹೇಳಿಕೊಳ್ತಾ ಇರಬೇಕಾದರೆ ಏನೋ ಮಾರಾಯಾ ನನ್ನನ್ ಮರೆತ್ಬೇನೋ? ಎಂದು ಕಿವಿಯಲ್ಲಿ ಯಾವುದೋ ಅವ್ಯಕ್ತದನಿ ಮೊಳಗಬೇಕೇ? ಹಾಸಿಗೆ ಮೇಲೆ ಮತ್ತೆ ಉರುಳಿದೆ. ಇದುಯಾರದನಿ ಅಂತ ಜಾಸು ಮಾಡಲು ಶುರು ಹಚ್ಚಿದ್ದೆ. ದನಿ ಗಂಡಸಿಂದೋ ಯಾ ಹೆಂಗಸಿನದ್ದೋ ಅಂತ ಮೆದುಳು ರೀವೈಂಡ್ ಮಾಡಿದೆ. ಹೆಂಗಸಿನ ದನಿ ಥರಹ ಇತ್ತು ಅಂತ ಮೆದುಳಿನ ಸೂಚನೆ ಸಿಕ್ಕಿತು. ಜಮುನಾನೇ ಅಂತ ಆಕೆಯನ್ನ ನೆನೆಸಿಕೊಂಡೆ. ಇವರು ನನ್ನ ಜತೆ ಓದುತ್ತಿದ್ದೋರು, ಆಕಾಲದಲ್ಲೇ ಲಿಬರೇಷನ್ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದೋರು. ಇವರು ಹೇಗೆ ನನ್ನ ಮೇಲೆ ಪ್ರಭಾವ ಬೀರಿದರು ಅಂದರೆ ದಿನಾ ಬೆಳಿಗ್ಗೆ ಬೈಟೂಕಾಫಿ ಹಾಕ್ತಾ ಇದ್ದೋರು. ಅವಾಗ ಅವರು ಪ್ರಪಂಚ ಹೇಗೆ ಬದಲಾಗಬೇಕು ನಾವು ಹೇಗೆ ಜಗತ್ತು ಬದಲಾಯಿಸಲು ಪ್ರಯತ್ನ ಪಡಬೇಕು ಅಂತ ಹೇಳೋರು. ಇಂಗ್ಲೀಷಿನಲ್ಲಿ ಅವರು ಬಡ ಬಡ ಮಾತಾಡ್ತಾ ಇದ್ದರೆ ನಾನು ಅವರ ಬಾಯಿ ಅಲ್ಲಿಂದ ಹೊರಡೋ ಶಬ್ದ ಕೇಳ್ತಾಕೇಳ್ತಾ ಮೂಗ ಆಗಿಬಿಡ್ತಿದ್ದೆ. ಅವರ ಕಣ್ಣು ಆ ಸುಂದರ ಲೋಕದಲ್ಲಿ ವಿಹರಿಸುವುದನ್ನು ನೋಡಲು ತುಂಬಾ ಚೆನ್ನಿತ್ತು. ಆಕೆ ಮಾತಾಡ್ತಾ ಇರಬೇಕಾದರೆ ಸಮಯ ಸರಿದದ್ದು ತಿಳೀತಿರಲಿಲ್ಲ ಮತ್ತು ಈ ಮಾತು ಜೀವನಪೂರ್ತಾ ಕೇಳುತ್ತಲೇ ಇರಬೇಕು ಅನಿಸೋದು...! ವಿಧಿ ಬೇರೇನೇ ನಿರ್ಧರಿಸಿತ್ತು!! ಕಾಲೇಜು ಮುಗಿಸಿ ಬಿಟ್ಟುಹೋದ ಆಕೆ ಮತ್ತೆ ನನಗೆ ಸಿಕ್ಕೇ ಇಲ್ಲ, ಆದರೆ ಅವರ ನೆನಪು ಇದೆ! ಯಾಕೋ ಅವರದನಿ ಅಲ್ಲ ಬೆಳಿಗ್ಗೆ ನನಗೆ ಕೇಳಿಸಿದ್ದು ಅನಿಸಿತು.

ಆಗ ಥಟ್ ಅಂತ ನೆನಪಿಗೆ ಬಂದಿದ್ದು ಸುಮಾರು ನಲವತ್ತು ವರ್ಷದಿಂದ ನನಗೆ ಆಪ್ತನಾಗಿರುವ ನನ್ನ ಬಂಧು ಚಿಂತಕ ಕೋದಂಡರಾಮ. ಬಂಧುತ್ವ ಹಾಗೂ ಸಾಹಿತ್ಯದ ಚಟುವಟಿಕೆಗಳ ಮೂಲಕ ರಾಮನ ಪರಿಚಯ ನನಗೆ. ಕಾಂಪಿಟೇಷನ್ನಲ್ಲಿ ಬರೆಯೋ ಹಾಗೆ ಆತನ ಲೇಖನಗಳ ಸ್ಪೀಡು ಮತ್ತು ಅದೆಲ್ಲಕ್ಕಿಂತ ಹೆಚ್ಚಾಗಿ ಆತ ನಮ್ಮ ಅಂದರೆ ಆತನ ಹಾಗೇ ಇರುವ ಸೀಬೈಟೂಗಳ ಬಗ್ಗೆ ತೋರುತ್ತಿದ್ದ ವಿಶ್ವಾಸ ಮತ್ತು ಪ್ರೀತಿ ನಮ್ಮನ್ನ ಬೇರೆ ಲೋಕಕ್ಕೆ ಕರೆದೊಯ್ಯುತ್ತಿತ್ತು. ಎಷ್ಟೋ ಸಲ ಒಂದೇ ತಟ್ಟೇಲಿ ಉಂಡಿದ್ದೇವೆ, ಒಂದೇ ಚಾಪೇಲಿ ಮಲಗಿದ್ದೇವೆ, ಬೈಟೂಕಾಫಿ ಹೀರಿದ್ದೇವೆ, ಹೀಗೆ ಎಷ್ಟೋ ಸಂಗತಿಗಳು ಶೇರ್ ಆಗಿವೆ.... ನನಗಿಂತ ಕೊಂಚ ಮೊದಲು ಹುಟ್ಟಿದ್ದ ಆತನನ್ನ ನಾವುಗಳು ಅವನಿಗಿಂತ ಕೊಂಚ ಕಿರಿಯರು ಅಣ್ಣಾ ಅಂತ ಕರೆಯುತ್ತಿದ್ದೆವು. ಮೂಡು ಸರಿಯಿದ್ದಾಗ ಆತ ನಕ್ಕು ಅಣ್ಣನ ಸೌಭಾಗ್ಯವನ್ನು ಆಸ್ವಾದನೆ ಮಾಡುತ್ತಿದ್ದ. ಹೀಗೆ ನಮ್ಮ ಆಪ್ತತೆ ಸುಮಾರು ವರ್ಷ ನಡೆದ ನಂತರ ಇದ್ದಕ್ಕಿದ್ದ ಹಾಗೆ ನಮ್ಮ ಮೇಲೆ ಕೋಪಿಸಿಕೊಳ್ಳಲು ಅಣ್ಣ ಆರಂಭಿಸಿದಾಗ ನಮಗೆ ದಿಗಿಲಾಯಿತು. ಯಾಕೆ ಹೀಗೆ

ಆಡ್ತಾ ಇದಾನೆ ಅಂತ. ರೇಗಾಟ ಅತಿ ಅನಿಸಿದಾಗ ಪಕ್ಕದಲ್ಲೇ ಕೂಡಿಸಿಕೊಂಡು ನಮಗೆಲ್ಲರಿಗೂ ಹಿರಿಯ ನೀನು. ಸುಮಸುಮನೆ ರೇಗಬಾರದು ವಯಸ್ಸಾಗ್ತಾ ಆಗ್ತಾ ನಮಗೆ ಮೆಚ್ಯೂರಿಟಿ ಬರಬೇಕು ನಾವೇನು ನರ್ಸರಿ ಮಕ್ಕಳೇ. ಮೊದಲು ಬೀಪಿ ಚೆಕ್ ಮಾಡಿಸ್ಕೋ..... ಅಂತ ಬುದ್ಧಿ ಹೇಳಿದ್ದೆವು.

ನಾವೇನು ಎಲ್ಕೇಜೀ ಅವೇ? ಸದಾ ಕಿತ್ತಾಡೋಕ್ಕೆ? ನಮಗೂ ಮಕ್ಕಳು ಮೊಮ್ಮಕ್ಕಳು ಇವೇ ತಾನೇ ನಾವು ಅವಕ್ಕೆ ರೋಲ್ ಮಾಡಲ್ ಆಗಬೇಕು ತಾನೇ....

ಈ ಧಾಟೀಲಿ ಮೊಳೆ ಹೊಡೆದಿದ್ದೆವು. ಮೊಳೆ ಹೊಡೆಸಿಕೊಂಡ ಸ್ವಲ್ಪ ದಿವಸ ಬಾಲ ಮುದುರಿಕೊಂಡು ಇರೋನು. ಮತ್ತೆ ಬಾಲ ಬಿಚ್ಕೋನು.

ಹಿಂದಿನ ಯಾವುದೋ ದಿನ ನೆನೆಸಿಕೊಂಡು ಅವತ್ತು ನಾನು ನಿನಗೆ ನಮಸ್ಕಾರ ಅಂದರೂ ನೀನು ನನಗೆ ಮರು ನಮಸ್ಕಾರ ಹೇಳಲೇ ಇಲ್ಲ.....

ಅಂತ ವರಾತ ಶುರುವಾಗೋದು.

ಅದೇನಯ್ಯಾ ಇಂತಹದ್ದೆಲ್ಲಾ ನೆನಪು ಇಟ್ಕೊಳ್ತೀ?

ಇದನ್ನೆಲ್ಲಾ ನಾನು ತಲೇಲಿ ರೆಕಾರ್ಡ್ ಮಾಡಿದೀನಿ, ಮುಂದೆ ಉಪಯೋಗಕ್ಕೆ ಬರುತ್ತೆ ಅಂತ... ಉತ್ತರ ಬರೋದು!

ಹೀಗಾಗಿ ರಾಮನ ಹತ್ತಿರ ಅದೇನು ಮಾತು ಆಡಿದರೂ ಹೆಚ್ಚಾಗ್ತೋದೋ ಕಡಿಮೆ ಆಗೋದೋ ಆಗಿ ಮಾತು ಕಡಿಮೆ ಮಾಡಿದ್ದೆವು. ಅಪರೂಪಕ್ಕೆ ಅವನಿಗೆ ಫೋನಾಯಿಸಿ, ಗುರೂ ಹೇಗಿದ್ದೀ ಅಂತ ವಿಚಾರಿಸಲು ಪ್ರಯತ್ನ ಮಾಡುತ್ತಿದ್ದೆ.

ನಾನು ಬದುಕಿದ್ದೀನಿ ಇನ್ನೂ ಸತ್ತಿಲ್ಲ ಅಂತ ಈಗ ನೆನಪಿಗೆ ಬಂತಾ? ಅಂತ ಮಾತು ಶುರುವಾಗೋದು. ನಾನು ಅದೆಷ್ಟೋ ಜನ್ಮಗಳ ಹಿಂದೆ ಮಾಡಿದ್ದೀನಿ ಅಂತ ಈತ ನಂಬಿರೋ ಯಾವುದೋ ವಿಷಯ ಹಿಡಿದುಕೊಂಡು ತಿಪ್ಪರಲಾಗ ಹಾಕಿಬಿಡೋನು. ಫೋನಾಯಿಸಿದ ತಪ್ಪಿಗೆ ನೀವು ಫೋನು ಇಡೋಹಾಗಿಲ್ಲ ಮತ್ತು ಇವನು ಹೇಳಿದ್ದೆಲ್ಲಾ ಕೇಳಿಸ್ಕೊಳ್ಳಲೇಬೇಕು ಅಂಥಹ ಸಂದಿಗ್ಧಕ್ಕೆ ಸಿಕ್ಕಿಹಾಕಿಕೊಂಡು ಅದೇನೋ ಹೆರೋದಕ್ಕೆ ಜಾಗ ಎಲ್ಲೀ ಅಂತ ಗಾದೆ ಇದೆಯಲ್ಲಾ ಹಾಗೆ ಆಗಿಬಿಡ್ತಾ ಇದ್ದೆ. ಈ ತಾಪತ್ರಯ ಬೇಡ ನಮಗೂ ನೆಮ್ಮದಿ ಇರಲಿ ಅವನಿಗೂ ನೆಮ್ಮದಿ ಇರಲಿ ಅಂತ ಅಂದುಕೊಂಡು ಕೆಲವು ತಿಂಗಳಿಂದ ಅವನಿಗೆ ಫೋನೂ ಮಾಡಿರಲಿಲ್ಲ, ಯಾವುದೇ ಸಾಹಿತ್ಯ ಸಮಾರಂಭಕ್ಕೂ ಹೋಗಿರಲಿಲ್ಲ, ಯಾವುದೇ ಪುಸ್ತಕ ಬಿಡುಗಡೆಗೂ ಹೋಗಿರಲಿಲ್ಲ, ಯಾವುದೇ ಫ್ಯಾಮಿಲಿ ಫಂಕ್ಷನ್ನಿಂದಲೂ ದೂರವೇ ಇದ್ದೆ - ಜಸ್ಟ್ ಟು ಅವಾಯ್ಡ್ ಈ ಬಂಧು ಎನ್ನುವ ಹುಳ! ಅಂತಹ ಮಹಾನುಭಾವ ಬೆಳಿಗ್ಗೆ ಏಳಬೇಕಾದರೇನೆ ನೆನಪಿಗೆ ಬಂದು ಕಾಡುತ್ತಾನೆ. ನೆನಪು ಕೆದಕ್ತಾನೆ ಅಂದರೆ.. ಇದು ನನಗೆ ಇಷ್ಟೆಲ್ಲಾ ಯೋಚಿಸಿದ ಮೇಲೆ ಹೊಳೆದದ್ದು. ಛೇ ಅವನೇನು ಪ್ರಾಥಃ ಸ್ಮರಣೀಯನೇ ಬೆಳಿಗ್ಗೆ ಎದ್ದು ಅವನ ಬಗ್ಗೆ ಚಿಂತಿಸೋದಿಕ್ಕೆ ಅಂತ ಅವನನ್ನ ಮನಸ್ಸಿನ ಮೂಲೆಯಿಂದ ಓಡಿಸಿದೆ. ಎದ್ದೆ ವಾಕಿಂಗು ಮುಗಿಸಿದೆ, ಹಾಲು ತಗೊಂಡು ಅಲ್ಲೇ ಪಕ್ಕದ ಹೋಟೆಲ್ಲಿನಲ್ಲಿ ಹಾಗೆ ಕಾಫಿ ಹೀರಿದೆ. ಪಕ್ಕದಲ್ಲೇ ಯಾರೋ ಕನ್ನಡ ಪೇಪರು ಹಿಡಿದು ಓದುತ್ತಾ ಇದ್ದರು, ಇಣುಕಿ ನೋಡಿದೆ. ಕನ್ನಡ ಪೇಪರು ಓದೋರು ನಮ್ಮ ಇಡೀ ಏರಿಯಾದಲ್ಲೇ ದುರ್ಬಿನ್ನು ಹಾಕಿ ಹುಡುಕಿದರೂ ಇಲ್ಲ.

ಒಂದು ನಿಮಿಷ ಥಂಘ್ ಹೊಡೆದುಹೋದೆ. ಯಾಕೆ ಅಂತೀರೋ ಬೆಳಿಗ್ಗೆಯಿಂದ ನನ್ನತಲೆ ತಿಂದನಲ್ಲಾ ನನ್ನ ಬಂಧು ಕೋದಂಡರಾಮ ಆತನ ಫೋಟೋ ಐದನೇ ಪುಟದಲ್ಲಿ ಕಾಣಿಸಬೇಕೇ? ಪೇಪರು ಹಿಡಿದವರ ಪಕ್ಕ ಸರಿದೆ ಫೋಟೋ ಕೆಳಗೆ ಏನು ಬರೆದಿದೆ ಅಂತ ಓದಲು ಯತ್ನಿಸಿದೆ. ಹಾಲು ತರಲು ಹೋಗಬೇಕಾದರೆ ಕನ್ನಡಕ ತಗೊಂಡು ಹೋಗಲ್ಲ.... ಇದು ಯಾಕಪ್ಪಾ ಅಂದರೆ ನಾನು ಕಾಫಿ ಹೀರೋ ಕಡೆ ಕೆಲವರು ಹಳೇ ಸ್ನೇಹಿತರು ಬರ್ತಾರೆ ಸ್ವಲ್ಪ ಕನ್ನಡಕ ಕೊಡಯ್ಯಾ ಅಂತ ಇಸಕೊಂಡು ಎರಡು ಮೂರುಗಂಟೆ ಸತಾಯಿಸ್ತಾರೆ. ಅದರಿಂದ ನಾನು ಬುದ್ಧಿವಂತ ಅಂಥಹ ಕಡೆ ಕನ್ನಡಕ ಬಿಟ್ಟು ಹೋಗುತ್ತೇನೆ!

ಪೇಪರು ಓದುತ್ತಿದ್ದವರಿಗೆ ಆ ಫೋಟೋ ಕೆಳಗೆ ಏನು ಬರೆದಿದ್ದಾರೆ ನೋಡಿ ಅಂದೆ. ಅವರು ನನ್ನ ಕಡೆ ಕೊಂಕು ದೃಷ್ಟಿ ಹರಿಸಿ ಪೇಪರು ನನ್ನತ್ತ ಚಾಚಿದರು. ಇವರೇ ಕನ್ನಡಕ ತಂದಿಲ್ಲ ನೀವೇ ಓದಿ ಹೇಳಿ ಅಂದೆ.

ಅವರು ಮತ್ತೊಮ್ಮೆ ಕೊಂಕು ಹರಿಸಿ ಓದಿದರು – ನಮ್ಮ ಕೋದಂಡರಾಮನಿಗೆ ಯಾವುದೋ ಲೋಕಲ್ ಸಂಘಟಣೆಯೊಂದು ಪೀಸ್ ಪ್ರೈಜು ಕೊಟ್ಟದೆ ಅಂತ.

ಕೋದಂಡನಿಗಲ್ಲದೆ ಬೇರೆ ಯಾರಿಗೆ ಈ ಬಹುಮಾನ ಸಿಗಬೇಕು ಅಂತ ಖುಷಿಯಾಯಿತು. ಮನೆಗೆ ಓಡಿಬಂದೆ. ಕೋದಂಡೂಗೆ ಯಾವುದೋ ಅವಾರ್ಡ್ ಬಂದಿದೆ ಅಂತ ಹೆಂಡತಿಗೆ ಹೇಳಿದೆ. ಅವಳೋ ಆಗಲೇ ಫೋನು ಹಿಡಿದು ಕೂತಿದ್ದಳು. ನಾನು ಹೇಳಿದ್ದು ಅವಳಿಗೆ ಗೊತ್ತಾಗಿಲ್ಲ ಅನ್ನೋದು ತಿಳೀತು.



ಸೀದಾ ಮಾಡಿ ಹತ್ತಿ ಮೊಬೈಲು ಹುಡುಕಿದೆ. ನನ್ನ ಬಂಧು ಕೋದಂಡರಾಮನಿಗೆ ಫೋನಿಸಬೇಕಿತ್ತಲ್ಲಾ? ಆತನ ನಂಬರು ಹುಡುಕಿ ಫೋನು ಹಚ್ಚಿದೆ.

ಸುಮಾರು ಸಲ ರಿಂಗ್ ಆದಮೇಲೆ ಆಕಡೆಯಿಂದ ತರಲೆ ನನ್ನ ಮಗನೇ ಅಂತ ಕೇಳಿಸ್ತು.

ಹಲೋ ಹಲೋ ಇದು ಕೋದಂಡರಾಮ್ ಅವರಾ ಅಂದೆ.

ಹೌದೋ ನಾನೇನೇ ಇನ್ನೂ ಸತ್ತಿಲ್ವಾ ಅಂತ ಫೋನು ಮಾಡಿದೀಯಾ.....?

ಛೇಛೇ ಬೆಳಿಗ್ಗೆ ಎದ್ದು ಯಾಕೆ ಕೆಟ್ಟ ಮಾತು ಆಡ್ತೀಯಾ? ನಿನಗೆ ಯಾವುದೋ ಪ್ರಶಸ್ತಿ ಬಂದಿರೋದು ಪೇಪರಿನಲ್ಲಿ ನೋಡಿದೆ. ಕಂಗ್ರಾಟ್ಸ್ ಹೇಳೋಣಾ ಅಂತ...

ನನ್ನ ಮಾತು ಅರ್ಧದಲ್ಲೇ ತುಂಡರಿಸಿದ. ಇದೆಲ್ಲಾ ನಿಮದೇ ಕಿತಾಪತಿ ಅಂತ ಗೊತ್ತು. ನನಗೇನು ಅಷ್ಟೂ ತಿಳಿಯೋಲ್ವಾ? ಪೀಸ್ ಪ್ರೈಜು ಅಂತ ಎಲ್ಲಿದೆ? ನೀವು ತರಲೆ ಬೇಖೂಫ ಕಿಡಿಗೇಡಿ ಮನೆಹಾಳ ಸೋಂಬೇರಿ ಕಥಧಾಸುವ್ವರಗಳು...... ಇನ್ನೂ ಏನೇನೋ ಬರೆಯಬಾರದ ಪದಗಳನ್ನೆಲ್ಲಾ ಸೇರಿಸಿ ಒಂದೂವರೆ ಘಂಟೆ ಜನ್ಮ ಜಾಲಾಡಿಬಿಟ್ಟ.

ಸಂಜೆ ಬರ್ತೀನಿ ಮನೇಗೆ, ಮಿಕ್ಕಿರೋದನ್ನ ಕೊಡೋದಕ್ಕೇ...... ಅಂದ!

ಮಾರಾಯಾ ದಯವಿಟ್ಟು ಬಾ, ಮುಖಾಮುಖೀ ಕೂತರೆ ನಮ್ಮ ಸಮಸ್ಯೆ ಪರಿಹಾರ ಆಗುತ್ತೆ ಅಂದೆ. ಮುಖಾಮುಖೀ ಕೂತರೆ ಎಂಥೆಂಥಹ ಸಮಸ್ಯೆ ಐಸು ಕರಗಿದ ಹಾಗೆ ಕರಗಿದೆ ತಾನೇ? ನನಗೂ ಕೋದಂಡನಿಗೂ ಮತ್ತೆ ಸ್ನೇಹ ಚಿಗುರತ್ತೆ, ಮೊದಲಿನ ಹಾಗೆ ಒಂದೇ ತಟ್ಟೇಲಿ ಉಣ್ಣುತ್ತೇವೆ ಅನ್ನುವುದಕ್ಕಿಂತಲೂ ಬೇರೆ ಸಂತೋಷ ಏನಿದೆ ಹೇಳಿ.....! ನನ್ನ ಮಟ್ಟಿಗಂತೂ ಇದು 'ಚಿಗುರಿದ ಕನಸು'.

✸

---



"ಬಾಲ್ಯ ವಿವಾಹ ಪದ್ಧತಿ ಇದ್ದಿದ್ದರೆ, ವರದಕ್ಷಿಣೆ ತಗೊಂಡು ಡೊನೇಶನ್ ಕೊಡಬಹುದಿತ್ತು..."

# ಅನುಕೂಲ'ಕರ' ಚಾಚಬೇಕು

**- ವೈ.ವಿ. ಗುಂಡೂರಾವ್**

ನಿಮಗೆ ಈ ಕತೆ ಗೊತ್ತೇ ಇದೆ. ಅದೇ ಶಿವ ತನ್ನ ಇಬ್ಬರ ಮಕ್ಕಳಿಗೆ ಏರ್ಪಡಿಸಿದ ಪರೀಕ್ಷೆ. ಗಣೇಶ ಮತ್ತು ಸುಬ್ರಹ್ಮಣ್ಯ ಈ ಇಬ್ಬರಲ್ಲಿ ಯಾರು ಚುರುಕು ಎಂದು ನಿರ್ಧರಿಸುವ ಪರೀಕ್ಷೆ.

ಏನೀ ಪರೀಕ್ಷೆ? ಅವರಿಬ್ಬರೂ ಬ್ರಹ್ಮಾಂಡವನ್ನು ಸುತ್ತಿ ಬರಬೇಕು. ಯಾರು ಮೊದಲು ಬರುತ್ತಾರೊ ಅವರೇ ಗೆದ್ದಂತೆ.

**ಮಾತೃದೇವೋಭವ, ಪಿತೃದೇವೋಭವ ಇರಲಿ, ಒಂದು ಹಂತದವರೆಗೆ**

ಸ್ಪರ್ಧೆ ಪ್ರಕಟಿಸಿದ ತಕ್ಷಣ ಹಿಂದೂ ಮುಂದೂ ಯೋಚಿಸದೆ, ಒಂದಿಷ್ಟೂ ತಡಮಾಡದೆ ಸುಬ್ರಹ್ಮಣ್ಯ ತನ್ನ ವಾಹನವಾದ ನವಿಲನ್ನು ಏರಿ ಹೊರಟೇ ಬಿಟ್ಟ ಬ್ರಹ್ಮಾಂಡ ಸುತ್ತಿಬರಲು. ಏನು ವೇಗ? ಏನು ಚುರುಕು? ನೋಡಿದವರೆಲ್ಲಾ ಅವನ ಬಗ್ಗೆ ಮೆಚ್ಚುಗೆ ಸೂಚಿಸುತ್ತಿದ್ದರು. ಈ ವಯಸ್ಸಿಗೇ ಎಷ್ಟು ವೇಗವಾಗಿ ಹೋಗುವುದಾದರೆ ಮುಂದಿನ ದಿನಗಳಲ್ಲಿ ಇವನನ್ನು ತಡೆಯಲು ಸಾಧ್ಯವೇ ಎಂದು ಯೋಚಿಸುತ್ತಿದ್ದರು. ಸ್ಪೀಡ್ ಕಿಂಗ್ ಎಂಬ ಟೈಟಲ್‌ಗೆ ಇವನು ಅರ್ಹ ಎಂದು ಅನೇಕರು ಸೂಚಿಸಿದರು.

ಇತ್ತ ಗಣಪ ಏನು ಮಾಡಿದ?

ತಂದೆ-ತಾಯಿಯನ್ನು ಒಮ್ಮೆ ನೋಡಿದ, ತುಸು ಯೋಚನೆ ಮಾಡಿದ... ಕೆಲವೇ ಕ್ಷಣ ಅಷ್ಟೆ ಅಮ್ಮ, ಅಪ್ಪ ಹಾಗೇ ಕುಳಿತಿರಿ ಅಂದ. ನಂತರ ಅವರಿಬ್ಬರ ಸುತ್ತಾ ಮೂರು ಸುತ್ತು ಸುತ್ತಿ, ಇಬ್ಬರಿಗೂ ಮೂರು ಮೂರು ನಮಸ್ಕಾರ ಮಾಡಿ ತಾನೂ ಕೂತುಕೊಂಡ. ಶಿವ ಪಾರ್ವತಿಗೆ ಆಶ್ಚರ್ಯ. ಏನು ಮರಿ, ನಿನ್ನ ತಮ್ಮ ಲೋಕಸುತ್ತಿ ವಾಪಸ್ ಬರುವ ಸಮಯವಾಯ್ತು. ನೀನು ಹೊರಟೇ ಇಲ್ಲವಲ್ಲ? ಏನು ಸಮಾಚಾರ? ಎಂದು ಅಪ್ಪ ಅಮ್ಮ ಕಾತುರದಿಂದ ವಿಚಾರಿಸಿದರು.

ಗಣೇಶ ನಕ್ಕ. ಆ ನಗುವಿನಲ್ಲಿ ತುಂಟುತನ ಇತ್ತು. ಅಪ್ಪ, ಅಮ್ಮ, ಇಡೀ ಬ್ರಹ್ಮಾಂಡ ಸುತ್ತೋದಕ್ಕೆ ಇಲೀನೂ ಬೇಡ ನವಿಲೂ ಬೇಡ. ನೀವೇ ಬ್ರಹ್ಮಾಂಡ. ನೀವಿಬ್ಬರೇ ನನ್ನ ಸರ್ವಸ್ವ. ಆದುದರಿಂದ ನಿಮಗೆ ಪ್ರದಕ್ಷಿಣೆ ಹಾಕಿದೆ. ಅದರಿಂದ ಬ್ರಹ್ಮಾಂಡವನ್ನೇ ಸುತ್ತಿದಂತಾಯಿತು ಎಂದು ಜಾಣ್ಮೆಯ ಉತ್ತರ ಕೊಟ್ಟ.

ಶಿವ ಪಾರ್ವತಿಯರಿಗೆ ಅವನ ಚಿಂತನೆ, ಭಕ್ತಿ ನೋಡಿ ಅತ್ಯಂತ ಸಂತೋಷ ಸಮಾಧಾನವಾಯಿತು. ಇಬ್ಬರೂ ಹೃತ್ಪೂರ್ವಕವಾಗಿ ಹರಸಿದರು...

ಈ ಕತೆ ಈಗೆಷ್ಟು ಪ್ರಸ್ತುತ? ಒಂದು ವ್ಯಕ್ತಿ ವಿಕಸನ ಶಿಬಿರದಲ್ಲಿ ಒಬ್ಬ ಗುರುಗಳ ವಾದ ಸರಣಿ ಹೀಗಿತ್ತು:

ಈಗ ನಾವು 21ನೇ ಶತಮಾನದಲ್ಲಿದ್ದೇವೆ. ಎಲ್ಲಾ ರಂಗದಲ್ಲೂ ಸ್ಪರ್ಧೆ. ಆ ಸ್ಪರ್ಧೆಗಳನ್ನು ನಮ್ಮ ಮಕ್ಕಳು ಸಮರ್ಥವಾಗಿ ಎದುರಿಸಬೇಕಾದರೆ ಅವರನ್ನು ಆ ಸವಾಲುಗಳಿಗೆ ಸನ್ನದ್ಧರನ್ನಾಗಿ ಮಾಡಬೇಕು. ಸಮರ್ಥರನ್ನಾಗಿ ಮಾಡಬೇಕು. ಸುತ್ತಮುತ್ತ ಸಮಾಜದಲ್ಲಿ, ದೇಶದಲ್ಲಿ, ಜಗತ್ತಿನಲ್ಲಿ ಆಗುವ ಬದಲಾವಣೆಗಳು ಅವರಿಗೆ ತಿಳಿಯಬೇಕು? ಮತ್ತೆ ಬರೀ ಕುಟುಂಬ, ತಂದೆ, ತಾಯಿ ಅಂತ ಅವರ ಸುತ್ತಾನೇ ಸುತ್ತುತ್ತಾ ಇದ್ದರೆ, ಅವರೇ ನಮ್ಮ ಜಗತ್ತು ಅಂದುಕೊಂಡಿದ್ದರೆ, ಅವರೇ ನಮ್ಮ ಬ್ರಹ್ಮಾಂಡ ಎಂದು ಅಂದುಕೊಂಡಿದ್ದರೆ, ಹೊರಗಿನ ಜ್ಞಾನ ಇಲ್ಲದೆ ಇದ್ದರೆ ಹೊರಗಿನ ಸವಾಲುಗಳನ್ನು ಹೇಗೆ ಎದುರಿಸುವುದು? ಹೇಗೆ ಸನ್ನದ್ಧರಾಗೋದು ಸಮಾಜದ ಡಿಮ್ಯಾಂಡುಗಳಿಗೆ? ಹೇಗೆ ಸ್ಪರ್ಧೆಗಳನ್ನು ನಿಭಾಯಿಸೋದು? ನಮ್ಮ ಮಕ್ಕಳು ಕೂಪಮಂಡೂಕಗಳಾದರೆ ಮನೆಯಲ್ಲೇ ಸುತ್ತುತ್ತಾ ಇದ್ದರೆ?

ದಯವಿಟ್ಟು ಸೆಂಟಿಮೆಂಟಲ್‌ಗಳಾಗಬೇಡಿ. ದಯವಿಟ್ಟು ಫಿಲಾಸಫಿ ಕಲ್ಲಾಗಬೇಡಿ. ದಯವಿಟ್ಟು ಮೌಲ್ಯಗಳನ್ನು ಕನ್‌ಫ್ಯೂಸ್ ಮಾಡಿಕೊಳ್ಳಬೇಡಿ. ಮೇಲಿನ ಉದಾಹರಣಾ ರೂಪದ ಕತೆಯನ್ನು ವಾಸ್ತವವಾಗಿ ಯೋಚನೆ ಮಾಡಿ. ತಂದೆ-ತಾಯಿ ಬಗ್ಗೆ ಪ್ರೀತಿ, ಗೌರವ, ಮುಂತಾದ ವಿಷಯಗಳ ಕುರಿತು ನಾನು ಮಾತಾಡುತ್ತಿಲ್ಲ. ಅವರ ಬಗ್ಗೆ ಡಿಪೆಂಡೆನ್ಸಿ ಕುರಿತು ನಾನು ಮಾತಾಡುತ್ತಿದ್ದೀನಿ. ಆ ಅರ್ಥದಲ್ಲಿ ಮೇಲಿನ ಕತೆ ಓದಿದರೆ, ಹೊಸ ಆಯಾಮ ಬರಬಹುದು ನಮ್ಮ ಯೋಚನಾ ಲಹರಿಗೆ. ನಮ್ಮ ಮಕ್ಕಳು ಇದೇ ಓದಬೇಕು, ಅದೇ ಓದಬೇಕು ಅಂತ ಬಲವಂತ ಮಾಡಬಾರದು. ನಮ್ಮ ಆಸೆ ಆಕಾಂಕ್ಷೆಗಳನ್ನು ಅವರ ಮೇಲೆ ಹೇರಬಾರದು. ಅವರು ಏನಾಗಬೇಕೋ ಅವರೇ ನಿರ್ಧರಿಸಲಿ. ಪೋಷಕರು ಮಕ್ಕಳಿಗೆ ಫೆಸಿಲಿಟೇಟರ್ ಆಗಬೇಕು ಅಷ್ಟೆ. ಸಹಜವಾಗಿ ಬೆಳೆಯುವ ಹಾಗೆ ಬಿಡಬೇಕು, ಅವರವರ ದಾರಿ ಅವರವರೇ ಕಂಡುಕೊಳ್ಳಬೇಕು. ಇತರರು ಕೇವಲ ಅನುಕೂಲಕರ ಚಾಚಬೇಕು ಅಷ್ಟೆ. ಅದಕ್ಕಿಂತ ಹೆಚ್ಚಿನ ಪಾತ್ರ ಪೋಷಕರಿಗಿಲ್ಲ.

ಇದನ್ನೇ ಬಹಳ ಹಿಂದೆ ಡಿವಿಜಿ ಹೇಳಿದ್ದರು-

*ಮಕ್ಕಳಾ ಭವಿಷ್ಯಕ್ಕೆ ಕಕ್ಕುಲತೆಗೊಳಬೇಡ*
*ಪಕ್ವಾಗುವುದು ಭಾಗ್ಯಮೆಂತೆಂದೋಜಗದಿ*
*ದಕ್ಕಿತೇಂ ಕುರುಪಾಂಡುತನಯರ್ಗೆ ರಾಜ್ಯಸುಖ*
*ದಿಕ್ಕವರಿಗವರವರೆ ಮಂಕುತಿಮ್ಮ*

ಮಾತೃದೇವೋಭವ, ಪಿತೃದೇವೋಭವ ಇರಲಿ ಒಂದು ಹಂತದವರೆಗೆ. ಆ ಹಂತದವರೆಗೆ ಅವರು ವಿನಾಯಕನ ಹಾಗೆ ಪೋಷಕರ ಸುತ್ತ ಸುತ್ತುತ್ತಾ ಇರಬೇಕು. ನಂತರ, ಸುಬ್ರಹ್ಮಣ್ಯನ ಹಾಗೆ ಹೊರಜಗತ್ತು ಸುತ್ತಲು ಹೋಗಬೇಕು. ಸುತ್ತಲು ಬಿಡಬೇಕು. ಆಗ ಪೋಷಕರ ಒಲವೂ ಸಿಗುತ್ತದೆ, ಶೋಷಕರ ಬಲವೂ ಗೊತ್ತಾಗುತ್ತದೆ. ಅದನ್ನು ಎದುರಿಸುವ ಶಕ್ತಿಯೂ ಬರುತ್ತದೆ.

✷

# ವರ್ಷಕ್ಕೊಂದು ದಿನ?

**- ಜಿ.ವಿ. ನಿರ್ಮಲ**

'ಏ ವೀರೂ ಎಲ್ಲಿದ್ದೀಯೋ? ಎಂದು ಕೂಗುತ್ತಾ ಘನಶ್ಯಾಮ ಕಾರ್ಖಾನೆಯ ಕಾರ್ಮಿಕರ ಕಛೇರಿ ಕೊಟಡಿಗೆ ನುಗ್ಗಿದ. ವೀರಪ್ಪ ಹೆಸರಿನಲ್ಲಿ ಮಾತ್ರ ವೀರಪ್ಪ, ಒಂದು ಸೊಳ್ಳೆಯನ್ನೂ ಹೊಡೆಯಲಾರದ ಸಾತ್ವಿಕ. ನೋಡಲು ನರಪೇತಲ ನಾರಾಯಣ.

ಇಲ್ಲೇ ಇದೀನಲ್ಲೋ ಶ್ಯಾಮ. ಅದ್ಯಾಕೆ ಹಾಗೆ ಅಬ್ಬರಿಸ್ತಿದೀಯಾ? ನಾನೀಗ ಒಂದ್ ದೊಡ್ಡ ಸಮಸ್ಯೇಲಿ ಸಿಕ್ಹಾಕ್ಕೊಂಡು ಒದ್ದಾಡ್ತಿದೀನಿ ವೀರಪ್ಪ ಉತ್ತರಿಸಿದಾಗ ಶ್ಯಾಮನಿಗೆ ಕೇಳಿಸಿದ್ದು ಎಲ್ಲೋ ಬಾವಿ ಒಳಗಿಂದ ಬಂದಂತಿದ್ದ ಆತನ ಧ್ವನಿ ಮಾತ್ರ. ವೀರೂ ಕಾಣ್ಲೇ ಇಲ್ಲ. ಓಹ್ ವೀರೂ ನೀನು ಅದ್ಯಾವ ಸಮಸ್ಯೇಲಿ ಸಿಕ್ಹಾಕ್ಕೊಂಡು ಇದೀಯೋ ಗೊತ್ತಿಲ್ಲ, ಸದ್ಯಕ್ಕೆ ಸಂದೀಲಿ ಸಿಕ್ಹಾಕ್ಕೊಂಡಿರೋದಂತೂ ನಿಜ. ಮೊದ್ಲು ಅಲ್ಲಿಂದೆದ್ದು ಆಚೆ ಬಾ. ಆಮೇಲೆ ಇಬ್ಬರೂ ಸೇರಿ ಸಮಸ್ಯೇನ ಬಗೆಹರಿಸೋಣ ಎಂದ ಘನಶ್ಯಾಮ.

> **ನಾವು ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಬೋಧಿಸಿದ ಸತ್ಯ, ಧರ್ಮ, ಅಹಿಂಸೆ ಎಲ್ಲ ಮರೆತ್ರೂ ಮುಷ್ಕರ ಮಾತ್ರ ಮರೆತಿಲ್ಲ.**

ಅರೆ, ನನಗೆ ಬಂದಿರೋದು ಅಂತಿಂಥ ಸಮಸ್ಯೆ ಅಲ್ವೋ. ವರ್ಷದಲ್ಲಿ ಒಂದು ದಿನ ಆಯ್ಕೆ ಮಾಡಬೇಕಾದ ಸಮಸ್ಯೆ ಎದುರಾಗಿದೆ.

ಏನು ವರ್ಷದ ಮುನ್ನೂರರವತ್ತೈದು ದಿನಗಳಲ್ಲಿ ಒಂದಿನ ಆಯ್ಕೆ ಮಾಡ್ಕೊಳ್ಳೋದು ದೊಡ್ಡ ಸಮಸ್ಯೇನಾ? ವಾರ್ಷಿಕೋತ್ಸವ, ಕೈಗಾರಿಕಾ ಕಾರ್ಮಿಕರ ದಿನ ಅಂತ ಏನಾದರೂ ಕಾರ್ಯಕ್ರಮ ಮಾಡ್ಬೇಕಾ?

ನೋಡು ಶ್ಯಾಮ ಈಗ ವರ್ಷದಲ್ಲಿ ಕಾರ್ಮಿಕರು. ಮಹಿಳೆಯರು. ಬಾಲಕಾರ್ಮಿಕರು ಇವರಿಗೆಲ್ಲಾ ಒಂದೊಂದು ದಿನ, ಏಡ್ಸ್, ಸಕ್ಕರೆ ಖಾಯಿಲೆ, ಕುಷ್ಟ ರೋಗ ಇತ್ಯಾದಿಗಳಿಗೂ ಒಂದೊಂದು ದಿನ, ಪರಿಸರ ದಿನ, ನೀರಿನ ದಿನ ಹೀಗೆ ನಾನಾ ದಿನಗಳಿವೆ ಅಲ್ವಾ? ಅಂತ ತನ್ನ ವಿಚಾರ ಲಹರೀನ ಹರಿಯಲು ಬಿಟ್ಟ ವೀರು.

ಅಯ್ಯೋ ಅಂತ ದಿನಗಳಿಗೇನು ಕಡಿಮೆ? ವರ್ಷದಲ್ಲಿ ಮುನ್ನೂರರವತ್ತೈದು ದಿನಗಳೂ ಮುಗಿದು, ಮುಂದಿನ ವರ್ಷಕ್ಕೂ ಹರಿದು ಹೋಗತ್ತೆ.'' ಘನಶ್ಯಾಮ ನಿಧಾನವಾಗಿ ನುಡಿದ. ಘನಶ್ಯಾಮನ ನಿರಾಸಕ್ತಿಯ ಉತ್ತರದಿಂದ ವೀರುವಿನ ಕೋಪ ಉಕ್ಕೇರಿತು. ಏನೋ ಘನವಾಗಿ ವಿಷಯ ಮುಂದಿಟ್ಟರೆ, ಸ್ವಲ್ಪವೂ ತಲೆ ಬಿಸಿ ಮಾಡಿಕೊಳ್ಳುವುದಿಲ್ಲವಲ್ಲ ಮಾರಾಯ. ಹಿಂದಿನ ಜನ್ಮದಲ್ಲಿ ಎಮ್ಮೆಯಾಗಿದ್ದನೇನೋ ಎಂದು ಮನಸ್ಸಿನಲ್ಲಿಯೇ ಬೈದುಕೊಂಡ ವೀರಪ್ಪ, ಏರುತ್ತಿದ್ದ ಕೋಪ ನುಂಗಿಕೊಂಡು, ಶ್ಯಾಮ. ಈ ವರ್ಷದ ಕ್ಯಾಲೆಂಡರ್ ನೋಡು. ಹಿಂದೂ, ಮುಸಲ್ಮಾನ, ಕಿರಿಸ್ತಾನ, ಸಿಖ್, ಜೈನ, ಬೌದ್ಧ ಜನಾಂಗದವರ ಹಬ್ಬಗಳಿಗೆ ರಜಗಳಿವೆ ಹೌದೋ ಅಲ್ವೋ? ಅಂತ ಕೀರಲು ಧ್ವನಿಯನ್ನೇ ಎತ್ತರಿಸಿ ಕಿರುಚಿದ.

ಹೌದಯ್ಯಾ ಕ್ಯಾಲೆಂಡರ್ ಇರೋದೇ ಹಬ್ಬ ಹರಿದಿನಗಳನ್ನ ತೋರ್‍ಸೋಕೆ. ಅನುಮಾನವೇನು? ಶ್ಯಾಮ ಘನವಾಗಿ ಗುಡುಗಿದ.

ನನಗೆ ಕ್ಯಾಲೆಂಡರ್ ಬಗ್ಗೆ ಪಾಠ ಹೇಳು ಅಂತ ಇಲ್ಲಿಗೆ ನಿನ್ನ ನಾನು ಕರೆದ್ನಾ? ಮತ್ತಷ್ಟು ಜೋರಾಗಿ ಗೊಣಗಿದ ವೀರಪ್ಪ.

ಅಯ್ಯೋ ರಾಮ, ಪಾಠ ಹೇಳಬೇಕು ಅಂದ್ರೂ ನಂಗೆ ಬರಲ್ಲ. ನೀನು ಕೇಳಿದ್ದಕ್ಕೆ ನಾನು ಹೇಳ್ದೆ ಅಷ್ಟೆ. ನಿನ್ನ ಸಮಸ್ಯೆ ಏನೂಂತ ಬಿಡ್ಸಿ ಹೇಳು.

ಇತ್ತೀಚಿಗೆ ಇವಿಷ್ಟೆ ಸಾಲ್ದೆಂದು ಪ್ರೇಮಿಗಳ ದಿನ, ಅದೇ ವಾಲೆಂಟೈನ್ ಡೇ ಎಂದು ಫೆಬ್ರವರಿಯಲ್ಲಿ ಆಚರಿಸ್ತಾರೆ ಗೊತ್ತಾ? ವೀರಪ್ಪನ ಪಾಟಿ ಸವಾಲು.

ಈಗ ಶ್ಯಾಮನಿಗೆ ಬಂತು ಫಜೀತಿ. ಗೊತ್ತು ಎಂದರೆ ನೀನು ಆಚರಿಸ್ತೀಯಾ? ಎನ್ನಬಹುದೇ ಈ ವೀರೂ. ಹಾಗೇನಾದ್ರೂ ಆ ದಿನ ಮದುವೆ ಆದವ್ರೂ ಮುಕ್ತವಾಗಿ ಯಾರನ್ನ ಬೇಕಾದರೂ ಪ್ರೇಮಿಸಬಹುದು ಎಂದಿದ್ದಿದ್ದರೆ ಎಷ್ಟು ಚೆನ್ನಿರುತ್ತಿತ್ತು ಅಲ್ವಾ? ಎಂದು ಯೋಚಿಸತೊಡಗಿದ.

ಏ, ಶ್ಯಾಮ ಹಾಗೇಕೆ ಬೆಚ್ಚಿ ಬೀಳ್ತಿದೀಯಾ? ಮೈಗೆ ಹುಷಾರಿಲ್ವಾ? ಎಂದು ಕೇಳುತ್ತಾ ವೀರಪ್ಪ ಕ್ಯಾಲೆಂಡರ್ ಗುಡ್ಡದಿಂದ ಆಚೆ ಬರುವ ಪ್ರಯತ್ನ ಮಾಡ್ದ.

ಆಂ, ಗೊತ್ತಿಲ್ದೆ ಏನು? ಶ್ರೀರಾಮಸೇನೆಯವರು ಇದನ್ನು ಅಡ್ಡಿಪಡಿಸಿದಾಗ ದೊಡ್ಡ ಸುದ್ದಿಯೇ ಆಯಿತಲ್ಲಾ. ಅದಿರ್‍ಲಿ, ನಿನಗೆ ಯಾಕೆ ಬೇಕು ಒಂದು ದಿನ ಅಂತ ಮೊದ್ಲು ಒದರು ಅಂತ ಹೇಳ್ತಾ ಶ್ಯಾಮ ತನ್ನ ಕನಸಿನ ಲೋಕದಿಂದ ಆಚೆ ಬಂದ.

ಶ್ಯಾಮ ನಾನು ಹೇಳೋದನ್ನ ಸರಿಯಾಗಿ ಗಮನ ಇಟ್ಟು ಕೇಳು. ನಾನು ಇಷ್ಟು ಕ್ಯಾಲೆಂಡರ್‌ಗಳನ್ನು ರಾಶಿ ಹಾಕ್ಕೊಂಡಿರುವುದು ಯಾಕೆ ಗೊತ್ತಾ? ವೀರಪ್ಪನ ಮತ್ತೊಂದು ಸವಾಲು.

ನಂಗಂತೂ ಗೊತ್ತಾಗ್ತಾ ಇಲ್ಲ. ನಿನ್ನ ಕಿಂಗ್‌ಫಿಷರ್ ಕ್ಯಾಲೆಂಡರ್ ಕಳೆದು ಹೋಗಿದ್ಯಾ?

ವೀರಪ್ಪನಿಗೆ ವಿಪರೀತ ಕೋಪ ಬಂತು. ನೋಡು, ನೋಡು, ಶ್ಯಾಮ, ನನ್ನ ತಾಳ್ಮೆ ಪರೀಕ್ಷಿಸಬೇಡ. ಅಷ್ಟು ದುಬಾರಿ ಕ್ಯಾಲೆಂಡರ್‌ನ ನನ್ನಂಥ ಬಡ ಕಾರ್ಮಿಕನಿಗೆ ಕೊಡೋವ್ರು ಯಾರು? ಇರಲಿ ಆ ವಿಷ್ಯ ಬಿಡು. ಈ ದಿನಗಳಲ್ಲಿ ಮದರ್ಸ್ ಡೇ, ಫಾದರ್ಸ್ ಡೇ, ಸಿಸ್ಟರ್ಸ್ ಡೇ, ಫ್ರೆಂಡ್ಸ್ ಡೇ ಹೀಗೆ ಡೇ ಬೈ ಡೇ ಎಲ್ಲರಿಗೂ ಒಂದೊಂದು ದಿನ ಗೊತ್ತು ಮಾಡೀದಾರೆ ಗೊತ್ತಾ?

ಓ, ವೀರೂ ಎಲ್ಲರ ಡೇಗಳನ್ನು ಆಚರಿಸಿದರೂ ಮಾರನೆಯ ದಿನ ಅವರೆಲ್ಲರನ್ನೂ ಮೂಲೆಗೆ ತಳ್ಳಿ, ಮೈ ಕೊಡವಿಕೊಂಡು ಮರೆತು ಬಿಡ್ತಾರೆ ಇಂದಿನ ಜನಾಂಗ. ಹಾಗಿರುವಾಗ ನಾವು ಯಾಕೆ ಇದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕು? ಎಂದು ಹೇಳಿ ಶ್ಯಾಮ ಮತ್ತೆ ಕಳೆದು ಹೋದ.

ಅಷ್ಟರಲ್ಲಿ ಛಲ ಬಿಡದ ವಿಕ್ರಮಾದಿತ್ಯನಂತೆ ವೀರಪ್ಪ ಶ್ಯಾಮನಿಗೆ ರಾಷ್ಟ್ರೀಯ ಹಬ್ಬಗಳಿಗೆ ಮತ್ತಷ್ಟು ರಜ ಕೊಡ್ತಾರಲ್ಲವೇ? ಮತ್ತೊಂದು ಪ್ರಶ್ನೆ ಹಾಕಿದ.

ಓ ವೀರೂ ನಿನ್ನ ತಲೆ ಕೆಟ್ಟಿದೆಯಾ? ಎಳೆ ಮಕ್ಕಳಿಗೂ ಗೊತ್ತಿರುವ ಈ ವಿಷಯ ಕೇಳಿ ನನ್ನ ತಲೆ ಸರಿ ಇದೆಯಾ ಎಂದು ಪರೀಕ್ಷಿಸುತ್ತಿದೀಯಾ ಹೇಗೆ? ಬಡಬಡಿಸಿದ ಶ್ಯಾಮ ಮತ್ತೆ ಯೋಚನಾ ಪ್ರಪಂಚದೊಳಗೆ ಹೊಕ್ಕ –ಈ ರಜಗಳನ್ನು ಯಾತಕ್ಕಾಗಿ ಕೊಡ್ತಾರೋ? ಇವುಗಳಿಗೆ ಗೌರವ ಕೊಡುವವರ ಸಂಖ್ಯೆ ದಿನೇದಿನೇ ಕಡಿಮೆ ಆಗ್ತಾ ಇದೆ. ಸ್ಕೂಲುಗಳಲ್ಲಿ ಮಕ್ಕಳಿಗೆ ಮಾತ್ರ ಒಂದಷ್ಟು ಸಮಾರಂಭಗಳಿರುತ್ತವೆ. ಮಿಕ್ಕವರು ಅಂದು ಪ್ರವಾಸವೋ, ಪಾರ್ಟಿನೋ, ಸಿನಿಮಾನೋ ಎಂದು ಆಯ್ಕೆ ಮಾಡ್ಕೊಂಡು ಮೋಜು, ಮಸ್ತೀಲಿ ದಿನ ಕಳೀತಾರೆ.

ಶ್ಯಾಮ ಎಲ್ಲಿ ಕಳೆದು ಹೋಗಿದ್ದೀಯಾ? ನನ್ನ ಮಾತು ಕೇಳಿಸ್ತಾ ಇದ್ಯಾ? ವೀರು ಮತ್ತೆ ಅವನನ್ನು ಈ ಲೋಕಕ್ಕೆ ಎಳೆದು ತಂದ.

ಘನಶ್ಯಾಮನ ತಾಳ್ಮೆ ಕೊನೆ ಮುಟ್ಟಿತು. ವೀರು, ನೀನು ಇನ್ನು ಒಂದೇ ಒಂದು ಪ್ರಶ್ನೆ ಕೇಳಿದ್ದೇ ಆದ್ರೆ ನಾನು ಈ ಜನ್ಮದಲ್ಲಿ ನಿನ್ನ ಮುಖ ಮತ್ತೆ ನೋಡಲ್ಲ ಎಂದು ತನ್ನ ಗಟ್ಟಿ ನಿರ್ಧಾರವನ್ನು ಸ್ಪಷ್ಟವಾಗಿ ಹೇಳಿದ.

ಇನ್ನು ಎಳೆದಾಡಿದರೆ ಕೆಲಸ ಕೆಡುವುದೆಂದು ತಿಳಿದ ವೀರಪ್ಪ ಶ್ಯಾಮ, ವರ್ಷಕ್ಕೊಂದು ದಿನ ಎಲ್ಲ ಕ್ಯಾಲೆಂಡರ್‌ಗಳಲ್ಲೂ ಮುಷ್ಕರ ಅಥವಾ ಜಾತಾಗಳಿಗೆ ಅಂತ ಮೊದ್ಲೇ ಗುರುತಿಸಿ ಬಿಟ್ಟರೆ ಒಳ್ಳೇದಲ್ವಾ? ಸುಮ್ಮನೆ ದಿಢೀರ್ ಅಂತ ಸ್ಟ್ರೈಕ್ ಮಾಡಿದ್ರೆ ಬಸ್ ಬರತ್ತೋ, ಇಲ್ವೋ? ರಸ್ತೆ ತಡೆ ಹಾಕ್ತಾರಾ? ಬ್ಯಾಂಕ್‌ಗಳು ಕೆಲಸ ಮಾಡತ್ವಾ? ಅಂತಾ ನಾನಾ ಅನುಮಾನಗಳು.. ಮೊದ್ಲೇ ಟ್ರಾಫಿಕ್ ಜ್ಯಾಮ್ ಗೋಳಿರುವ ಬೆಂಗಳೂರಲ್ಲಿ ರಸ್ತೆಗಳಲ್ಲಿ ಜಾತಾ ಬಂದರೆ ಮತ್ತಷ್ಟು ಟ್ರಾಫಿಕ್ ಜಾಮ್ ಆಗಿ ತೊಂದರೆಯೋ ತೊಂದರೆ. ಹೀಗೆ ಅನೇಕ ಸಮಸ್ಯೆಗಳು. ಅದ್ರ ಬದಲು ಒಂದು ದಿನ ಮುಷ್ಕರಕ್ಕೆ ಅಂತ ಮೀಸಲಿಟ್ರೆ ಆ ದಿನ ಎಲ್ರೂ ಅವರವ್ರ ಗೋಳ್ನ ಹೇಳ್ಕೋ ಬಹ್ದು. ಯಾವ ಗೋಳು ಇಲ್ದೇ ಇದ್ರೂ ಯಾವುದೋ ಒಂದು ಕಾರಣ ಹುಡುಕಿ ಅಡ್ಜಸ್ಟ್ ಮಾಡಬಹ್ದು. ಯಾರಿಗೂ ತೊಂದ್ರೆ ಇರೋದಿಲ್ಲ ಎಂದು ತನ್ನ ಘನವಾದ ಯೋಚನೆಯನ್ನ ಘನಶ್ಯಾಮನೆದರು ತೆರೆದಿಟ್ಟ ವೀರಾಧಿ ವೀರ ವೀರಪ್ಪ.

ಇಷ್ಟು ಹೇಳುವಲ್ಲಿ ಕ್ಯಾಲೆಂಡರ್ ಗುಡ್ಡದಡಿಯಿಂದ ಆಚೆ ಬಂದಿದ್ದ ವೀರಪ್ಪನನ್ನು ತಬ್ಬಿಕೊಂಡು ವೀರು, ತಲೆ ಅಂದ್ರೆ ನಿಂದೇ ಕಣೋ. ನಾವು ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧಿ ಜಿ ಬೋಧಿಸಿದ ಸತ್ಯ, ಧರ್ಮ, ಅಹಿಂಸೆ ಎಲ್ಲ ಮರೆತ್ರೂ ಮುಷ್ಕರ ಮಾತ್ರ ಮರ್ತಿಲ್ಲ. ಯಾವ್ದೋ ಒಂದು ಕಾರಣಕ್ಕೆ ಬಾವುಟ ಹಿಡಿದು ಜೈಕಾರ ಹಾಕುತ್ತಿರುವ ಜನಗಳ ಫೋಟೋಗಳು ದಿನನಿತ್ಯ ಪತ್ರಿಕೆಗಳಲ್ಲಿ, ಟಿವೀಲಿ ನೋಡ್ತಾನೇ ಇರ್ತೀವಿ. ಆದ್ರೆ ನಂಗೆ ಒಂದು ಅನುಮಾನ. ಹೀಗೆ ಒಂದು ದಿನ ಅಂತ ಮುಂಚೇನೇ ಫಿಕ್ಸ್ ಮಾಡ್ಬಿಟ್ರೆ ಮುಷ್ಕರ ಮಾಡೋವ್ರಿಗೆ ಏನೂ ಥ್ರಿಲ್ ಇರಲ್ಲ ಅಲ್ವಾ? ಹಾಗೇನೆ ಪತ್ರಿಕೆಗಳಿಗೆ, ವಾಹಿನಿಗಳಿಗೆ ಬ್ರೇಕಿಂಗ್ ನ್ಯೂಸ್ ಇರಲ್ವಲ್ಲಾ? ಎಂದು ಘನಶ್ಯಾಮನು ಹೇಳಿದಾಗ, ಅವನ ಘನವಾದ ವಾದ ಕೇಳಿ ವೀರಪ್ಪ ನಿರುತ್ತರನಾದ.

✸

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**– ದಂನಳ**

- ಈ ಬ್ರಹ್ಮಾಂಡ ಎನ್ನುವುದು ಒಂದು ಖಜಾನೆಯಂತೆ. ಅದನ್ನು ತೆರೆಯಲು ಒಂದು ಸೂತ್ರ ಇದೆ. ಆದರೆ ಆ ಸೂತ್ರ ಖಜಾನೆಯಲ್ಲೇ ಉಳಿದುಬಿಟ್ಟಿದೆ.
- ಕೋಯಿ ಹೈ? ಹ್ಞಾ! ಕೋಹ್ಲಿ ಹೈ....
- ನೀವು ಪ್ರತಿದಿನ ಒಂದೇ ತರಹದ ಆಹಾರ ಸೇವಿಸುತ್ತಿದ್ದೀರಾ? ಅಭಿನಂದನೆಗಳು, ಏಕೆಂದರೆ ನೀವು ಗೋಮಾತೆ ತರಹ. ಅದೂ ಅಷ್ಟೆ ಪ್ರತಿದಿನ ಒಂದೇ ತರಹದ ಆಹಾರ ತಿನ್ನುತ್ತದೆ.
- ಎ ಕಾಸ್ಟ್ಲಿ ಡಾಕ್ಟರ್ ಡಸ್ ನಾಟ್ ಮೀನ್ ಬೆಟರ್ ಕೇರ್.
- ನಾವು ಹೆಚ್ಚು ಹೆಚ್ಚು ಗೋಡೆಗಳನ್ನು ಕಟ್ಟುತ್ತಿದ್ದೇವೆ. ಸೇತುವೆಗಳನ್ನಲ್ಲ.
- ಜೀವನದುದ್ದಕ್ಕೂ ಏನೇನನ್ನೋ ಗಳಿಸುವುದಕ್ಕಾಗಿಯೇ ಹೋರಾಟ ಮಾಡುತ್ತಿದ್ದರೆ ಈಗಾಗಲೇ ಪಡೆದುದನ್ನು ಆಸ್ವಾದಿಸುವುದು ಯಾವಾಗ?
- ಊರು ಚೊಕ್ಕಟವಾಗಬೇಕಾದರೆ ಯಾರಾದರೂ ಪೊರಕೆ, ಬಕೆಟ್ ಹಿಡಿಯಲೇಬೇಕು.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ನೃತ್ಯಗಾರ್ತಿಯರು ದೇವರ ಅಥ್ಲೀಟ್‌ಗಳು.
- ದಿ ಪ್ರಾಬ್ಲಮ್ ವಿತ್ ಸೋಷಿಯಲ್ ಮೀಡಿಯ ಈಸ್ ದಟ್ ಇಟ್ ಈಸ್ ಗ್ರೇಟ್ ಫಾರ್ ಯುವರ್ ಇಗೊ ಬಟ್ ಟೆರ್ರಿಬಲ್ ಫಾರ್ ಯುವರ್ ಸ್ಯಾನಿಟಿ.
- ವಾದವನ್ನು ಒಪ್ಪಬಹುದು ಆದರೆ ಅಸಹಿಷ್ಣುತೆಯನ್ನಲ್ಲ.
- 'ನನಗೆ ಗೊತ್ತಿಲ್ಲ' ಎಂದು ಹೇಳುವುದು ಬಹಳ ಸುಲಭ ಎಂದು ಅರಿಯುವ ಹೊತ್ತಿಗೆ ನನ್ನ ಆಯುಷ್ಯದ ಬಹುಭಾಗ ಕಳೆದೇ ಹೋಗಿತ್ತು.
- ಸಾವು ಬರುವಾಗ ಸ್ವಾಗತಿಸುವ ಧೈರ್ಯ ಇದ್ದರೆ ಬದುಕು ಸಾರ್ಥಕ.
- ವಾಟ್ ಐ ಲೈಕ್ ಅಬೌಟ್ ಇಂಡಿಯನ್ ಕಲ್ಚರ್ ಈಸ್ ದಟ್ ಯು ಫೀಲ್ ಯುವರ್ ಫುಡ್ ವಿತ್ ಯುವರ್ ಫಿಂಗರ್ಸ್.
- ಸೂರ್ಯ ಸಮುದ್ರದಲ್ಲಿ ಮುಳುಗಿ ಹೋಗುತ್ತಾನೆ. ಆದರೆ ಮುಂಬೈನಲ್ಲಿ ಕತ್ತಲು ಆವರಿಸಲು ಆಸ್ಪದವೇ ಇಲ್ಲ. ಪ್ರತಿ ಸಂಜೆ ನಗರದ ಮೂಲೆ ಮೂಲೆ ಸಂದುಗೊಂದಲಗಳಲ್ಲಿ ಕತ್ತಲು ಇಣುಕಲು ಪ್ರಯತ್ನಿಸುತ್ತಲೇ ಇರುತ್ತದೆ. ಮುಂಬೈಗೆ ರಾತ್ರಿ ಎಂಬುದೇ ಇಲ್ಲ. ದಿ ಸಿಟಿ ನೆವರ್ ಸ್ಲೀಪ್ಸ್.
- ಕೆಲವೊಮ್ಮೆ ನಾನು ಬಯಸುವುದನ್ನು ನೀನು ಮಾತ್ರ ಕೊಡಬಲ್ಲೆ. ಅದು ನಿನ್ನ ಅನುಪಸ್ಥಿತಿ.
- ಮಾರಲು ಹೋಗಬೇಡ. ಕೊಳ್ಳಲು ಕಾರಣಗಳನ್ನು ಸೃಷ್ಟಿಸು.

✷

# ಚುಟುಕು ಮೋಹ

**- ಗಾಯತ್ರಿ ಮೂರ್ತಿ**

**ಒಂ**ದು ವಿಷಯದ ಬಗ್ಗೆ ಸುದೀರ್ಘ ವಿವರಣೆ ನೀಡ ಹೊರಟರೆ ಅದನ್ನು ಕೇಳಿಸಿಕೊಳ್ಳುವ ಸಹನೆ ಯಾರಿಗಿದೆ? ಅದಕ್ಕೆ ಇಷ್ಟೊಂದು ಒಕ್ಕಣೆ ಯಾಕೆ? ಹೇಳೋದನ್ನು ಚುಟುಕಾಗಿ ಹೇಳಿ ಬೇಗ ಮುಗಿಸಬಾರದಾ? ಎಂದು ಕಡ್ಡಿ ಮುರಿದಂತೆ ಹೇಳಿ ಉತ್ಸಾಹದಿಂದ ಮಾತಾಡುವವರ ಮುಖಭಂಗ ಮಾಡುವುದು ಹೊಸತೇನಲ್ಲ. ಆದ್ದರಿಂದಲೇ ಇರಬೇಕು, ಹತ್ತು ಕಟ್ಟೋ ಕಡೆ ಒಂದು ಮುತ್ತು ಕಟ್ಟು ಅಂತ ಹಿರಿಯರು ನಿಖರವಾಗಿ, ಚುಟುಕಾಗಿ ಮಾತಾಡುವ ಮಹತ್ವದ ಬಗ್ಗೆ ಹೇಳಿದ್ದಾರೆ. ಅವರೇನೋ ಮಾತಾಡುವ ಬಗ್ಗೆ ಹೇಳಿದರು. ಆದರೆ ಚುಟುಕು ಎಂಬ ಗುಣವಾಚಕ ದಶಕಗಳು ಕಳೆದಂತೆ ಮಾತಿನ ವಿವರಣೆಗೆ ಮಾತ್ರ ಸೀಮಿತವಾಗದೆ ತನ್ನ ಪ್ರಭಾವವನ್ನು ಎಲ್ಲ ಕ್ಷೇತ್ರಗಳಿಗೂ ಪಸರಿಸಿ ವೈಭವೋಪೇತವಾಗಿ ಮೆರೆಯುತ್ತಿದೆ ಎಂಬುದಂತೂ ಸರ್ವವಿದಿತ.

ಅಂತೂ ಈ ವೇಗದ ಜಗತ್ತಿನಲ್ಲಿ ಎಲ್ಲವೂ ಚುಟುಕಾಗಿರಬೇಕು. ಏಕೆಂದರೆ ಜನರಿಗೆ ಗಂಟೆಗಟ್ಟಲೆ ಯಾವುದರ ಬಗ್ಗೆಯೂ ಸಮಯ ಕಳೆಯಲು ಪುರುಸೊತ್ತಿಲ್ಲ (ಸಿನಿಮಾ, ಟಿ.ವಿ. ಧಾರಾವಾಹಿಗಳ ವೀಕ್ಷಣೆ, ವೀಡಿಯೋ ಗೇಮ್ಸ್, ಫೋನ್ ಚಾಟಿಂಗ್, ಫೇಸ್‌ಬುಕ್‌ಗಳ ಜೊತೆಗೆ, ಈಗ ಟ್ರಾಫಿಕ್ ಜಾಮ್‌ನಲ್ಲಿ ಬಲವಂತವಾಗಿ ಕಳೆಯುವ ಕಾಲ, ಇತ್ಯಾದಿ ಹೊರತು ಪಡಿಸಿ)! ಸಾಹಿತ್ಯ, ಉಡುಪುಗಳು (ವಿಶೇಷವಾಗಿ ಹೆಣ್ಮಕ್ಕಳದು) ಕ್ರಿಕೆಟ್ ಮ್ಯಾಚ್‌ಗಳು, ಹೀಗೆ ಒಂದೇ ಎರಡೇ ಚುಟುಕು ರೂಪದ ಪ್ರಭಾವಕ್ಕೆ ಸಿಕ್ಕಿರುವುದು!

ಹಿಂದಿನ ಕಾಲದಲ್ಲಿ ಮಹಿಳೆಯರು ಧರಿಸುತ್ತಿದ್ದುದು ದೊಡ್ಡದಾದ ಏಳು ಅಥವಾ ಎಂಟು ಗಜದ ಸೀರೆ. ಸೊಂಟವನ್ನು ಮುಟ್ಟುತ್ತಿದ್ದ ರವಿಕೆಯ ತೋಳು ಮೊಣಕೈ ದಾಟಿರುತ್ತಿತ್ತು.! ಕಾಲ ಕಳೆದಂತೆ ಎಂಟು ಗಜದ ಸೀರೆ ಆರು ಗಜಕ್ಕಿಳಿಯಿತು, ರವಿಕೆಯ ಉದ್ದ ಕಡಿಮೆಯಾಯಿತು, ತೋಳಿನ ಉದ್ದ ಕೂಡ. ಉದ್ದ ತೋಳು ಚುಟುಕು ರೂಪ ತಾಳಿತು. ತೋಳಿಲ್ಲದ ರವಿಕೆಯೂ ಬಂತು, ಗಿಡ್ಡ ತೋಳಿನ ರವಿಕೆ ಫ್ಯಾಶನ್ ಆಯಿತು. ಹಿಂದೆ ತೆಗೆಯುತ್ತಿದ್ದ ಉದ್ದನೆಯ ಸೆರಗು ಮಾಯವಾಗಿ ಚುಟುಕು ರೂಪ ತಾಳಿ, ಬೆನ್ನಿನಿಂದ ಸ್ವಲ್ಪ ಮಾತ್ರ ಕೆಳಗಿಳಿದು, ನೆಲದೆಡೆ ಇಣುಕಿ ನೋಡುತ್ತಿತ್ತು! ಏಕೋ ಏನೋ ತಿಳಿಯದು, ಸೆರಗಿನ ಚುಟುಕು ರೂಪ ಮಾಯವಾಗಿ, ಸೆರಗು ನೆಲ ಗುಡಿಸುವ ಮಟ್ಟಕ್ಕೆ ಉದ್ದವಾಗಿ ಬೆಳೆಯಿತು. ಆದರೆ, ಈಗ ಮತ್ತೆ ಉದ್ದನೆಯ ಸೆರಗು ಫ್ಯಾಶನ್ ಆಗಿರುವುದಂತೂ ನಿಜ. ಆದರೆ ನೆಲಕ್ಕೆ ಮುತ್ತಿಕ್ಕುತ್ತಾ, ಕಸ ತೆಗೆಯುವ ಮಟ್ಟಕ್ಕೆ ಇಲ್ಲ. ರವಿಕೆಯ ಉದ್ದ ಕನಿಷ್ಠವಾಗಿದ್ದು, ಅಂದರೆ ಚುಟುಕಾಗಿದ್ದು, ಬೆನ್ನಿನ ಭಾಗದಲ್ಲಂತೂ ಬಟ್ಟೆ ತೀರ ಚುಟುಕಾಗಿ, ಅಂದ ಹಾಗೆ ಎಷ್ಟರ ಮಟ್ಟಿಗೆ ಎಂದರೆ ಬೆನ್ನುರಹಿತ ರವಿಕೆ ಕೂಡ ಲಲನೆಯರನ್ನು ಅಲಂಕರಿಸಿ ನೋಡುಗರ ಮನಸೆಳೆಯುವುದಂತೂ ನಿಜ.

ಇಂದಿನ ಪರಿಸ್ಥಿತಿಯಲ್ಲಿ, ಸೀರೆಯನ್ನು ಟೆಸ್ಟ್ ಕ್ರಿಕೆಟ್‌ಗೆ ಹೋಲಿಸಿದರೆ, ಚೂಡಿದಾರ್ ಅನ್ನು ಒನ್ ಡೇ ಕ್ರಿಕೆಟ್‌ಗೆ, ಇತ್ತೀಚೆಗೆ ಹೆಣ್ಮಕ್ಕಳು ಧರಿಸುವ ತುಂಡು ಲಂಗ, ತುಂಡು ಚಡ್ಡಿಗಳನ್ನು ಟಿ-ಟ್ವೆಂಟಿ ಕ್ರಿಕೆಟ್‌ಗೆ ಹೋಲಿಸಬಹುದಲ್ಲವೇ? ಹಿಂದಿನ ಕಾಲದಲ್ಲಿ ಹೆಣ್ಮಕ್ಕಳು ಕಾಲೇಜಿಗೆ

ಬರುವ ವೇಳೆಗೆ ಲಂಗ ದಾವಣಿ ಅಥವಾ ಸೀರೆಯೇ ಅವರ ದಿರಸು. ಬರಬರುತ್ತ 80-90ರ ದಶಕದಲ್ಲಿ ಅವರ ಡ್ರೆಸ್ ಚೂಡಿದಾರ್‌ಗೆ ಬದಲಾಗುತ್ತಾ ಬಂದು ಒನ್ ಡೇ ಕ್ರಿಕೆಟ್‌ನಂತೆ ಆಕರ್ಷಕ ರೂಪ ತಾಳತೊಡಗಿತು. 90ರ ದಶಕದಲ್ಲಿ ಇನ್ನೂ ಹೆಚ್ಚಿನ ಮಾರ್ಪಾಡಾಗಿ ಜೀನ್ಸ್ ಪ್ಯಾಂಟ್, ಶರ್ಟ್ ಜನಪ್ರಿಯವಾಗತೊಡಗಿತು.

ಇದೀಗ ಅತ್ಯಾಧುನಿಕ ಹೆಣ್ಮಕ್ಕಳು ತುಂಡು ಚಡ್ಡಿ, ತುಂಡಾತಿತುಂಡು ಲಂಗ, ಶಾರ್ಟ್ ಟಾಪ್ ಧರಿಸಿ ಪಡ್ಡೆ ಹುಡುಗರೇನು, ಮುದುಕರ ರಕ್ತದೊತ್ತಡ ಹೆಚ್ಚಿಸುವುದರಲ್ಲೂ ಯಶಸ್ವಿಯಾಗಿದ್ದಾರೆ.

ನಾನು ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ ಡ್ರೆಸ್ ಕೋಡ್ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ನಮ್ಮ ಪ್ರಿನ್ಸಿಪಾಲರು ಆಜ್ಞೆ ಹೊರಡಿಸಿದರು. ಇದಕ್ಕೆ ಕಾರಣವೂ ಇತ್ತು. ಫ್ಯಾಶನ್ ಪ್ರಭಾವ ಹೆಣ್ಮಕ್ಕಳ ಮೇಲೆ ಚೆನ್ನಾಗಿ ಕೆಲಸ ಮಾಡಿತ್ತು. ಅವರೆಲ್ಲ ಬಿಗಿ ಜೀನ್ಸ್, ತುಂಡು ಟಾಪ್ ಧರಿಸಿ ಕಾಲೇಜಿಗೆ ಬರಲಾರಂಭಿಸಿದಾಗ ಪ್ರಿನ್ಸಿಪಾಲರು ಕಟ್ಟುನಿಟ್ಟಾಗಿ ಹಾಗೆ ಬರಬಾರದೆಂದು ತಾಕೀತು ಮಾಡಿದರು.

ಆದರೂ ವಿದ್ಯಾರ್ಥಿನಿಯರು ಡ್ರೆಸ್ ಕೋಡ್‌ಗೆ ಸೊಪ್ಪು ಹಾಕದೆ ತಮ್ಮದೇ ರೀತಿಯಲ್ಲಿ ಡ್ರೆಸ್ ಹಾಕಿಕೊಂಡು ಬಂದಾಗ ಅವರ ತಾಯಂದಿರನ್ನು ಕರೆಸಿ ಮಾತಾಡಿದ್ದೂ ಆಯಿತು. ಪ್ರಿನ್ಸಿಪಾಲರ ಅನುಭವ ಕೇಳಿ. ಮಗಳು ತುಂಡು ಬಟ್ಟೆ ಹಾಕಿಕೊಂಡು ಕಾಲೇಜಿಗೆ ಬರ್ತಾಳೆಂತ ದೂರು ಹೇಳಲು ತಾಯಿಯನ್ನು ಕರೆಸಿದರೆ, ತಾಯಿಯೂ ಅದೇ ರೀತಿ ಡ್ರೆಸ್ ಮಾಡಿಕೊಂಡು ಬರಬೇಕೇ? ಪ್ರಿನ್ಸಿಪಾಲರಿಗೆ ಏನು ಹೇಳಬೇಕೆಂದೇ ತೋಚಲಿಲ್ಲ! ಅಂದರೆ ಚುಟುಕು ಡ್ರೆಸ್ ಪ್ರಭಾವ ಅಷ್ಟರ ಮಟ್ಟಿಗೆ ಜನಗಳ ಮೇಲಾಗಿತ್ತು!

ಯುವತಿಯರ ಫ್ಯಾಶನ್ ಮ್ಯಾಕ್ಸಿಯಿಂದ ಮಿಡಿಯಾಯಿತು, ಮಿಡಿಯಿಂದ ಮಿನಿಯಾಯಿತು. ಈಗ ಮಿನಿಮಿನಿ ಡ್ರೆಸ್ ಫ್ಯಾಶನ್! ಹಾಂ, ಮಿನಿಯೆಂದರೆ ಟೆನಿಸ್ ತಾರೆಯೊಬ್ಬಳ ಸ್ಕರ್ಟ್ ನೆನಪಿಗೆ ಬರುತ್ತದೆ. ವಿಂಬಲ್ಡನ್ ಆಟ ಆಡುವಾಗ ಅವಳ ಸ್ಕರ್ಟ್ ಎಷ್ಟು ಚುಟುಕಾಗಿತ್ತೆಂದರೆ, ಅವಳ ಒಳ ಉಡುಪುಗಳ ಧಾರಾಳ ಪ್ರದರ್ಶನವೇರ್ಪಟ್ಟಿತ್ತು! ಅಂದು ಅವಳ ಉಡುಪು ಸಾಕಷ್ಟು ಟೀಕೆಗೂ ಒಳಗಾಗಿತ್ತು. ಅಲ್ಲ, ಪುರುಷ ಆಟಗಾರರು ಹಾಫ್ ಪ್ಯಾಂಟ್ ತೊಟ್ಟು ಆಡಿದರೂ ಅದು ಅವರ ಮೈ ಮುಚ್ಚಿರುತ್ತದೆ. ಆದರೆ ಮಹಿಳಾ ಟೆನಿಸ್ ಆಟಗಾರ್ತಿಯರೇಕೆ ಚುಟುಕು ಸ್ಕರ್ಟ್ ಧರಿಸಿ ಆಡಬೇಕು ಎಂಬುದು ನನ್ನಂತಹವರಿಗಂತೂ ಅರ್ಥವಾಗದ ವಿಷಯ ಬಿಡಿ.

ಅಂತೆಯೇ ಸಿನಿಮಾಗಳಲ್ಲಿ ನಾಯಕಿಯರ ಡ್ರೆಸ್‌ಗಳು ಚುಟುಕಾಗತೊಡಗಿ, ಇನ್ನು ಸಾಧ್ಯವಿಲ್ಲ ಎನ್ನುವಷ್ಟು ಚಿಕ್ಕದಾಗಿದೆ. ಬಹುಶಃ ಹುಟ್ಟಿದ ಮಗುವಿನ ಡ್ರೆಸ್ ಕೂಡ ಇನ್ನೂ ಸ್ವಲ್ಪ ದೊಡ್ಡದಿರಬಹುದೇನೋ ಎಂಬಷ್ಟು ಚಿಕ್ಕದಾಗಿದೆ. ಅದರ ಪ್ರಭಾವ ನಮ್ಮ ಹೆಣ್ಣು ಮಕ್ಕಳ ಮೇಲೆ ನೋಡ ಬೇಕಾದರೆ ಮಾಲ್‌ಗಳಿಗೆ ಭೇಟಿ ನೀಡಬೇಕು. ಬಿಂದಾಸ್ ಆಗಿ ತುಂಡು ಮಿನಿಮಿನಿ ಚಡ್ಡಿ, ಶರ್ಟ್ ಧರಿಸಿದ ಹುಡುಗಿಯರು ಸಿನಿಮಾ ನಾಯಕಿರನ್ನೂ ಮೀರಿಸುವಂತೆ ಚುಟುಕು ಡ್ರೆಸ್ ಹಾಕಿರುತ್ತಾರೆ.

★★★

ಹಿಂದೆ ಕ್ರಿಕೆಟ್ ಅಂದರೆ ಟೆಸ್ಟ್ ಕ್ರಿಕೆಟ್–ಐದು ದಿನಗಳ ಸುದೀರ್ಘ ಆಟ. ಆದರೆ, ಜನರ ಆ ಅಭಿರುಚಿ ಬದಲಾಗುತ್ತಾ ಬಂದು, ಐದು ದಿನಗಳ ಕ್ರಿಕೆಟ್ ಏಕತಾನತೆ ಎನ್ನಿಸಿತೇನೋ ಇಪ್ಪತ್ತನೆಯ ಶತಮಾನದ ಎಂಬತ್ತರ ದಶಕದಲ್ಲಿ ಅದರ ಜನಪ್ರಿಯತೆ ಸ್ವಲ್ಪ ಕಡಿಮೆಯಾಯಿತು. ಆಗಲೇ ಶುರುವಾದದ್ದು ಒನ್ ಡೇ ಕ್ರಿಕೆಟ್–ಐವತ್ತು ಓವರ್‌ಗಳ ಬಿರುಸಿನ ಆಟ. 20ನೆಯ ಶತಮಾನದ ಕೊನೆಯ ಹಂತದ ವೇಳೆಗೆ ಚುಟುಕು ಕ್ರಿಕೆಟ್ ಜನಪ್ರಿಯವಾಯಿತು. ಅಂದರೆ 20 ಓವರ್‌ಗಳ ಕ್ರಿಕೆಟ್ ಆಟ. ಝಟ್ ಪಟ್ ಎಂದು ಮುಗಿದು ಹೋಗುವ, ಆಟದ ಅಂತಿಮ ಹಂತದವರೆಗೂ ಜಯವು ಯಾರ ಪಾಲಿಗೆ ಎಂಬುದು ನಿರ್ಧರಿಸಲಾಗದ ಈ ಚುಟುಕು ಕ್ರಿಕೆಟ್ ಬಲುಬೇಗ ವೀಕ್ಷಕರ ಕುತೂಹಲ, ಆಸಕ್ತಿ ಹಿಡಿದಿಡುವಲ್ಲಿ ಅತ್ಯಂತ ಯಶಸ್ವಿಯಾಗಿ, ಜನಪ್ರಿಯತೆಯ ತುತ್ತ ತುದಿಗೇರಿ ಟಿ–20 ಕ್ರಿಕೆಟ್ ಎಂದೇ ಖ್ಯಾತಿವೆತ್ತ ಆಟವಾಯಿತು.

★★★

ಹಿಂದೆ ಕತೆಗಳು ಎಂದರೆ ಹಲವಾರು ಪುಟಗಳವರೆಗೆ ವ್ಯಾಪ್ತಿ ಇರುತ್ತಿತ್ತು. ನೀಳ್ಗತೆ ಎಂದರೆ ಮೂವತ್ತು ಪುಟಗಳವರೆಗೂ ಓಡುತ್ತಿತ್ತು. ಅಷ್ಟು ದೊಡ್ಡ ಕತೆಗಳನ್ನು ಓದೋರ್‍ಯಾರೂಂತಲೋ ಏನೋ, ಪತ್ರಿಕೆಗಳವರು ಸಣ್ಣ ಕತೆಗಳಿಗೆ ಪ್ರಾಶಸ್ತ್ಯ ನೀಡತೊಡಗಿದರು. ಮಾಸ್ತಿಯವರು ಸಣ್ಣ ಕತೆಗಳ ಪ್ರವರ್ತಕರು ಎಂದೂ ಖ್ಯಾತರಾದರು. ಅವರು ಓಂಕಾರ ಹಾಡಿದ ಸಣ್ಣಕತೆಗಳ ಪ್ರಕಾರ ಇಂದಿಗೂ ಜೀವಂತವಾಗಿ ನಳನಳಿಸುತ್ತಿವೆ. ಸಣ್ಣ ಕತೆಗಳೂ ದೊಡ್ಡದಾದವು ಎಂದೋ ಏನೋ, ಕತೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ, ಚುಟುಕಾಗಿ ಮುಗಿಸ ಬಲ್ಲಂತಹ ಮಿನಿ ಕತೆ ಜನಪ್ರಿಯವಾಯಿತು. ಇದರ ವ್ಯಾಪ್ತಿ ಅರ್ಧ ಪುಟದಿಂದ ಒಂದು ಪುಟದವರೆಗೆ. ಒಂದೇ ಪುಟದಲ್ಲಿ ಕತೆಯ ಘಟನೆಗಳು ನಡೆದುಹೋಗುತ್ತವೆ. ಕತೆಗೆ ಹೆಚ್ಚಿನ ವಿವರಣೆಯಿಲ್ಲ, ಬಿಗಿಯಾಗಿ ಹೆಣೆದ ಮಿನಿಕತೆ ಪ್ರಕಾರ ಬೇಗನೆ ಜನಪ್ರಿಯವಾಯಿತು. ಕತೆಗಳಿಗೆ ಚುಟುಕಿನ ಗೀಳು ಹಿಡಿದಿದೆ. ಕಾರ್ಡಿನಲ್ಲಿ ಕತೆಗಳು, ಹನಿಗತೆಗಳು, ಒಂದು ಸಾಲಿನ ಕತೆಗಳು ಹೀಗೆ ನಾನಾ ಬಗೆಯ ಚುಟುಕು ಕತೆಗಳು ಹುಟ್ಟಿಕೊಂಡಿವೆ. ಒಂದು ಸಾಲಿನಿಂದ ಒಂದೇ ಪದದಲ್ಲಿ ಕತೆ ಹೇಳುವ ಚಾಕಚಕ್ಯತೆಯೂ ಹುಟ್ಟಿಕೊಂಡೀತೇ ಅಥವಾ ಕತೆ ಅದಕ್ಕಿಂತ ಚುಟುಕಾಗಲು ಸಾಧ್ಯವೇ? ಎಂದೆಲ್ಲಾ ಪ್ರಶ್ನೆಗಳು ನನ್ನನ್ನು ಕಾಡುತ್ತವೆ. ಯೋಚಿಸಿದರೆ ಉತ್ತರವಂತೂ ಗೊತ್ತಿಲ್ಲ!!!

ಚುಟುಕು ಎಂಬ ಮಾತು ಕಾವ್ಯದಲ್ಲಿ ಸೊಗಸಾಗಿ ಪ್ರತಿಫಲಿಸಿದೆ. ಅಂದರೆ ಚುಟುಕು ಸಾಹಿತ್ಯದ ಬಗ್ಗೆ ನಾನು ಹೇಳ್ತಿದೀನಿ. ನಾನು ಬಲ್ಲಂತೆ ಮಾನ್ಯ ದಿನಕರ ದೇಸಾಯಿಯವರು ಚುಟುಕು ಸಾಹಿತ್ಯದ ಪ್ರವರ್ತಕರು. ಚಿಕ್ಕಂದಿನಲ್ಲಿ ನಾನು ಅವರ ಚುಟುಕುಗಳನ್ನು ಓದಿ ಸಂತೋಷ ಪಡುತ್ತಿದ್ದೆ. ಅಷ್ಟೇ ಅಲ್ಲ, ನಮ್ಮ ಪೂಜ್ಯ ತಂದೆಯವರು ಸೊಗಸಾಗಿ ಜೋರಾಗಿ ಪಠಿಸಿ ನಮ್ಮ ತಾಯಿಯೊಂದಿಗೆ ಅದರ ಸ್ವಾರಸ್ಯವನ್ನು ಹಂಚಿಕೊಳ್ಳುತ್ತಿದ್ದು ನೆನಪಿದೆ. ಇತ್ತೀಚೆಗೆ ಎಲ್ಲರೂ ಬಲ್ಲಂತೆ ಮಾನ್ಯ ಡುಂಡಿರಾಜ್‌ರವರು ಚುರುಕಾದ ಚುಟುಕು ಸಾಹಿತ್ಯಕ್ಕೆ ಅತ್ಯಂತ ಜನಪ್ರಿಯರು. ಸುಸ್ತು ಎಂಬ ಚುಟುಕದಲ್ಲಿ ಚುಟುಕಾಗಿ ನಮ್ಮ ರಸ್ತೆಯ ದುರವಸ್ಥೆ ಬಗ್ಗೆ ಕಣ್ಣಿಗೆ ಕಟ್ಟುವಂತೆ ಹೇಳಿಬಿಡುತ್ತಾರೆ.

*ನಡೆಯಲಿಲ್ಲ*
*ಓಡಲಿಲ್ಲ*
*ಕಾರಲ್ಲಿ ಬಂದರೂ ಸುಸ್ತೇ?*
*ಹೌದು ಮಾರಾಯ್ರೇ,*
*ಹಾಗಿದೆ ನಮ್ಮ ರಸ್ತೆ.*

ಜನರ ಸ್ವಭಾವಕ್ಕೆ ಚುರುಕು ಮುಟ್ಟಿಸುವ ಮತ್ತೊಂದು ಚುಟುಕ

*ಮದುವೆಗೆ ಮುಂಚೆ*
*ಬರೀ ಲವ್, ಲವ್, ಲವ್,*
*ಮದುವೆಯ ನಂತರ*
*ಬೌ, ಬೌ, ಬೌ*

ದಾಂಪತ್ಯದ ಬಗ್ಗೆ ಅದೆಷ್ಟು ಚೆನ್ನಾಗಿ ಚುಟುಕಾಗಿ ವಿಶ್ಲೇಷಿಸಿದ್ದಾರೆ! ಹತ್ತು ಪುಟಗಳ ಕಾವ್ಯದ ಬದಲು ನಾಲ್ಕು ಸಾಲಿನ ಚುಟುಕು ಪದ್ಯ ಅದೆಷ್ಟು ಪರಿಣಾಮಕಾರಿಯಾಗಿದೆ!

ಚುಟುಕು ಗೀಳು ಇತ್ತೀಚೆಗೆ ದಾಂಪತ್ಯದತ್ತ ಹರಿದಿದೆ ಎನ್ನುವುದು ಆಧುನಿಕ ಜಗತ್ತಿನ ದುರಂತ. ಮದುವೆಯಾಗಿ ಕೆಲವೇ ತಿಂಗಳುಗಳಲ್ಲಿ, ವಾರದಲ್ಲಿ, ಅಷ್ಟೇಕೆ ಮದುವೆಯ ದಿನವೇ ದಾಂಪತ್ಯ ಮುರಿದು ಬಿದ್ದು, ಚುಟುಕು ದಾಂಪತ್ಯಕ್ಕೆ ಅಂತ್ಯ ಹಾಡುತ್ತದೆ. ಇತ್ತೀಚೆಗೆ ಈ ಚುಟುಕು ದಾಂಪತ್ಯಗಳು ಹೆಚ್ಚುತ್ತಿರುವುದು, ಸಾಮಾಜಿಕ ಪಿಡುಗಾಗಿ ಪರಿಣಮಿಸುತ್ತದೆಯೇನೋ ಎಂದು ಚಿಂತೆಯಾಗುತ್ತದೆ.

ಒಟ್ಟಿನಲ್ಲಿ ಈ ವೇಗದ ಯುಗದಲ್ಲಿ ಎಲ್ಲವೂ ಚುಟುಕಾಗಿರಬೇಕು (ಆದರೆ ಈ ಮಾತು ನಮ್ಮ ಟೆಲಿವಿಷನ್ ಧಾರಾವಾಹಿಗಳಿಗೆ ಮಾತ್ರ ಅನ್ವಯಿಸುವುದಿಲ್ಲ ಎಂಬುದನ್ನು ಹೇಳಬೇಕಾಗಿಲ್ಲ).

✷



# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ



# ಕನ್ನಡ ಗಿನ್ನಡ, ಮೂಲಂಗಿ ಗೀಲಂಗಿ..

**- ಎಚ್.ಕೆ. ನಂಜುಂಡ ಸ್ವಾಮಿ**

**ಏ**ನು, ಊಟ ಗೀಟಮಾಡ್ತೀರೊ? ಇಲ್ಲ ಹೀಗೆ ಟೀವೀ ನೋಡ್ತಾ ಕೂತಿರ್ತೀರೋ? ಎಂದಳು ಲೀಲ. ಓ! ಆಗಲೇ ಊಟದ ಸಮಯವಾಯಿತೇನು? ಫುಟ್ ಬಾಲು-ಗಿಟ್ ಬಾಲು ಅಂತ ನೋಡಿಕೊಂಡು ಟೈಂ ಹೋಗಿದ್ದೇ ಗೊತ್ತಾಗಲಿಲ್ಲ. ಈಗ ಎದ್ದುಬಿಡುತ್ತೇನೆ. ಅಂದಹಾಗೆ ಅಡಿಗೆ ಏನು ಇವತ್ತು? ಪಲ್ಯ-ಗಿಲ್ಯಮಾಡಿದೀಯೋ ಇಲ್ಲ ಯಥಾಪ್ರಕಾರ ಅನ್ನ ಸಾರೋ? ಇವತ್ತು ಅನ್ನ ಸಾರನ್ನೇ ತಿನ್ನಬೇಕು. ಇವತ್ತು ಗ್ರೋಸರಿಸ್ಟೋರಿಗೆ ಬದನೆಕಾಯಿ ತರೋಣವೆಂದು ಹೋಗಿದ್ದೆ. ಈ ಅಂಗಡಿ ಮೂರು ಕಾಸಿಗೆ ಪ್ರಯೋಜನವಿಲ್ಲ. ಎಷ್ಟು ಹುಡುಕಿದರೂ ಬದನೇಕಾಯೂ ಇಲ್ಲ ಗಿದನೇಕಾಯೂ ಇಲ್ಲ. ಬರೀಕೈಯಲ್ಲಿ ಬಂದೆ. ಸರಿ, ನಿನಗಷ್ಟೇ ಸಾಕು ನೆಪ. ಬದನೇಕಾಯಿ ಇಲ್ಲದಿದ್ದರೆ ಏನು, ಮೂಲಂಗೀನೋ ಗೀಲಂಗೀನೋ ತರಬಹುದಾಗಿತ್ತಲ್ಲಾ. ನಿನಗೆ ಗೊತ್ತಿಲ್ಲವೇ ನನಗೆ ಮೂಲಂಗಿ ಹುಳಿ ಅಂದರೆ ಪ್ರಾಣ ಅಂತ? ಓಹೋಹೋ. ಮೊನ್ನೆ ತಾನೆ ಹೇಳಿದಿರಿ, ನನಗೆ ಎರಡೆರಡು ದಿನಕ್ಕೆ ಮೂಲಂಗಿ ಹುಳಿ ತಿಂದು ಬೇಸರ. ಇನ್ನು ಮೂರು ತಿಂಗಳು ಮೂಲಂಗಿಯನ್ನು ಮುಟ್ಟುವುದಿಲ್ಲ ಅಂತ. ಮಾತಿಗೆ ಅಂಕೆ ಗಿಂಕೆ ಏನೂ ಬೇಡವೇ? ಸರಿ ಬಿಡು. ಅನ್ನಸಾರೋ ಗಿನ್ನಸಾರೋ ಏನುಮಾಡಿದ್ದೀಯೋ ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತೀನಿ.

**ಈ ಪದಗಳು ಎಲ್ಲಿಂದ ಬಂದವು? ಅವುಗಳ ಅರ್ಥವೇನು?**

ಬಿಡಿ. ನಮ್ಮ ಗಂಡ ಹೆಂಡತಿ ಜಗಳ ನಿಮಗ್ಯಾಕೆ? ಆದರೂ ಏಕೆ ಹೇಳಿದೆ ಅಂದರೆ ನಮ್ಮ ಮಾತುಕಥೆ ಶುರುವಾದ ಎರಡು ನಿಮಿಷದಲ್ಲಿ ನಾವಿಬ್ಬರೂ ಯಾವ ಸಂಕೋಚವೂ ಇಲ್ಲದೆ, ಗೀಟ, ಗಿಟ್‌ಬಾಲು, ಗಿಲ್ಯ, ಗಿದನೇಕಾಯಿ, ಗೀಲಂಗಿ, ಗಿಂಕೆ, ಗಿನ್ನಾಸಾರು ಅನ್ನೋ ಪದಗಳನ್ನು ಉಪಯೋಗಿಸಿದೆವಲ್ಲ ಈ ಪದಗಳು ಎಲ್ಲಿಂದ ಬಂದವು? ಇದು ಯಾವ ಭಾಷೆ? ಇವುಗಳ ಅರ್ಥವೇನು? ಈ ವಿಷಯ ಯಾವಾಗಲಾದರೂ ಯೋಚನೆ ಮಾಡಿದ್ದೀರಾ? ಈ ಪ್ರಶ್ನೆ ನನ್ನ ಮೆದುಳುಹೊಕ್ಕು ದಾಂದಲೆ ಎಬ್ಬಿಸಲು ಪ್ರಾರಂಭಿಸಿತು. ದಿನಬೆಳಗೆದ್ದರೆ ನಾವು ಉಪಯೋಗಿಸುವ ಗಿಂತ್ರಿ (ಮಂತ್ರಿಯ ಸಹೋದ್ಯೋಗಿ ಇರಬಹುದೆ?) ಗೀಮಗೊಂಡ್ಲು (ತ್ಯಾಮಗೊಂಡ್ಲುವಿನ ಪಕ್ಕದ ಊರು?) ಗಿಕ್ಷರ (ಅಕ್ಷರ ಬರದೆ ಇರುವವರು ಉಪಯೋಗಿಸುವ ಬರವಣಿಗೆ?) ಇತ್ಯಾದಿ ಪದಗಳು ಎಲ್ಲಿಂದ ಬಂದವು? ಅವುಗಳ ಅರ್ಥವೇನು? ಈ ಬಗ್ಗೆ ಯಾರೂ ಸಂಶೋಧನೆ ನಡೆಸಿದ್ದಂತೆ ಇಲ್ಲವಲ್ಲ, ಎಂದು ಯೋಚಿಸತೊಡಗಿದೆ. ಇದರ ಬುಡವನ್ನು ಪತ್ತೆ ಹಿಡಿದೇಬಿಡುತ್ತೇನೆ ಎಂದು ಮನಸ್ಸು ಮಾಡಿದೆ. ಮೊಟ್ಟಮೊದಲು ಮಹಡಿ ಮೇಲಿನ ಲೈಬ್ರರಿಗೆಹೋಗಿ ಅಲ್ಲಿದ್ದ ಕನ್ನಡ-ಕನ್ನಡ, ಕನ್ನಡ-ಇಂಗ್ಲೀಷ್, ಕನ್ನಡ-ಸಂಸ್ಕೃತ, ಕನ್ನಡ-ಎನ್ನಡ ನಿಘಂಟುಗಳನ್ನು ಜಮಾಯಿಸಿದೆ. ಅವುಗಳ ಮೇಲೆಕುಳಿತುಕೊಂಡು ಒಂದೊಂದಾಗಿ ಆ ಪುಸ್ತಕಗಳನ್ನೆಳೆದು ಗಿ ಇಂದ ಶುರುವಾಗುವ ಪದಗಳನ್ನು ಓದತೊಡಗಿದೆ. ಗಿಂಜು, ಗಿಜಿಗಿಜಿ, ಗಿಡ್ಡಿ, ಗಿಣಿಮೂಗುಗಳ ಹಿಂದೆ ಮುಂದೆ, ಅಕ್ಕಪಕ್ಕಗಳಲ್ಲಿ ನೋಡಿದೆ. ಆದರೆ

ಎಲ್ಲೂ ಮೇಲೆ ಹೇಳಿದ ಗೀಲಂಗಿ, ಗಿನ್ನಸಾರು, ಗಿಂತ್ರಿ ಇತ್ಯಾದಿ ಪದಗಳೇ ಇಲ್ಲ. ಹಾಯ್ ಹಾಯ್ ಎನ್ನುತ್ತಾ ತಲೆ ಕೆರೆದೆ. ಎಂತೆಂಥ ವಿದ್ವಾಂಸರುಗಳು ಬರೆದ ಈ ಕನ್ನಡ ನಿಘಂಟುಗಳಲ್ಲಿ ಈ ಪದಗಳಿಲ್ಲದೇ ಇರುವುದರಿಂದ ಇವು ಕನ್ನಡದ ಪದಗಳಲ್ಲವೆಂಬ ನಿರ್ಧಾರಕ್ಕೆ ನಾನು ಬರಲೇಬೇಕಾಯಿತು. ಇವು ಮತ್ತೆಲ್ಲಿನ ಪದಗಳು? ಇವಕ್ಕೂ ಕನ್ನಡಕ್ಕೂ ಏನು ಸಂಬಂಧ? ಎಂಬ ಹತ್ತಾರು ಪ್ರಶ್ನೆಗಳು ತಲೆ ತಿಂದವು. ಇವು ಕನ್ನಡವಲ್ಲದಿದ್ದರೆ ಬೇರಾವುದೋ ಭಾಷೆಯಾಗಿರಬೇಕಷ್ಟೆ? ಇದರ ಎಲ್ಲ ಪದಗಳೂ ಗಿ ಮತ್ತು ಗೀ ಇಂದ ಪ್ರಾರಂಭವಾಗುತ್ತವೆ ಎನ್ನುವುದು ಗಹನವಾದ ವಿಷಯ (ಏಕೆಂದರೆ, ಯಾವ ಕನ್ನಡಿಗನೂ ಅನ್ನ-ಗನ್ನ, ಮೂಲಂಗಿ-ಗೂಲಂಗಿ, ಮಂತ್ರಿ-ಗಂತ್ರಿ ಎಂಬ ಪದ ಜೋಡಣೆಯನ್ನು ಉಪಯೋಗಿಸುವುದಿಲ್ಲ.) ಆದ್ದರಿಂದ, ಮತ್ತು ಈ ಪದಗಳು ಯಾವ ಭಾಷೆಯವು ಎಂದು ಗೊತ್ತಿಲ್ಲದೆ ಇರುವುದರಿಂದ ನಾವು ಸದ್ಯಕ್ಕೆ ಇವನ್ನು ಗಿನ್ನಡದ ಪದಗಳು ಮತ್ತು ಆ ಭಾಷೆಯನ್ನು ಗಿನ್ನಡ ಎಂದು ಕರೆಯಬಹುದು. (ಅದಕ್ಕೆ ನಿಮ್ಮ ಅಭ್ಯಂತರವೇನೂ ಇಲ್ಲ ತಾನೆ?) ಗಿನ್ನಡದ ಬಗ್ಗೆ ನಾನು ಗಾಢವಾಗಿ ಅಭ್ಯಸಿಸಲು ಪ್ರಾರಂಭಿಸಿದ ತರುಣದಲ್ಲೇ ನನಗೊಂದು ಗೂಢವಾದ ರಹಸ್ಯ ಕಾಣಬಂತು. ಗಿನ್ನಡ ಭಾಷೆಗೆ ತನ್ನದೇ ಆದ ಸ್ವತಂತ್ರ ಅಸ್ತಿತ್ವವೇ ಇಲ್ಲ. ಅದು ಕನ್ನಡದ ಬೆನ್ನು ಹತ್ತಿ ಸವಾರಿ ಮಾಡಬೇಕು. ಉದಾಹರಣೆಗೆ, ನಾವು ದೈನಂದಿನ ಆಡುವ ಒಂದು ವಾಕ್ಯವನ್ನು ಗಮನಿಸೋಣ - ನೀನು ಸಾಹೇಬರ ಹತ್ತಿರ ತಲೆಹರಟೆ-ಗಿಲೆಹರಟೆ ಮಾಡಿಗೀಡಿಬಿಡಬೇಡ ಎನ್ನುವ ವಾಕ್ಯ ಎಷ್ಟು ಸೊಗಸಾಗಿದೆ! ಆದರೆ ಅದರಲ್ಲಿರುವ ಕನ್ನಡ ಪದಗಳನ್ನು ತೆಗೆದು ಬರೀ ಗಿನ್ನಡವನ್ನು ಮಾತ್ರ ಇಟ್ಟರೆ ಅದೇ ವಾಕ್ಯ ಗಿಲೆಹರಟೆ ಗೀಡಿಬಿಡಬೇಡ ಎಂದಾಗಿ ಅರ್ಥವಿಲ್ಲದ ಪದ ಸಮುದಾಯವಾಗಿ ಹೋಗಿಬಿಡುತ್ತದೆ. ಅದೇ ತರಹ ಲೀಲ ನನ್ನನ್ನು ಕೇಳಿದ ಪ್ರಶ್ನೆ...... ಏನು, ಊಟಗೀಟ ಮಾಡ್ತೀರೋ ಇಲ್ವೋ?-ಯಿಂದ ಕನ್ನಡವನ್ನು ಎತ್ತಿದರೆ ಅದು ಸುಮ್ಮನೆ ಗೀಟ ಆಗಿ ಕೂತು ಬಿಡುತ್ತದೆ. ಆದರೆ ಎಚ್ಚರಿಕೆಯಿಂದ ಅದನ್ನು ವಿಮರ್ಶಿಸಿದಾಗ ಗಿನ್ನಡ ಕೇವಲ ಕನ್ನಡವನ್ನವಲಂಬಿಸಿರುವ ಪ್ಯಾರಸೈಟಲ್ಲ, ಅದು ಕನ್ನಡನ್ನು ಸಂಪನ್ನಗೊಳಿಸುವ, ಕನ್ನಡಕ್ಕೆ ವಿಶಿಷ್ಟವಾದ ವರ್ಚಸ್ಸನ್ನು ಕೊಡುವ, ಕನ್ನಡದ ಗಳಸ್ಯ-ಕಂಠಸ್ಯ ಎನ್ನುವ ವಿಷಯ ಗೋಚರವಾಗುತ್ತದೆ. ಉದಾಹರಣೆಗೆ, ನಾನು ಪ್ರಾಣಹೋದರೂ ನಿನ್ನ ಸೀರೆ ಗೀರೆ ಒಗೆಯುವುದಿಲ್ಲ ಎನ್ನುವ ವಾಕ್ಯದಿಂದ ಗಿನ್ನಡವನ್ನು ತೆಗೆದಾಗ ನಾನು ಪ್ರಾಣಹೋದರೂ ನಿನ್ನ ಸೀರೆ ಒಗೆಯುವುದಿಲ್ಲ ಎಂಬ ಆತನ ಖಡಾಖಂಡಿತವಾದ ಪ್ರತಿಜ್ಞೆ ಕಂಡು ಬಂದರೂ, ಅದರ ಸಂದಿಯಲ್ಲೇ, ಆದರೆ ರವಿಕೆ, ಲಂಗ ಇತ್ಯಾದಿಗಳನ್ನು ಒಗೆಯಲು ಅವನ ಅಭ್ಯಂತರವಿಲ್ಲ ಎನ್ನುವ ಅರ್ಥ ಬರುವುದಿಲ್ಲವೇ? ಈಗ ಗಿನ್ನಡವನ್ನು ಹಾಕಿನೋಡಿ. ನಾನು ನಿನ್ನ ಸೀರೆ ಗೀರೆ ಒಗೆಯುವುದಿಲ್ಲ ಎನ್ನುವ ವಾಕ್ಯದಲ್ಲಿ ನಾನು ನಿನ್ನ ಸೀರೆ, ರವಿಕೆ, ಲಂಗ ಟವಲ್ಲು, ಅಷ್ಟೇ ಅಲ್ಲ ನಿನ್ನ ಯಾವ ವಸ್ತ್ರಗಳನ್ನೂ ಒಗೆಯುವುದಿಲ್ಲ ಎಂಬ ಅರ್ಥ ಬರುತ್ತದೆ. ನೋಡಿ, ಹೇಗೆ ಆ ಗಂಡನ ಮಾತಿಗೆ ಗಂಡುತನ ತುಂಬಿತು ಈ ಗಿನ್ನಡ ಪದ! ಮತ್ತೊಂದು ಉದಾಹರಣೆ ಕೊಡುವುದಾದರೆ, ಹುಡುಗಿಯನ್ನು ನೋಡಲು ಬಂದ ಗಂಡಿಗೆ ಕೇಸರೀಭಾತು-ಗೀಸರಿಭಾತು ಏನೂ ಕೊಡಲಿಲ್ಲ ಎನ್ನುವ ವಾಕ್ಯದಿಂದ ಗಿನ್ನಡವನ್ನು ತೆಗೆದರೆ, ಹುಡುಗಿಯನ್ನು ನೋಡಲು ಬಂದ ಗಂಡಿಗೆ ಕೇಸರೀಭಾತು ಏನೂ ಕೊಡಲಿಲ್ಲ ಎಂದಾಗುತ್ತದೆ. ಆದರೆ ಪಕೋಡ, ಮೈಸೂರುಪಾಕು ಕೊಟ್ಟಿರಬಹುದು ಎಂಬ ಸಂಶಯ ಹುಟ್ಟುತ್ತದೆ. ಆದರೆ ಅದೇ ವಾಕ್ಯದಲ್ಲಿ

ಕೇಸರೀಭಾತು–ಗೀಸರಿಭಾತು ಏನೂ ಕೊಡಲಿಲ್ಲ ಎಂದಾಗ ಆ ಗಂಡು ಬರಿ ಹೊಟ್ಟೆಯಲ್ಲಿ ವಾಪಸು ಹೊರಟ ಎನ್ನುವುದರಲ್ಲಿ ಯಾರಿಗೂ ಯಾವ ಸಂಶಯವೂ ಇರಬೇಕಾಗಿಲ್ಲ. ಈ ಮೇಲಿನ ದೃಷ್ಟಾಂತಗಳು ಗಿನ್ನಡ ಕನ್ನಡದ ವಾಕ್‌ಸಂಪತ್ತನ್ನು ವೃದ್ಧಿಕರಿಸುತ್ತದೆ ಎಂದು ಸಾಧಿಸಿ ತೋರಿಸುತ್ತವೆ. ಕನ್ನಡ–ಗಿನ್ನಡದ ಬಾಂಧವ್ಯ ಪರಸ್ಪರ ಔಪಯೋಗಿಕವಾದದ್ದು. ಕನ್ನಡವಿಲ್ಲದೆ ಗಿನ್ನಡಕ್ಕೆ ಅಸ್ಥಿತ್ವವೇ ಇಲ್ಲ. ಗಿನ್ನಡವಿಲ್ಲದಿದ್ದರೆ ಕನ್ನಡದಲ್ಲಿ ಸಂಭಾಷಣೆ ಸಪ್ಪೆ. ಇವೆರಡರ ಸಂಬಂದ ಇಂಗ್ಲೀಷಿನಲ್ಲಿ ಸಿಂಬಯೋಸಿಸ್ ಎಂದು ಹೇಳುತ್ತಾರಲ್ಲಾ ಆ ಬಗೆಯದು. ಗಿನ್ನಡವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಇನ್ನೊಂದು ವಿಷಯ ಗೋಚರವಾಗುತ್ತದೆ. ಗಿನ್ನಡವನ್ನು ಸಾಧಾರಣವಾಗಿ ಕನ್ನಡದ ಕರ್ಮಪದದೊಡನೆ ಉಪಯೋಗಿಸುತ್ತೇವೆ. ಆಗಾಗ ಕ್ರಿಯಾಪದದೊಡನೆ ಉಪಯೋಗಿಸುವುದೂ ಉಂಟು. ಬೇರೆಕಡೆ ಅದರ ಉಪಯೋಗ ಅಷ್ಟಿಲ್ಲ. ಉದಾಹರಣೆಗೆ, ಸತ್ಯಭೋಧಾಚಾರ್ಯರು ಬೀದಿಯಲ್ಲಿ ಮಾರುತ್ತಿದ್ದ ಪಕೋಡಗಳನ್ನು ತಿಂದು ಹೊಟ್ಟೆ ಕೆಡಿಸಿಕೊಂಡರು ಎನ್ನುವ ಶುದ್ಧ ಕನ್ನಡ ವಾಕ್ಯವನ್ನು ನೋಡೋಣ. ಅವರ ಜೊತೆ ಅನೇಕ ಇತರರು ಪಕೋಡವನ್ನು ತಿನ್ನುತ್ತಿದ್ದರೂ ಸಹ ಆತ್ಮ ಗೌರವವುಳ್ಳ ಯಾವ ಗಿನ್ನಡ ಪ್ರೇಮಿಯೂ ಸತ್ಯಭೋಧಾಚಾರ್–ಗಿತ್ಯಭೋಧಾಚಾರ್ಯರು ಬೀದಿಯಲ್ಲಿ....... ಎಂದು ಹೇಳುವುದಿಲ್ಲ. ಆದರೆ ಪಕೋಡ–ಗಿಕೋಡ ತಿಂದು ಹೊಟ್ಟೆ ಗಿಟ್ಟೆ ಕೆಡೆಸಿಕೊಂಡರು ಎನ್ನುವ ಪದ ಸಮುದಾಯ ಅವನಿಗೆ ಸ್ವಾಭಾವಿಕವಾಗಿಯೇ ಬರುತ್ತದೆ. ಹಾಗೆಯೇ ಬೀದಿಯಲ್ಲಿ ಮಾರುವ ತಿಂಡಿ ದೇಹಕ್ಕೆ ಒಳ್ಳೆಯದಲ್ಲ, ತಿಂದು ಗಿಂದು ಬಿಡಬೇಡ ಎಂಬ ಅಮ್ಮನ ಎಚ್ಚರಿಕೆಯ ಮಾತಿನಲ್ಲಿ ನಾವು ಗಿನ್ನಡ ಕನ್ನಡದ ಕ್ರಿಯಾಪದದ ಬೆನ್ನ ಮೇಲೇರಿರುವುದನ್ನು ಕಾಣಬಹುದು. ಇನ್ನು ಗಿನ್ನಡದ ಪದಗಳಿಗೆ ಅರ್ಥವಿಲ್ಲವೆ? ಇದ್ದರೆ ಅವುಗಳ ಅರ್ಥವೇನು? ಎಂಬ ಪ್ರಶ್ನೆ ಉಳಿದೇ ಇದೆ. ಈಗ ಗಿಡ್ಲಿ ಎಂಬ ಸರ್ವೇಸಾಧಾರಣವಾದ ಗಿನ್ನಡ ಪದವನ್ನು ನೋಡೋಣ. ಗಿಡ್ಲಿ ಎಂದರೇನು? ಅದು ಇಡ್ಲಿ ಎಂಬ ಪದದ ತದ್ಭವವೇ? ಖಂಡಿತಾ ಅಲ್ಲ. ಏಕೆಂದರೆ, ಹಾಗಿದ್ದಿದ್ದರೆ ಇಡ್ಲಿ–ಗಿಡ್ಲಿ ತಿಂತೀಯಾ? ಎಂಬ ವಾಕ್ಯವನ್ನು ಶುದ್ಧ ಕನ್ನಡಕ್ಕೆ ಭಾಷಾಂತರಿಸಿದರೆ ಅದು ಇಡ್ಲಿ–ಇಡ್ಲಿ ತಿಂತೀಯಾ? ಎಂದು ಉಗ್ಗು ಬಂದವರು ಮಾತಾಡಿದಂತಾಗುತ್ತದೆ. ಆದ್ದರಿಂದ ಗಿಡ್ಲಿ ಎಂದರೆ ಇಡ್ಲಿಯಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು. ಮತ್ತೆ ತಿಂತೀಯಾ ಎಂಬ ಕ್ರಿಯಾಪದವಿರುವುದರಿಂದ ಗಿಡ್ಲಿ ಒಂದು ತಿಂಡಿ ಪದಾರ್ಥ ಎಂದೂ ಹೇಳಬಹುದು. (ವಾಚಕ ಮಹಾಶಯಾ,...ಶಯಳೇ, ಇಲ್ಲಿ ನಾನು ಸ್ವಲ್ಪ ಸ್ವಾತಂತ್ರ್ಯ ವಹಿಸಿದ್ದೇನೆ. ನಿಮಗೆ ಗೊತ್ತಿದ್ದಂತೆಯೇ, ನಾವು–ಕನ್ನಡಿಗರು– ಕೇವಲ ಊಟ ತಿಂಡಿಯನ್ನು ಮಾತ್ರ ತಿನ್ನುತ್ತೇವೆ ಎಂದರೆ ತಪ್ಪಾದೀತು. ನಾವು ಏಟುಗಳನ್ನೂ, ವದೆಗಳನ್ನೂ, ಬೈಗಳಗಳನ್ನೂ ಹಾಗೂ ಲಂಚವನ್ನೂ ತಿನ್ನುತ್ತೇವೆ. ಇರಲಿ. ಅದರ ವಿಷಯ ಈಗ ಏತಕ್ಕೆ?) ಗಿಡ್ಲಿ ಇಡ್ಲಿಯಲ್ಲದ ಆದರೆ ಇಡ್ಲಿಯಂತಹುದೆ ಯಾವುದಾದರೂ ತಿಂಡಿ ಪದಾರ್ಥವಿರಬಹುದು ಎಂಬ ನಿರ್ಧಾರಕ್ಕೆ ನಾವು ಬರಬಹುದು. ಆದರೆ ಗಿಡ್ಲಿ ಇಂತಹ ಒಂದು ಖಚಿತವಾದ ತಿಂಡಿ ಪದಾರ್ಥ ಎಂದು ಹೇಳಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಇನ್ನೂ ಬಹಳ ಸಂಶೋಧನೆ ನಡೆಯಬೇಕಾಗಿದೆ. ಒಂದು ಗಿನ್ನಡ–ಕನ್ನಡ ನಿಘಂಟುವಿನ ಅಗತ್ಯತೆ ಕನ್ನಡಿಗರಿಗೆ ಅತ್ಯವಶ್ಯಕವಾಗಿದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಉದಾಹರಣೆಗೆ ನಾವು ದಿನ ಬೆಳಗಾದರೆ ಉಪಯೋಗಿಸುವ ಕೆಲವು ಗಿನ್ನಡ ಪದಗಳನ್ನು ನೋಡೋಣ. ಗಿಕ್ಕಿ...... ಅಕ್ಕಿಯಂತಹ, ಬೇಯಿಸದೆ ತಿಂದರೆ ಹೊಟ್ಟೆನೋವು ಬರಿಸುವ ಧಾನ್ಯ. ಗಿನ್ನ....... ಗಿಕ್ಕಿಯನ್ನು ಬೇಯಿಸಿದಾಗ ತಯಾರಾಗುವ ಊಟದ ಪದಾರ್ಥ. ಗಿದರಾಸು... ಮದರಾಸಿನ ಹತ್ತಿರದಲ್ಲಿರುವ ತಮಿಳು ಊರು. ಗಿಲಿ...... ಹುಲಿಯಂತಹ ದೊಡ್ಡದೊಂದು ಪ್ರಾಣಿ. (ಉದಾ. ಕತ್ತಲಿನಲ್ಲಿ ಆಚೆಗೆ ಹೋಗಬೇಡ- ಹುಲಿ-ಗಿಲಿ ಇದ್ದಾತು!) ಅಥವಾ ಇಲಿಯಂತಹ ಚಿಕ್ಕದೊಂದು ಪ್ರಾಣಿ. (ಉದಾ. ಈ ರೂಮಿನಲ್ಲಿ ಕೆಟ್ಟ ವಾಸನೆ- ಇಲಿಯೋ ಗಿಲಿಯೋ ಸತ್ತಿರಬೇಕು.) ಗಿಂಡೇಕಾಯಿ....... ಒಂದು ತರಕಾರಿ. (ಕಾಯಿ ಎಂಬ ಪದವನ್ನು ಗಮನಿಸಿ.) ಇದು ಬೆಂಡೇಕಾಯಿಯಂತಿರುವುದೋ ಅಥವಾ ತೊಂಡೇಕಾಯಿಯಂತಿರುವುದೋ ಸರಿಯಾಗಿ ನಿರ್ಧಾರವಾಗಿಲ್ಲ. ಅದು ನಿರ್ಧಾರವಾಗುವವರೆಗೆ ಅದನ್ನು ತಿನ್ನದೇ ಇರುವುದೇ ವಾಸಿ. ಗಿಂಡಿ......ತಿಂಡಿ ಎಂಬ ಕನ್ನಡ ಪದದ ತದ್ಭವ. ತಿನ್ನುವ ಪದಾರ್ಥ. ಕನ್ನಡದ ಗಿಂಡಿ (ಮಗುವಿಗೆ ಗಿಂಡಿಯಲ್ಲಿ ಹಾಲು ಹಾಕಿಕೊಡು) ಯೊಡನೆ ಕನ್ಫೂಸ್ ಮಾಡಿಕೊಳ್ಳಬೇಡಿ. ಗಿನ್ನಡದ ಗಿಂಡಿಯನ್ನು (ಕರ್ಮಪದ) ತಿನ್ನಬಹುದು. ಕನ್ನಡದ ಗಿಂಡಿಯನ್ನು ತಿಂದರೆ ಗಂಟಲಿಗೆ ಸಿಕ್ಕಿಹಾಕಿಕೊಂಡು ತುಂಬ ದೇಹಬಾಧೆಯಾಗುವ ಅಪಾಯವಿದೆ. ಕ್ಷಮಿಸಿ, ಮರೆತಿದ್ದೆ. ನೀವು ವ್ಯಾಕರಣ...ಕ್ಯಾಕರ್ನಾ? ಎಂದು ಅದನ್ನು ಚಿಕ್ಕಂದಿನಲ್ಲೇ ದೂರ ತಳ್ಳಿದವರಲ್ಲವೇ? ನಿಮಗ್ಯಾಕೆ ನಾನು ಕರ್ಮಪದ-ಕ್ರಿಯಾಪದ, ತತ್ಸಮ-ತದ್ಭವ ಎಂದು ಗೋಳು ಹೊಡೆಯುತ್ತಿದ್ದೇನೆ?........ ಒಟ್ಟಿನಲ್ಲಿ ನಮ್ಮ ಕನ್ನಡಕ್ಕೂ ಗಿನ್ನಡಕ್ಕೂ ಇರುವ ಬಾಂಧವ್ಯ ವಿಶಿಷ್ಟವಾದದ್ದು ಎಂದು ನಿಮಗೆ ಮನವರಿಕೆಯಾಯಿತು ತಾನೆ? ಅಷ್ಟೇ ಸಾಕು. ಊಟ-ಗೀಟ ಮಾಡ್ತೀರೊ ಇಲ್ಲ ಹೀಗೆ ತೂಕಡಿಸ್ತಾ ಕೂತಿರ್ತೀರೋ? ಲೀಲ ಪುನಃ ಕೇಳಿದಳು. ಓಃ! ಏನೋ ಯೋಚಿಸ್ತಾ ಹಾಗೆ ಕಣ್ಣಿಗೆ ಜೋಂಪು ಹಿಡಿಯಿತು. ಇದೋ ಬಂದೆ ಎಂದೆ. ಊಟ ಮಾಡ್ತಾ ಲೀಲನ ಜೊತೆ ಗಿನ್ನಡದ ವಿಷಯದಲ್ಲಿ ನನ್ನ ಯೋಚನಾಲಹರಿಯನ್ನು ಪ್ರಸ್ತಾಪಿಸುತ್ತಾ, ಗಿನ್ನಡದ ಬಗ್ಗೆ ನಾನೊಂದು ಪ್ರಬುದ್ಧ ಪ್ರಬಂಧವೊಂದನ್ನು ಬರೆದು ಅದರ ಜೊತೆ ನನ್ನದೇ ಆದ ಗಿನ್ನಡ-ಕನ್ನಡ ನಿಘಂಟೊಂದನ್ನು ಅಂಟಿಸಿ ಕಳಿಸಿದರೆ ಯಾವುದಾದರೂ ವಿಶ್ವವಿದ್ಯಾಲಯ ನನಗೊಂದು ಪಿ.ಎಚ್.ಡಿ. ಪದವಿ ಕೊಡಬಹುದಲ್ಲವೆ? ಎಂದೆ. ಲೀಲ ಅರೆ ಕ್ಷಣ ಯೋಚನೆಮಾಡಿ ತಲೆಯಲ್ಲಾಡಿಸುತ್ತಾ, ನಿಮಗೆ ಪಿ.ಎಚ್.ಡಿ. ಸಿಗುವ ಸಂಭವವಿಲ್ಲ, ಆದರೆ ಗಿ.ಎಚ್.ಡಿ ಸಿಗುವುದರಲ್ಲಿ ಯಾವ ಸಂದೇಹವೂ ಇಲ್ಲ ಎನ್ನುತ್ತಾ ನಕ್ಕಳು.

✷

---

**ಶಿವ ಉವಾಚ**

ದೇವಾ, ಜಗಳವಾಡದ
ಪತ್ನಿ ದಯಪಾಲಿಸು
ವತ್ಸಾ ದೊರಕಿದ್ದರೆ ಅಂಥಾ
ಪತ್ನಿ ನಾನೇಕೆ ಇರುತ್ತಿದ್ದೆ
ಹಿಮಾಲಯದಲ್ಲಿ
ಒಂಟಿ ಒಬ್ಬಂಟಿ

*- ಶೋಭಾ ಪ್ರಮೋದ್*

# ನಹಿ ಜ್ಞಾನೇನ ಸದೃಶಂ, ...ಹಾಗಂದರೇನು ಗುರುಗೋಳೇ?

**- ಎಚ್.ಆರ್. ಹನುಮಂತರಾವ್**

ವಿಷಯ ಸೂಚನೆ: ಕನ್ನಡ ಸಾರಸ್ವತ ಲೋಕದಲ್ಲಿ ಹಾಸ್ಯ ಬರಹಗಳು, ನಾಟಕ ರಚನೆ ಹಾಗೂ ನಟನೆ ಮತ್ತು ಬೊಂಬೆಯಾಟದಲ್ಲೂ ಪರಿಣಿತರಾಗಿದ್ದು ತಮ್ಮದೇ ವಿಶಿಷ್ಟ ಕೊಡುಗೆಯಿಂದ ಶಾಶ್ವತ ಮುದ್ರೆ ದಾಶರಥಿ ದೀಕ್ಷಿತ್ ಅವರು ನಮ್ಮನ್ನಗಲಿ ಸುಮಾರು ಮೂರು ದಶಕಗಳೇ ಕಳೆದು ಹೋಗಿವೆ. ಆದರೂ ಅವರ ಕಥೆ ನಾಟಕಗಳ ಹಾಸ್ಯ ಶೈಲಿ, ಕಂಪು ಇಂದಿಗೂ ಮಾಸದ ಬರವಣಿಗೆಯಾಗಿವೆ. ಅಂದಿನ ದಿ. ರಾ.ಶಿ.ಯವರ ''ಕೊರವಂಜಿ'' ಮತ್ತು ಪತ್ರಿಕೆಗಳಿಗೆ ಹಾಸ್ಯಲೇಖನಗಳನ್ನು ಬರೆಯುತ್ತಲೇ ಹೆಸರುಗಳಿಸಿದವರು. ಎಚ್.ಎ.ಎಲ್. ಕಾರ್ಖಾನೆಯಲ್ಲಿ ವೃತ್ತಿಯನ್ನರಸಿ ದುಡಿಯುತ್ತಾ, ಈ ಎಲ್ಲ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದ ಇವರು ಹೆಚ್ಚಿನ ಪರಿಣಿತಿಗಾಗಿ ಇಂಗ್ಲೆಂಡಿಗೆ ಕಳುಹಿಸಲ್ಪಟ್ಟಾಗ ರಾಶಿಯವರ ಸೂಚನೆಯಂತೆ ಅಲ್ಲಿಯ ತಮ್ಮ ಅನುಭವವನ್ನು ವಿಡಂಬಿಸಿ ಗಾಂಪ ಮಠದವರ ವಿದೇಶ ಪರ್ಯಟನೆಯನ್ನ ಉಕ್ಕಿಬರುವ ನಗೆಯುಂಟಾಗುವ ತೆರದಿ ಬರೆದು ಎಲ್ಲರ ಮೆಚ್ಚುಗೆ ಪಡೆದವರು. ಇವರ ಹಾಸ್ಯ ಶೈಲಿ ಇವರದೇ ಛಾಪೆಯನ್ನ ಹೊಂದಿದ್ದರು, ಸ್ವಲ್ಪ ಮಟ್ಟಿಗೆ ಆಂಗ್ಲ ಸಾಹಿತಿ ಚಾರ್ಲೆಸ್ ಡಿಕೆನ್ಸ್‌ರಿಗೆ ಹೋಲಿಸಬಹುದೇನೋ. ಅವರದೇ ಶೈಲಿಯನ್ನ ಸ್ವಲ್ಪ ಮಟ್ಟಿಗೆ ಅನುಸರಿಸಿ ಇಂದಿನ ಪೀಳಿಗೆಯ ಜನಕ್ಕೆ ಪರಿಚಯಿಸುವ ಉದ್ದೇಶದಿಂದ ಈ ಬರಹ ಮೂಡಿಬಂದಿದೆ. ಹಾಗಾಗಿ ಈ ಲೇಖನ ದಿ. ದಾಶರಥಿ ದೀಕ್ಷಿತ್ ಅವರಿಗೆ ಅರ್ಪಿತ.

ಗುರ್ಗೋಳೆ ಈಚೀಚೆಗೆ ಈ ಮಠದ ಭಕ್ತರಲ್ಲಿಗೆ ಬರುವುದೇ ಕಮ್ಮಿಯಾಗಿದೆ. ಹೀಗೆ ನಡೆದರೆ ಮುಂದೊಂದು ಏಕಾದಶಿ ದಿನ ಒಂದು ಹೊತ್ತು ಗೊಜ್ಜಿನವಲಕ್ಕಿಗೂ ತಪ್ಪಿದರೆ ನುಚ್ಚಿನುಂಡೆಗೂ ಪಂಗನಾಮ ಆಗೋತರಾ ಕಾಣ್ತದೆ. ಬರೀ ನೀರು ಕುಡ್ದೇ ಇರೋಣ ಅಂದ್ರೆ ಆದೂನೂವೆ ಈ ಮುನ್ಸಿಪಾಲ್ಟಿಯವ್ರು ಎರಡು ಮೂರು ದಿನಕ್ಕೊಮ್ಮೆ ತಪ್ಪಿದ್ರೆ ವಾರಕ್ಕೊಂದ್ಸಲ ಬಗ್ಗಡಥರಾ. ನೀರನ್ನ ಬಿಡೋದನ್ನ ಜ್ಞಾಪಿಸಿಕೊಂಡ್ರೆ ಮೈಯೆಲ್ಲಾ ಜೋಮು ಹಿಡಿದಂಗೆ ಆಗೋಯ್ತದೆ ಗುರುಗಳೇ ಎಂದು ಮೊಬೈಲ್ ಫೋನ್ನಲ್ಲಿ ವಾಟ್ಸಪ್ ಚಾಟ್ ಮಾಡುತ್ತಿದ್ದ ಹಳೇ ಕಾಲದ ಗಾಂಪ ಮಠದ ಮಾಡರ್ನ್ ಆವೃತ್ತಿಯ ಶುಂಠೇಶ್ವರ ಮಠದ ಪರಮಾಪ್ತ ಮಾಡರ್ನ್ ಶಿಷ್ಯ ಮಡೆಯ ನಿಟ್ಟುಸಿರುಬಿಟ್ಟಿದ್ದ. ಇರುವ ನಾಲ್ಕು ಶಿಷ್ಯರುಗಳಲ್ಲಿ ಗುರುಗಳ ಇಚ್ಚೆಗೆ ವಿರುದ್ಧವಾಗಿ ಅಲ್ಲಲ್ಲಿ ಹರಿದ ಜೀನ್ಸ್ ಪ್ಯಾಂಟು, ಅಂಗವಸ್ತ್ರ ಧರಿಸುತ್ತಿದ್ದ. ಅವರ ಪ್ರೀತಿಯ ಮಡೆಯ ಅಕಾಲಿಕ ಮರಣದಿಂದ ಶಿವೈಕ್ಯನಾಗಿದ್ದ ಮಡ್ಡಿಯ ಕೊರತೆಯನ್ನ ಇವ ಸ್ವಲ್ಪ ಮಟ್ಟಿಗೆ ನೀಗಿಸಿದ್ದ. ಎಲ್ಲೋ ಯಾರದೋ ತಪ್ಪಿನಿಂದಾಗಿ ಒಂದು ಮುಂಜಾನೆ ಮಠದ ಬಾಗಿಲ ಬಳಿ ಬಿಟ್ಟು ಹೋಗಿದ್ದ ಹದಿನೈದು ದಿನದ ಕೂಸನ್ನು ಕರುಣೆಯಿಂದ ಎತ್ತಿ ಸಾಕಿ ಬೆಳಸಿದವರು ಈ ಗುರುಶುಂಠಾಧಿಪತಿಗಳು. ಹಾಗಾಗಿ ಮಡೆಯ ಅವರ ಮೆಚ್ಚಿನ ಶಿಷ್ಯನಾಗಿದ್ದ ಇದ್ದುದರಲ್ಲಿ ಎಲ್ಲವನ್ನು ನಿಭಾಯಿಸುವಲ್ಲಿ ಇತರರಿಗಿಂತ ಉತ್ತಮ. ಹಾಗಾಗಿ ಅವನಿಗೊಬ್ಬನಿಗೆ ಹೆಚ್ಚಿನ ಸ್ವಾತಂತ್ರ ದೊರಕಿಸಿದ್ದು ಆಶ್ಚರ್ಯವಾಗೇನು ಇರಲಿಲ್ಲ. ಶಿಷ್ಯ ಅದಕ್ಕಲ್ಲವೆ ನಮ್ಮ ಹಿರಿಯ ಗಾಂಪ ಮಠಾಧೀಶರು ಹೇಳುತ್ತಿದ್ದುದು 'ನಹಿ ಜ್ಞಾನೇನ ಸದೃಶಂ' ಮಂಕ. ಹಾಗಂದರೇನು ಗುರುಗಳೇ? ಈ ಸಂಸ್ಕೃತ ಆ ಗಾಂಪರ ಕಾಲಕ್ಕೇ ತ್ಯಾಜ್ಯವೆಂದಾಗ ನೀವೂ ಆ ಭಾಷೆಯಲ್ಲೇ ಹೇಳಿದರೆ ಈ ನಮ್ಮೆಲ್ಲಾರ ಬಿಸಿಯಾಗಿದ್ದ ಮಂಡೆ ತಣ್ಣಗಾಗಲಿಕ್ಕ ಉಂಟಾ, ಹೊಟ್ಟೆಯಲ್ಲಿ ಸಂಕಟ ಇನ್ನಷ್ಟು ಜಾಸ್ತಿಯಾಗುತ್ತದಲ್ಲವಮ್ಮ? ಮಾತಿಗೆ ಬುದ್ಧಿ ಜೀವಿಗಳೇ ಸರಿ ನಮ್ಮ ನಿಮ್ಮನ್ನ ಸೇರಿ ಏನಂದಾರು?

ಮಂಕಾ ಈ ನಡುವೆ ನೀ ಬಹಳವೇ ಯೋಚಿಸುವವನಾಗಿದ್ದಿ ಚೂಟಿಯಾಗಿ ಬುದ್ಧಿವಂತರಂತೆ ಮಾತಾಡಲಿಕ್ಕ ಹತ್ತಿ, ನಮ್ಮ ಮಠದ ಹೆಸರಿಗೇ ಅಪಮಾನ ಮಾಡುತ್ತಿಲ್ಲವಷ್ಟೆ ಆ ಹಾಳು ಮೊಬೈಲ್ ಫೋನ್ನ ಮೊದಲು ನೀವುಗಳೆಲ್ಲರು ಆಚೆಗೆ ಎಸ್ದು ಆ ಸೆಲ್ಫೋನ್ ಜೀವಿಗಳ ಜೊತೆಜೊತೆಯಾಗಿ ನೀವುಗಳು ಅವರಂತೆ ಮಾತಾಡುವುದು ಬಿಡಿ. ಉಪದೇಶಿಸಿದ್ದರು ಶುಂಠೇಶ್ವರ ಮಠಾಧೀಶ.

''ಹೀಗೆ ಧೈರ್ಯವಾಗಿ ಗುರುಗಳೊಡನೆ ನೀ ಮಾತಾಡಿದ್ದೆ ಅಪರೂಪ ಮಂಕ ನಿನ್ನ ಲೆವೆಲ್ ಏನೂ ನಿನ್ನ ನಮ್ಮ ಮಠದ ಸಂಸ್ಕಾರ ಏನು? ನಮ್ಮ ಆಚಾರ, ವಿಚಾರ ಏನು? ಯಾತ್ರ ದೆಸೀಂದ ಹೀಂಗ ಮಠ ನಡೆಸ್ಕಂಡ್ ಬಂದೀವಿ ಅನ್ನೋದ ಮರೆತು ಮಂಗನಂತಾಡಬ್ಯಾಡ ಮಂಕನಷ್ಟೇ ಅಲ್ಪಮತಿಯಾದ ಮರುಳ ತನ್ನದೂ ಉದ್ದುದ್ದೇಕೆ ಸೇರಿಸಿದ್ದ ಮಡೆಯ. ಹೌದಲ್ವಾ ಈ ರೀತಿ ಮಂಕ ಹೇಳಿದ್ದೆ ಇಲ್ಲ, ಹೀಂಗೆ ಮಾತಾಡುತ್ತಿದ್ದರೇ ಒಂದಿವ್ಸ ಇವಂತಲೇಲಿರೋ ಚೂರು ಮೆದುಳು ಸುಟ್ಟು ಕರಕಲಾಗಿ ದೊಡ್ಡಾಸ್ಪತ್ರೆ ಸೇರೋದು ಗ್ಯಾರಂಟಿ ಆವಾಗ...''

''ಶಿಷ್ಯ ಮಂಕಾ, ಈ ನಿನ್ನ ಜಿಜ್ಞಾಸೆ ಹಿಂದಿನ ಯಾವ ಗಾಂಪೋಪನಿಷದ್ಗೂ ಕಮ್ಮಿ ಇಲ್ಲ, ಆದರೆ ಮೊದಲು ಜ್ಞಾನ ಅಂದರೆ ಏನು ಹೇಳುವಂತವನಾಗು?''

''ಗುರುಗೊಳೇ, ವಾರಕ್ಕೆ ಎರಡು ದಿನವಾದ್ರೂ ಎರಡೂ ಹೊತ್ತು ಇಲ್ಲಿ ಹೊಟ್ಟೆ ತುಂಬಾ ಅಶನ ಸಿಕ್ಕಿದ್ದೇ ಅಪರೂಪ. ಆಂದ್ಮ್ಯಾಕೆ ಜ್ಞಾನದ ಬಗ್ಗೆ ಮಂಕ ತಿಳಿಯುವದಾದರೂ ಹೇಗೆ? ಅದೇನು ನೆಶ್ಯದ ಡಬ್ಬಿಯೇ? ಆ ಶ್ರಮಕ್ಕೆ ಹೊಟ್ಟೆ ಸ್ವಲ್ಪವಾದರೂ ತುಂಬಿರ ಬೇಡವೇ, ಪಾತ್ರೆ ಡಬ್ಬಿಗಳೆಲ್ಲಾ ಖಾಲಿಖಾಲಿಯಾಗಿದ್ದ ಅಡಿಗೆ ಮನೆಯನ್ನು ಸಾರಿಸುತ್ತಾ ಅದುವರೆಗೂ ಸುಮ್ಮನಿದ್ದ ಮರುಳ ಪಲುಕಿದ. ತಮ್ಮ ಪೂರ್ವಾಶ್ರಮದಲ್ಲಿ ನಿರಂತರ ಜ್ಞಾನಚೂರ್ಣ ಸೇವಿಸುತ್ತಿದ್ದನು. ಹೀಗೆ ಜ್ಞಾಪಿಸಿ ಗುರುಗಳನ್ನು ಲೇವಡಿ ಮಾಡಬಯಸಿದ್ದ ಈ ಅಷ್ಟಾವಕ್ರ. ಅದೂ ಅಲ್ಲದೆ ಯೋಚಿಸುವುದು ನಮ್ಮೀ ಮಠದ ಸ್ವತ್ತಲ್ಲ ಎಂದು ನೀವೇ ಅಧಿಕೃತವಾಗಿ ಅಪ್ಪಣೆ ಮಾಡಿರುವುದನ್ನ ಮರೆತರೋ ಹೇಗೆ ಗುರುಗಳೇ? ಹಸಿವಿನಿಂದಾಗಿ ಹಿಂದಿನ ದಿನದ ಮಿಕ್ಕಿದ್ದ ಉಸಲಿಯ ಕಾಳನ್ನು ಬಾಯಲ್ಲಿ ಹಾಕಿಕೊಳ್ಳಲು ಬಾಯ್ತೆರದು ಶುಂಠ ಮಾತಿಗೆ ಒಗ್ಗರಣೆ ಹಾಕಿದ.

''ಜ್ಞಾನವಿಲ್ಲದವರು ಆ ಬಗ್ಗೆ ವಿದೇಶಗಳಿಗೆ ಯಾರದೋ ದುಡ್ಡಲ್ಲಿ ಹ್ಯಾಗೋ ಹೋಗಿ ಯಾರಿಗೂ ಅರ್ಥವಾಗದ ಡಾಕ್ಟರೇಟ್ ಬಿರಿದು ಪಡೆದು ಬಂದು ಏನೂ ತಿಳಿಯದಿದ್ದರೂ ನಮಗೆ ಸರಿಸಮಾನರಿಲ್ಲ ಎಂದು ಹೇಳಿಕೊಳ್ಳುವ ಇವರುಗಳಿಗೆ ಏನೇ ಹೇಳಿದರೂ ಇನ್ನೊಬ್ಬರ ಮಾತು ಕೇಳಲಾರರು ಸಹಿಸಲಾರರು. ಅಂಥವರು ತಾವೇ ಮಹಾಜ್ಞಾನಿಗಳೆಂದು ಭಾವಿಸುತ್ತಾರೆ. ಅವರ ಲೆಕ್ಕದಲ್ಲಿ ''ನಹಿ ಜ್ಞಾನೇನ ಸದೃಶಂ'' ಅಂದರೆ ಹಾಗೆ ಜ್ಞಾನವನ್ನ ಪಡೆದವರಲ್ಲಿ ಅವರಿಗೆ ಸರಿಸಮಾನರಿಲ್ಲ ಎಂದೇ ಅರ್ಥ ತಿಳಿಯಿತಾ ಮಂಕ ಮಡೆಯ? ನಾವು ಆ ಕಾಲದ ಗಾಂಪ ಮಠದ ಶಾಖೆಯಾದ ಶುಂಠೇಶ್ವರ ಮಠದವರು ಹಾಗಲ್ಲ, ಜ್ಞಾನವೇ ನಾಸ್ತಿ ಅಂದ್ರೆ ಪರಂಪರೆ ಮತ್ತು ಅಜ್ಞಾನವೇ ನಮ್ಮ ಆಸ್ತಿ ಎಲ್ಲ ವಿಷಯದಲ್ಲು.''

ಹಳೇಕಾಲದ ಗಾಂಪ ಮಠದ ಗುರುಗಳ ಉತ್ತರಾಧಿಕಾರಿಯಾಗಿದ್ದ ಶುಂಠನ ವಂಶಸ್ತರು ನಡೆಸಿಕೊಂಡು ಬಂದಿದ್ದ ಈ ಶುಂಠೇಶ್ವರ ಮಠದ ನಿರ್ವಹಣೆ ಗುರುಗಳಿಗೆ ಸುಲಭವಾಗೇನೂ ಇರಲಿಲ್ಲ, ತನಗೂ ತನ್ನ ಶಿಷ್ಯರಿಗು ಅರೆ ಹೊಟ್ಟೆಯಾಗಿ ಅವರನ್ನು ಪೇಚಿಗೆ ಸಿಕ್ಕಿಸಿದ್ದು ಅನೇಕ ಬಾರಿ. ಆದರೆ ಯಾರನ್ನೂ ಕೇಳೀ, ಭಿಕ್ಷೆ ಬೇಡಬಾರದೆಂಬುದೇ ಇಲ್ಲಿ ನಿಯಮ. ಹಿಂದಿನಿಂದಲೂ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಈ ಮಠ ಯಾವ ರಾಜಕಾರಣಿಯ ಬಂಡವಾಳಶಾಹಿಯ ಬಾಲ ಹಿಡಿಯದೆ ತಮ್ಮ ಸ್ವಾತಂತ್ರ್ಯ ಕಾಪಾಡಿಕೊಂಡಿದ್ದವರು. ಅದೇ ಕಾರಣಕ್ಕೆ ಯಾವ ಪಾರುಪತ್ತೇದಾರನೂ ಇಲ್ಲದ ಮಠವನ್ನ ಶಿಷ್ಯರುಗಳೇ ನಿಭಾಯಿಸುತ್ತಿದ್ದರು. ಅಸಲಿಗೆ ಮಡೆಯನೇ ಪಾರುಪತ್ತೆದಾರ.

''ನಮ್ಮ ಹಿಂದಿನ ಆಚಾರ ನೀತಿ ವ್ಯವಹಾರಗಳಿಗೆ ಯಾವುದೇ ಅಡ್ಡಿ ಆತಂಕಗಳಿಲ್ಲದೆ, ದೊಡ್ಡ ಶಿಷ್ಯ ಸಮುದಾಯವೇ ಹೊಂದಿ, ಒಂದು ಕಾಲ್ದಲ್ಲಿ ಈ ಮಠ ಸಾಕಷ್ಟು ಶ್ರೀಮಂತವಾಗಿದ್ದುದು. ಇಂದೇಕೆ

ಹೀಗಾಯಿತು ಗುರುಗೋಳೇ, ನಂಗ್ಯಾಕ ಈತರದ ಶಿಕ್ಷೆ?'' ಶುಂಠ ಅಲವತ್ತು ಕೊಂಡ. ಅಪರೂಪಕ್ಕೆ ಭಕ್ತರೊಬ್ಬರು ಮನೆಯಲ್ಲಿ ಗುರುಪೀಠಕ್ಕೆ ಪಾದಪೂಜೆ ಮಾಡಿಸಿಕೊಂಡು ಸುಮಾರು ತಿಂಗಳೆ ಕಳೆದಿತ್ತು. ಅವತ್ತಿನ ಭೂರಿ ಭೋಜನ ಜೊತೆಗೆ ಕಾಯಿ ಒಬ್ಬಟ್ಟು, ಬಿಸ್ಕತಾಂಬೊಡೆ, ಕುಂಬಳಕಾಯಿ ಮಜ್ಜಿಗೆ ಹುಳಿ ನೆನಪಿಸಿಕೊಂಡು ಶುಂಠ ಅನೇಕ ದಿನಗಳವರೆಗೆ ಜೊಲ್ಲು ಸುರಿಸಿದ್ದ.

''ಹಾಗಾದರೆ ಎಲ್ಲಾ ಸರಿಯಾಗಿ ತಿಳಿದಿದ್ದವರನ್ನು ಏನು ಮಾಡಬೇಕು? ಕಷ್ಟಪಟ್ಟು ವ್ಯಾಸಂಗ ಸಂಶೋಧನೆ ಮಾಡಿದವರೆಲ್ಲ ಭೂಗತರಾಗಬೇಕೆ?'' ಮಡೆಯನ ಪ್ರಶ್ನೆ. ''ಅವರುಗಳಿಗೇನೂ ಕೊಡದಿದ್ದರೂ ಸುಮ್ಮಿರುತ್ತಾರೆ. ಕಾರಣ ಭಗವದ್ಗೀತೆಯಲ್ಲಿ ಹೇಳಿದಂತೆ ಅವರುಗಳು ಸ್ಥಿತಪ್ರಜ್ಞರು. ಅವರುಗಳು ಅಂಥಹವಕ್ಕೆ ಕೈ ಒಡ್ಡುವರಲ್ಲವಲ್ಲ? ಯಾವಯಾವುದೋ ಅಕ್ರಮಗಳನ್ನು ಮಾಡಿ ನಿಜವಾಗಿ ಭೂಗತರಾದವರೇ ಇಂದು ಇಂತಹ ಪುರಸ್ಕಾರಗಳಿಗೆ ಯೋಗ್ಯರೆಂದು ನಿರ್ಧರಿಸಿಬಿಟ್ಟರೆ ಮುಗಿಯಿತು...''

ಗುರುಗಳು ಉಲಿದರು ''ಅದೆಲ್ಲ ಸರ್ಕಾರಕ್ಕೆ ಹೇಗೆ ತಿಳಿಯಬೇಕು ಗುರುಗೋಳೇ?'' ಮಂಕ ಪ್ರಶ್ನೆ ಹಾಕಿದ ಯಾವ ಹೊತ್ತು ಈ ಪರಿ ಮೆದುಳಿಗೆ ಕೆಲಸ ಕೊಟ್ಟವನಲ್ಲ. ಅವನ ತಲೆ ಈಗ ನಿಜಕ್ಕೂ ಕಾದ ಬಾಂಡಲಿಯಂತಾಗಿತ್ತು. ''ಅಯ್ಯಾ ಮಂಕ ಅಷ್ಟಲ್ಲದೇ ನಿನಗೆ ಈ ಹೆಸರು ಇಟ್ಟಿದ್ದಾರೆಯೇ? ಸರ್ಕಾರದಲ್ಲಿರುವವರನ್ನು ಓಲೈಸಿಕೊಳ್ಳುವ ಶಕ್ತಿಯಿರುವ ಈ ಮಂದಿಗೆ ಅದೇನು ಕಷ್ಟ?'' ಗುರುಗಳು ಬೇಸರಿಸಿದರು. ಬಿಸಲಿನ ಮಧ್ಯಾಹ್ನದ ಬೇಗೆಗೆ ಸರಿಯಾಗಿ ರಿಪೇರಿಯಾಗದ ವಿದ್ಯುತ್ ಬೀಸಣಿಗೆಯೂ ಇಲ್ಲದ ಆ ಮಠದಲ್ಲಿ ಎಲ್ಲರ್ಗಿಗೂ ಉಸಿರು ಕಟ್ಟುವಂತಿತ್ತು. ಮಡೆಯ ತಲೆಯ ಮೇಲೆ ಎರಡು ಕೈಯಿಟ್ಟು ತನ್ನ ಮಾತು ಸೇರಿಸಿದ. ಅದು ಅವರುಗಳೇ ಎಲ್ಲೆಲ್ಲಿ ಯಾರ್ಯಾರ ಕೈ ಬಾಯಿ ಕಾಲು ಹಿಡಿಯಬೇಕೋ ಅವರನ್ನ ಹಿಡಿದು ಅವರುಗಳೇ ಸಿಂಡಿಕೇಟ್ ಮಾಡಕಂಡ್ ಮಾಡರ್ನ್ ಪ್ರಭುಗಳ ಜೊತೆಜೊತೆಗೆ ಇರ್ತಾರೆ ಆಲ್ಲವ್ರ ಗುರುಗಳೇ?''

''ಶಿಷ್ಯರುಗಳಾ, ನೀವೆಲ್ಲಾ ನಿಮ್ಮ ಅಂಕೆ ಮೀರಿ ಏನೇನೋ ಮಾತಾಡಲಿಕ್ಕೆ ಹೊಂಟಿವ್ರಿ? ನಿಂಗ್ಯಾಕೆ ಈ ಜನಗೊಳ ಉಸಾಬರಿ? ಆ ಬುದ್ಧಿ ಜೀವಿಗಳ ಮಟ್ಟಕ್ಕ ನೀವ್ ಬರೂದಕ್ಕ ಸಾಧ್ಯವಿಲ್ಲ ಕನಸ ಕಾಣಬ್ಯಾಡ್ರಿ. ಅದಕ್ಕೆ ಇದು ಶುಂಠ ಮಠ ಎನ್ನೋದ್ನ ಮರೀಬ್ಯಾಡಿ, ಅದರ ನಮ್ಮಗಳದೆ ಆದ ಸಂಸ್ಕೃತಿ ಸಂಪ್ರದಾಯ ದೊಡ್ಡದಿದೆ ಅದಕ್ಕೆ ಬುದ್ಧಿವಂತರಂತೆ ಮಾತಾಡಿ ಅಪಮಾನ ಮಾಡಬ್ಯಾಡಿರೀ, ನಿಮ್ಮ ಲಿಮಿಟ್ನ್ಯಾಗ ಇದ್ದರು ಸರಿ, ಇದು ಗುರುಗಳ ಆಶೀರ್ವಾದ ವಚನ. ಗುರುಗಳ ಹೊಟ್ಟೆ ಹಸಿವಿನಿಂದಾಗಿ ಪದ ಹಾಡಲಾರಂಭಿಸಿತ್ತು, ಇದ್ದ ಒಂದೇ ದೊಡ್ಡ ಚಾಪೆಯನ್ನ ಮಡಚಿ ಹಾಸಿ, ನೀರು ಕುಡ್ದು ಮಲಗಲು ಶತಪಥ ಪ್ರಯತ್ನಸಿದ್ದರು. ಮಡೆಯ ಓಡಿ ಬಂದು ಚಾಪೆಯನ್ನ ಹಾಸಿ ಒತ್ತಿದ ದಿಂಬನ್ನು ಜೋಡಿಸಿ ಪಕ್ಕದಲ್ಲೊಂದು ನೀರು ತುಂಬಿದ ಪಾತ್ರೆಯನ್ನಿಟ್ಟು ತನ್ನ ಮೊಬೈಲ್ ಚಾಟ್ಗೆ ಹಿಂತಿರುಗಿದ ಮಂಕನಿಗೆ ಅವನ ಹೆಸರಿಗೆ ತಕ್ಕನಾಗೇ ಮಂಕುದಿಣ್ಣೆನೆ. ''ಈ ಸ್ವಾಮಿ ಇತರೆ ಯಾವಯಾವುದೋ ಜಂಗಮರಿಂದ ಹಿಡಿದು, ಬೇರ್ಬೇರೆ ಎಂಟರ್ಸ್ವಾಮಿಗಳು, ಬ್ರಾಂಬ್ರ ಪೀಠಾಧಿಪತಿಗಳು, ಮಸೀದಿ ಫಕೀರರು, ಕ್ರಿಶ್ಚಿಯನ್ ಪಾದ್ರಿಗಳು ಎಲ್ಲಾನೂವೆ ಹಣ ಎಲ್ಲ ಕಡೆಯಿಂದ ಪಡ್ಕಂಡು ಜುಮ್ ಅಂತ ಮೆರೀತಾ ಇರೋವಾಗ. ತುಂಬಿದ ಹೊಟ್ಟೆ ಇರ್ಲಿ ಮಾನಮುಚ್ಚೋಕು ಸರಿಯಾದ ಕೌಪೀನ ಶಾಲುಗಳು ಸಿಕ್ದೆ ಹುಳ ತಿಂದು ಎಲ್ಲೆಲ್ಲೂ ತೂತು ಬಿದ್ದಿರೋ ಹಳೆ ಕಾಲದ ಕಲಾಬತ್ತಿ ಮಗುಟಾನೇ ಶಿಷ್ಯರುಗಳ ಜೊತೆ ಹಂಚ್ಕಂಡಿರ್ಬೇಕು ಅಂದ್ರೆ ಯಾವ ಸೀಮೆ ನ್ಯಾಯ?'' ಅಂತ ಹೇಳಿ ಹಸಿವಿನ ಸಂಕಟ ತಾಳ್ದೇ ಗುರುಗೋಳ್ಪಕ್ಕದಲ್ಲೇ ಇನ್ನೊಂದ್ ಮುರ್ಕಲು ಚಾಪೆ ಹಾಸಿ ಶಯನೋತ್ಸವಕ್ಕೆ ತಾನೂ ಸಿದ್ಧವಾದ. ಎಂದೂ ಇಷ್ಟೊಂದು ಉದ್ದುದ್ದ ವಾಕ್ಯಪದ ಪ್ರಯೋಗವನ್ನ ಯಾವಯಾವುದೋ ಕಾಮಾನಂದ ರಸಾನಂದ ಪ್ರೇಮಾನಂದ ಇತ್ಯಾದಿ ಸ್ವಾಮಿಗಳ ಬಗ್ಗೆ ಅಷ್ಟೋ ಇಷ್ಟೋ ತಿಳ್ದು ಈ ಪರಿ ಮಾತುಗಳನ್ನ ದೊಡ್ಡ ಪ್ರಮಾಣದಲ್ಲಿ ಮಂಕ ಆಡಿದ್ದು ಗುರುಗಳನ್ನು ಬೆಚ್ಚಿಬೀಳುವಂತಾಗಿಸಿತ್ತು. ಇವನೇನು ನಿಜಕ್ಕೂ ಬುದ್ಧಿ ಜೀವಿಯ ತುಂಡೋ ಅಥವಾ ಹೊಟ್ಟೆಪಾಡಿನಿಂದಾಗಿ ಉಂಟಾದ ನಿರ್ವಾತ

ಪ್ರಯೋಗವೋ ಎಂಬ ಸಂದೇಹದಲ್ಲಿ ಬಿದ್ದರು. ಒಂದು ಕಾಲದಲ್ಲಿ ಸ್ಥಿರವಾದ ಆಸ್ತಿ ಸಾಕಷ್ಟು ಭಕ್ತರೊಲಿದಿದ್ದ ಗಾಂಪರ ಶುಂಠೇಶ್ವರ ಮಠ ಈ ದಿವಾಳಿ, ಪರಿಸ್ಥಿತಿದೆ ಎಂದಿದ್ದು ಕಾಕತಾಳವೇನೂ ಆಗಿರಲಿಲ್ಲ. ಜನರಿಗೆ ಗುರುಗಳಲ್ಲಿ ಭಕ್ತಿ ಎಂದೋ ಮಾಯವಾಗಿ ಈಗಿನ ಬೆರಗಿನ ಪಾಶ್ಚಿಮಾತ್ಯ ಲೋಕದ ಅತಿಯಾದ ಅನುಕರಣೆ ಹಣದ ವಿಪರೀತ ವ್ಯಾಮೋಹ ಯುವಪೀಳಿಗೆಯ ಪ್ರಕ್ಷುಭ ಮನೋಸ್ಥಿತಿ ಈ ರೀತಿ ಕಾಡಿಸುತ್ತಾ ನ್ಯಾಯ ಧರ್ಮ ಉಳಿಸಲಿಕ್ಕಾಗಿ ಹಾಗೂ ಯಾರನ್ನು ಏನಕ್ಕೂ ಬೇಡದ ಈ ಮಠ ಅಧೋಗತಿಗೆ ಬಂದಿತ್ತು. ಎಷ್ಟೇ ಬಡವಾದರೂ ಮಠ ತನ್ನ ಸಾರ್ವಕಾಲಿಕ ನೀತಿಯಾಗಿ ಯಾರನ್ನು ಬೇಡದೆ ಮುನ್ನಡೆಸಬೇಕೆಂಬ ಹಠ ಬುದ್ಧಿಯಲ್ಲಿ ಬಡವಾದರೂ ಈ ಶಿಷ್ಯರನ್ನು ಪಾಲಿಸಿಕೊಂಡು ಬಂದಿತ್ತು.

ಆ ಕ್ಷಣಕ್ಕೆ ಮುಂಬಾಗಿಲು ತಟ್ಟಿದ ಶಬ್ದ ಎಲ್ಲರನ್ನು ಬೆರಗಾಗಿಸಿತ್ತು. ಈ ವೇಳೆಯಲ್ಲಿ ಯಾರೇ ಬಂದರು ಭಕ್ತಾದಿಗಳಿಗೆ ಊಟ ಹಾಕುವ ಸಂಪ್ರದಾಯ ಮುಂಚಿನಿಂದಲೂ ಬಂದಿದ್ದು ಇದೀಗ ಮಠವೇ ಭಿಕ್ಷಾನ್ನಕ್ಕೆ ಹೋಗುವಂತೆ ಇದ್ದಾಗ ಅತಿಥಿಗಳಿಗೇನು ಉಪಚಾರ ಹೇಗೆ ಎಂದು ಎಲ್ಲರನ್ನು ಕಾಡಿಸಿದ್ದರೇ ಆಶ್ಚರ್ಯವೇನು? ಮಂಕ ಹೋಗಿ ಬಾಗಿಲು ತೆಗೆದು ಬಾಗಿಲಲ್ಲಿದ್ದ ಇಬ್ರು ಪೈಲ್ವಾನರಂತವರನ್ನ ನೋಡಿ ಬೆದರಿದ್ದ. ಆದರೆ ಅಭಾಗ್ಯತರಲ್ಲವೆಂದು ಗುರುಗಳನ್ನೇ ನೋಡಲಿಕ್ಕ ಬಂದವೆಂದು ಹೇಳಿದ ಮೇಲೆ ನಿರಾಳವಾಗಿ ಗುರುವಿನ ಬಳಿ ಕರೆತಂದ ಉಭಯ ಕುಶಲೋಪರಿ. ನಂತರ ಅಲ್ಲಿಯ ರಾಜಕೀಯ ಧುರೀಣರೊಬ್ಬರ ಆದೇಶದಂತೆ ಮುಂದೆ ಅವರ ನಾಯಕ ನಡೆಸಲಿರುವ ಪಕ್ಷದ ಸಮಾವೇಶಕ್ಕೆ ಗುರುಗಳು ಬಂದು ಆಶೀರ್ವದಿಸಬೇಕೆಂದು ಜನರಿಗೆ ಆತನ ಪರವಾಗಿ ವೋಟು ಹಾಕುವಂತೆ ಆದೇಶಿಸಬೇಕೆಂದು ಕೋರಿ ಬಂದವರೆಂದು ತಿಳಿದು ಬಂತು. ಮಠಕ್ಕಾಗಿ ಇರಲಿ ಎಂದು ಆತನಿಂದ ಇವರ ಮೂಲಕ ಒಂದು ಮೂಟೆಯಷ್ಟು ಅಕ್ಕಿ ಜೊತೆಗೆ ಇತರ ಸಾಮಾಗ್ರಿಗಳನ್ನು ಕೊಟ್ಟು ಗುರುಗಳ ಪಾದಕ್ಕೆ ಎರಗಿ ಮತ್ತೆ ಗುರುಗಳಾಗಲಿ ಶಿಷ್ಯರಾಗಲಿ ಏನು ಮಾತಾಡಲಿಕ್ಕೆ ಅವಕಾಶ ಕೊಡದೆ ಅಲ್ಲಿಂದ ಹೊರಬಿದ್ದಿದ್ದರು. ಸ್ವಲ್ಪ ಹೊತ್ತು ಯಾರಿಗೂ ಬಾಯಿ ತಿರುಗಲಿಲ್ಲ ಮೌನ ಆವರಿಸಿತ್ತು. ಮರುಳ ಕುದುರೆಯಂತೆ ಹೀಂಕರಿಸಿ ಕೇಕೆ ಹಾಕುವಂತೆ ''ಗುರುಗಳೇ ನೀವು ಯಾವ ಜನ್ಮದಲ್ಲಿ ಮಾಡಿದ ತಪಸ್ಸೋ ಏನೊ ಇಂದು ನಮಗೆಲ್ಲ ಆ ಶುಂಠೇಶ್ವರ ಊಟ ಕರುಣಿಸಿಬಿಟ್ಟ. ಈಗಲೇ ಸ್ನಾನ ಮಾಡಿ ಅಡಿಗೆಗಿಟ್ಟು, ಸಂಜೆ ಪೂಜೆ ಆಗುತ್ತಿದ್ದಂತೆ ಗುರುಗಳಿಗೆ ಪೊಂಗಲ್ ಪಾಯಸ ಮತ್ತು ಎಲ್ಲರಿಗೂ ಬಿಸಿ ಊಟ ಸಿದ್ಧ ಮಾಡಿಬಿಡುವೆ ಎನ್ನುತ್ತಾ ಅಡಿಗೆ ಮನೆ ಕಡೆ ಹೊರಟ. ಕ್ಷೀಣವಾಗಿದ್ದ ಉಸಿರನ್ನು ಆದಷ್ಟೂ ಗಡುಸು ಮಾಡಿ ಗುರುಗಳು ಮಲಗಿದ್ದಲಿಂದಲೆ ಕೂಗಿ ಹೇಳಿದರು. ''ಮರುಳಾ, ತಾಳು, ಅವೆಲ್ಲಾವನ್ನು ಮೊದಲು ಉಗ್ರಾಣದಲ್ಲಿ ಹಾಕಿ ಬಾ ನಮ್ಮ ಊಟಕ್ಕೆ ಅದರಿಂದ ಒಂದು ಕಾಳೂ ತೆಗೆಯಬಾರದು. ಇದು ನಮ್ಮ ಕಟ್ಟಪ್ಪಣೆ ಗುರುವಾಜ್ಞೆ ಎಚ್ಚರವಿರಲಿ. ಅದರಿಂದ ಇಲ್ಲಿಗೆ ಬರುವ ಭಕ್ತಾದಿಗಳಿಗಷ್ಟೇ ಆಹಾರವಾಗಬೇಕು, ತಿಳಿಯಿತೇ ಶಿಷ್ಯರುಗಳಾ?'' ಅಷ್ಟು ಮಾತಾಡಿ ಇನ್ನಷ್ಟು ಆಯಾಸಪಟ್ಟು ನಿತ್ರಾಣರಾಗಿ ಮತ್ತೆ ಮೊಗ್ಗಲಾ ಮಲಗಿದರು ಮಠಾಧೀಶರು. ಒಂದು ಕ್ಷಣ ನಿಶ್ಶಬ್ದ ಮಂಕ ಮರುಳ ಮಡೆಯ ಶುಂಠ ಎಲ್ಲರು ಎಂದು ಕಾಣದ ಹಸಿವಿನಿಂದ ಮತ್ತಷ್ಟು ನರಳಿದರು ಗುರುವಾಜ್ಞೆ ಮೀರುವಂತಿರಲಿಲ್ಲ.

ಮಡೆಯ ಸ್ವಲ್ಪ ಹೊತ್ತು ಸುಮ್ಮನಿದ್ದು ಎಲ್ಲರಿಗೂ ಸಣ್ಣ ಧ್ವನಿಯಲ್ಲಿ ಹೇಳಿದ. ''ಆ ಗ್ರಾಸ ಪುಢಾರಿಯನ್ನು ಗೆಲ್ಲಿಸಲು ಜನರಿಗೆ ವೋಟು ಹಾಕುವಂತೆ ಪುಸಲಾಯಿಸಲು ಮಠಕ್ಕೆ ಕೊಟ್ಟ ಲಂಚ ಆ ಪುಢಾರಿ ಸರ್ಕಾರಿ ಹಣವನ್ನ ಸೂರೆಮಾಡಿದವನು, ಅವನಿಂದ ಏನು ಪಡೆದರೂ ನಮ್ಮ ಮಠದ ನೀತಿ ನಿಯಮಗಳನ್ನು ಹರಾಜಿಗೆ ಹಾಕಿದಂತೆ. ಆ ಕಾರಣಕ್ಕೆ ಗುರುಗಳು ಭಕ್ತಾದಿಗಳಿಗೆ ವಿನಿಯೋಗವಾಗಲಿ, ಅದು ಏನಿದ್ದರು ಜನಗಳಿಗೆ ಸೇರಿದ್ದು ನಾವು ಸ್ವೀಕರಿಸಿದರೆ ಅವನ ಎಂಜಲು ಕಾಸಿಗೆ ಕೈ ಒಡ್ಡಿದಂತಾಗುತ್ತದೆ. ಅವನ ಪ್ರಚಾರಕ್ಕೆ ಗುರುಗಳಂತೂ ಏನೇ ಕೊಟ್ಟರು ಹೋಗುವವರಲ್ಲ ಇನ್ನು ಆಶೀರ್ವಾದ ಯಾರಿಗೆ?'' ಮಠದ ವಾತಾವರಣದಲ್ಲಿ ಸ್ಮಶಾನ ಮೌನ ಮೂಡಿತ್ತು. ಸಂಜೆ ಸೂರ್ಯನೂ, ಅಯ್ಯೋ, ಎನ್ನುವಂತೆ ನಿಧಾನವಾಗಿ ಪಶ್ಚಿಮ ದಿಗಂತವನ್ನ ಸೇರುತ್ತಿದ್ದ.

✸